ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಪ್ಲಾಟಿನಂ ಜ್ಯೂಬಿಲಿ
ನೆನಪಿನ ದತ್ತಿ ಪ್ರಕಟಣೆ

ಶತಕದ ಸಂಭ್ರಮದಲ್ಲಿ ಭಾರತದ ಸಹಕಾರ ಕ್ಷೇತ್ರ

ನಾರಾಯಣಯಾಜಿ ಶಿರಾಲಿ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦ ೦೧೮

ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಪ್ಲಾಟಿನಂ ಜ್ಯೂಬಿಲಿ
ನೆನಪಿನ ದತ್ತಿ ಪ್ರಕಟಣೆ

ಶತಕದ ಸಂಭ್ರಮದಲ್ಲಿ ಭಾರತದ ಸಹಕಾರ ಕ್ಷೇತ್ರ

ನಾರಾಯಣಯಾಜಿ ಶಿರಾಲಿ

ಶುಭವಾಗಲಿ
ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು- ೫೬೦೦೧೮

SHATAKADA SAMBRAMADALLI
BHARATADA SAHAKAARA KSHETRA
by : Sri Narayana yaaji Shiraali
Published by : Kannada Sahitya Parishat
Pampa Mahakavi Road, Chamarajapet, Bangalore - 560018
Pages : 58+iv Price : Rs. 25=00 : 2004

ಪ್ರಥಮ ಮುದ್ರಣ : ೨೦೦೪
ಪ್ರತಿಗಳು : ೧೦೦೦
ಬೆಲೆ : ಇಪ್ಪತ್ತೈದು ರೂಪಾಯಿಳು

ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಪ್ಲಾಟಿನಂ ಜ್ಯೂಬಿಲಿ
ಸೆನಪಿನ ದತ್ತಿ ಪ್ರಕಟಣೆ

ಅಧ್ಯಕ್ಷರು

ಧರ್ಮದರ್ಶಿ ಹರಿಕೃಷ್ಣ ಪುನರೂರು

ಮುದ್ರಣ : ಬಿ. ಎಂ. ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು,
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮

ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಭಾಷೆ, ಸಂಸ್ಕೃತಿ, ನಾಡು-ನುಡಿಯ ಸಂರಕ್ಷಣೆ, ಸಂವರ್ಧನೆಗಾಗಿ ಶ್ರಮಿಸುತ್ತಿರುವ ಏಕೈಕ ಸಂಸ್ಥೆ. ಸುಮಾರು ೮೯ ವರ್ಷಗಳ ದೀರ್ಘಕಾಲದ ಇತಿಹಾಸ ಹೊಂದಿರುವ ಪರಿಷತ್ತು ಅನೇಕ ಸಾಹಿತ್ಯ ಕೃತಿಗಳ ಪ್ರಕಟಣಕಾರ್ಯ ಪ್ರಧಾನವಾದುದಾಗಿದೆ. ಈ ಹಿಂದಿನ ಹಲವಾರು ಮಹನೀಯರ ಪ್ರಯತ್ನದ ಫಲವಾಗಿ ಸುಮಾರು ೧೦೦೦ಕ್ಕೂ ಹೆಚ್ಚು ಕೃತಿಗಳನ್ನು ಪರಿಷತ್ತು ಹೊರತಂದಿದೆ. ಈ ಕೃತಿಗಳು ಸಾಹಿತ್ಯ ಕ್ಷೇತ್ರದ ಎಲ್ಲ ಪ್ರಕಾರಗಳಿಗೂ ಸಂಬಂಧಿಸಿವೆ.

ಕನ್ನಡ ಜನತೆಗೆ ಉತ್ತಮ ಸಾಹಿತ್ಯವನ್ನು ನೀಡುವ ಸಲುವಾಗಿ ಅತ್ಯಂತ ಸುಲಭ ಬೆಲೆಯಲ್ಲಿ ಈ ಪುಸ್ತಕಗಳನ್ನು ಒದಗಿಸಲಾಗಿದೆ. ಸಾಹಿತ್ಯಾಭಿಮಾನಿಗಳ ವಾಚನಾಭಿರುಚಿಯನ್ನು ಬೆಳೆಸುವುದರ ಮೂಲಕ ಜ್ಞಾನ ಪ್ರಸಾರ ಮಾಡುವುದು ನಮ್ಮ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿದೆ. ಈ ದಿಕ್ಕಿನಲ್ಲಿ ಅನೇಕ ದಾನಿಗಳು ಉತ್ತಮ ವೈಚಾರಿಕ ಕೃತಿಗಳ ಪ್ರಕಟಣೆಗಾಗಿ ಪರಿಷತ್ತಿನಲ್ಲಿ ದತ್ತಿಗಳನ್ನು ಸ್ಥಾಪಿಸಿ, ಆ ದತ್ತಿಯ ಮೂಲದಿಂದ ಬರುವ ಬಡ್ಡಿಯ ಹಣದಿಂದ ಪ್ರತಿವರ್ಷವೂ ಒಂದೊಂದು ಅತ್ಯುಪಯುಕ್ತ ಗ್ರಂಥವೊಂದನ್ನು ಪ್ರಕಟಿಸುವುದಕ್ಕೆ ಅನುವು ಮಾಡಿಕೊಟ್ಟಿದ್ದಾರೆ.

ಪ್ರಸ್ತುತ ಈ ಕೃತಿಯನ್ನು ಸಿದ್ಧಪಡಿಸಿರುವ ಶ್ರೀ ನಾರಾಯಣಯಾಜಿ ಶಿರಾಲಿ ಅವರಿಗೆ ಧನ್ಯವಾದಗಳು. **'ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಪ್ಲಾಟಿನಂ ಜ್ಯೂಬಿಲಿ ನೆನಪಿನ ದತ್ತಿ ಪ್ರಕಟಣೆ'** ನೆರವಿನಿಂದ ಪ್ರಕಟವಾಗಿದೆ. ಇವರಿಗೆ ನನ್ನ ಕೃತಜ್ಞತೆಗಳು. ಸಹೃದಯ ಓದುಗರು ಈ ಗ್ರಂಥವನ್ನು ಆದರದಿಂದ ಸ್ವೀಕರಿಸುತ್ತಾರೆಂದು ಆಶಿಸುತ್ತೇನೆ. ಅಚ್ಚುಕಟ್ಟಾಗಿ ಮುದ್ರಿಸಿದ ಮುದ್ರಣಾಲಯಕ್ಕೂ ಪ್ರೀತಿ ಪೂರ್ವಕ ವಂದನೆಗಳು.

ಧರ್ಮದರ್ಶಿ ಹರಿಕೃಷ್ಣ ಪುನರೂರು
ಅಧ್ಯಕ್ಷರು

ಲೇಖಕರ ಮಾತು

ಕೂಡಿ ಉಂಡು ಕೂಡಿ ಬಾಳುವದೇ 'ಸಹಕಾರ'. ಈ 'ಸಹಕಾರ' ವನ್ನು ಕಾಗೆ, ಕೋಳಿ, ಜೇನು, ಇರುವೆಗಳಲ್ಲೂ ಕಾಣಬಹುದಾಗಿದೆ. ಸಹಕಾರ ತತ್ವ ವಿಶ್ವವ್ಯಾಪಿಯಾಗಿದ್ದು, ವಿಶ್ವಮಾನ್ಯತೆ ಪಡೆದಿದೆ! ಭಾರತದಲ್ಲಿ ಸಹಕಾರ ಕ್ಷೇತ್ರ ಶತಮಾನದ ಸಂಭ್ರಮದಲ್ಲಿದೆ.

ಮಾತು ಬಲ್ಲವನಿಗೆ ಜಗಳವಿಲ್ಲ, ಊಟಬಲ್ಲವನಿಗೆ ರೋಗವಿಲ್ಲ ಎಂಬಂತೆ, 'ಸಹಕಾರ ಬಲ್ಲವನಿಗೆ ಸಮಸ್ಯೆಗಳಿಲ್ಲ' ಎಂಬುದೂ ಅಷ್ಟೇ ಸತ್ಯ!! ಸಹಕಾರವಿರುವ ರಾಜಕೀಯ, ರಾಜಕೀಯವಿಲ್ಲದ ಸಹಕಾರ ಎಂದೆಂದೂ, ಎಲ್ಲೆಡೆಯೂ ಬೇಕು. ಅಂತೆಯೇ, 'ನಾನು ಎಲ್ಲರಿಗಾಗಿ, ಎಲ್ಲರೂ ನನಗಾಗಿ ಎನ್ನುವದನ್ನು ಎಲ್ಲರೂ ತಮ್ಮ "ಜೀವನದ ಮಂತ್ರ" ವನ್ನಾಗಿಸಿದರೆ, 'ಸರ್ವೇಜನಾಃ ಸುಖಿನೋ ಭವಂತು' ಅಕ್ಷರಶಃ ಆಗಿ, ಸಹಕಾರ ಕ್ಷೇತ್ರದ ಜಯಭೇರಿ ಖಂಡಿತಾ!!!

ಈಚಿನ ಕೆಲವು ವರ್ಷಗಳಲ್ಲಿ ಸಹಕಾರ, ಬ್ಯಾಂಕಿಂಗ್, ಆರೋಗ್ಯ ಇತ್ಯಾದಿಗಳ ಬಗ್ಗೆ ನಾನು ಬರೆದ ಲೇಖನಗಳನ್ನು ಕನ್ನಡ ಸಾಹಿತ್ಯ ಪರಿಷತ್ತು, ಅಪೆಕ್ಸ್ ಬ್ಯಾಂಕಿನ ದತ್ತಿನಿಧಿಯೋಜನೆಯಡಿಯಲ್ಲಿ ಸಂಕಲನದ ರೂಪದಲ್ಲಿ ಪ್ರಕಟಿಸುತ್ತಿರುವದು ನನ್ನ ಸುಯೋಗ-ನನ್ನ ಹಿರಿಯರು ಮಾಡಿದ ಪುಣ್ಯ.

ಸಹಕಾರ ಕ್ಷೇತ್ರ ಭಾರತದಲ್ಲಿ ಸರಿಯಾಗಿ ಒಂದುನೂರು ವರ್ಷ ನಿರಂತರವಾಗಿದ್ದು, ಶತಮಾನದ ಸಂಭ್ರಮದಲ್ಲಿರುವ ಈ ಸುಸಂದರ್ಭದಲ್ಲಿ, ತುಂಬ ತುಂಬ ಸಕಾಲದಲ್ಲಿ ನನ್ನ ಈ "ಶತಕದ ಸಂಭ್ರಮದಲ್ಲಿ ಭಾರತದ ಸಹಕಾರ ಕ್ಷೇತ್ರ" ಕೃತಿಯನ್ನು ಪ್ರಕಟಿಸುತ್ತಿರುವುದಕ್ಕೆ, ಸಂಬಂಧಿಸಿದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು, ಎಲ್ಲ ಅಧಿಕಾರಿಗಳು ಮತ್ತು ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷರು ಮತ್ತು ಸಂಬಂಧಿಸಿದ ಎಲ್ಲ ಅಧಿಕಾರಿಗಳಿಗೆ ನಾನು ಕೃತಜ್ಞನಾಗಿದ್ದೇನೆ.

ಭಾರತದಲ್ಲಿ, ಕರ್ನಾಟಕದಲ್ಲಿ, ಸಹಕಾರ ಕ್ಷೇತ್ರ ಸಾಧಿಸಿದ್ದು ಬಹಳಷ್ಟು, ಸಾಧಿಸಬೇಕಾದುದು ಇನ್ನು ಬಹಳಷ್ಟು.... ಮರೆಯುವಂತಿಲ್ಲ. ನನ್ನ ಈ ಕೃತಿಯ ಓದಿನಿಂದ ಆ "ಇನ್ನು ಬಹಳಷ್ಟನ್ನು" ಸಾಧಿಸಲು ಸಹಾಯವಾದರೆ ನನ್ನ ಶ್ರಮ ಸಾರ್ಥಕ. ನನ್ನ ಈ ಪ್ರಯತ್ನದಲ್ಲಿ ಸಹಕಾರ ನೀಡಿದ ಎಲ್ಲರಿಗೂ ಹಾರ್ದಿಕ ಧನ್ಯವಾದಗಳು.

ನಾರಾಯಣಯಾಜಿ ಶಿರಾಲಿ.

ಸಹಕಾರ ಕ್ಷೇತ್ರ ಶತಮಾನ ಪೂರೈಸುತ್ತಿದೆ ಸಾಧನೆ - ಸವಾಲು-ಪರಿಹಾರ

'ಸಹಕಾರ' ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಭಾರತೀಯರು ಸಂಕಲ್ಪ ಮಾಡಿ ಕಾಯಾ, ವಾಚಾ, ಮನಸಾ ಆ ದಿಶೆಯಲ್ಲಿ ದುಡಿದರೆ ಭಾರತವನ್ನು ಕೆಲವು ವರ್ಷಗಳಲ್ಲೇ ಒಂದು ಸದೃಢ, ಸ್ವಾವಲಂಬೀ, ಸುಖೀ ರಾಷ್ಟವನ್ನಾಗಿ ಮಾಡಬಹುದು.

'ಸಹಕಾರ' ಎಂದರೇನು?

'ಸಹಕಾರ' ಎಂದರೆ ಕೂಡಿ ಕೆಲಸ ಮಾಡುವುದು, ಒಬ್ಬರಿಗೊಬ್ಬರು ಕೂಡಿ ಕೆಲಸ ಮಾಡುವುದರಿಂದ ಅಪೇಕ್ಷಿತ ಕೆಲಸವಾಗಿ ಬಾಳು ಸುಖವಾಗುತ್ತದೆ, ಸಹ್ಯವಾಗುತ್ತದೆ, ಜೀವನ ಮಧುರವಾಗುತ್ತದೆ.

"ನಾನು ಎಲ್ಲರಿಗಾಗಿ
ಎಲ್ಲರೂ ನನಗಾಗಿ"

ಇದುವೇ ಸಹಕಾರದ ಮಂತ್ರ.

"ಸಾಮಾಜಿಕ ಕಳಕಳಿಯೇ ಸಹಕಾರದ ಬುನಾದಿ
ಶೋಷಿತರನ್ನು ಮೇಲೆತ್ತುವುದೇ ಸಹಕಾರದ ಗುರಿ"

ಮರೆಯುವಂತಿಲ್ಲ.

ಈ 'ಸಹಕಾರ'ವನ್ನು ಮನೆಗಳಲ್ಲಿ ಗಂಡ-ಹೆಂಡತಿ ಮಧ್ಯೆ, ತಂದೆ-ತಾಯಿ-ಮಕ್ಕಳ ಮಧ್ಯೆ, ದೇಶ-ದೇಶಗಳ ಮಧ್ಯೆ, ಜಾತಿ-ಜಾತಿಗಳ ಮಧ್ಯೆ....ಹೀಗೆ ಎಲ್ಲೆಲ್ಲೂ ಕಾಣಬಹುದು. ಅದು ಎಲ್ಲ ಕ್ಷೇತ್ರಗಳಲ್ಲೂ ಇದೆ:

"ಆಡು ಮುಟ್ಟದ ಸೊಪ್ಪಿಲ್ಲ
ಸಹಕಾರವಿಲ್ಲದ ಕ್ಷೇತ್ರವಿಲ್ಲ" ಎಂಬಂತೆ!

'ಸಹಕಾರ'ದ ಬಳಕೆ, ಅನುಷ್ಠಾನದಿಂದ

"ಊಟ ಬಲ್ಲವನಿಗೆ ರೋಗವಿಲ್ಲ
ಮಾತು ಬಲ್ಲವನಿಗೆ ಜಗಳವಿಲ್ಲ"

ಎಂಬಂತೆ, 'ಸಹಕಾರ ಬಲ್ಲವನಿಗೆ ಸಮಸ್ಯೆಗಳಿಲ್ಲ'!

'ಸಹಕಾರ'ದ ಆರಂಭ

ಸಹಕಾರ ತತ್ವದ ಗುರು ನಮ್ಮ ದೇಶ, ಭಾರತ. ನಮ್ಮಿಂದ ಬೇರೆ ಬೇರೆ ರಾಷ್ಟ್ರದವರು ಸಹಕಾರತತ್ವವನ್ನು ಸುಮಾರು ಒಂದುನೂರಾಐವತ್ತು ವರ್ಷಗಳಷ್ಟು ಹಿಂದೆನೇ ಕಲಿತು ಸಹಕಾರೀ ಸಂಘ, ಸಂಸ್ಥೆ ಸ್ಥಾಪನೆ ಮಾಡಿದರು. ಹೀಗೆ ವಿಶ್ವದಲ್ಲಿ ಜಪಾನ್ ದೇಶ ಅತ್ಯಂತ ಪ್ರಮುಖ 'ಸಹಕಾರದ ರಾಷ್ಟ್ರ' ಎಂದು ಪ್ರಸಿದ್ಧಿ ಹೊಂದಿದೆ.

ಆಶ್ಚರ್ಯ ಎಂದರೆ ನಮ್ಮ ದೇಶ 'ಸಹಕಾರದ ಗುರು' ಆದರೂ ನಮ್ಮ ದೇಶದಲ್ಲಿ ೧೯೦೪ರಲ್ಲಿ ಸಹಕಾರ ಚಳುವಳಿ ಬ್ರಿಟಿಷ್ ಕಾನೂನು ಮೂಲಕ ಪ್ರಾರಂಭವಾಯಿತು. ಅಂದರೆ ೨೦೦೪ರಲ್ಲಿ ನಾವು ಸಹಕಾರ ಕ್ಷೇತ್ರ ನಮ್ಮ ದೇಶದಲ್ಲಿ ಪ್ರಾರಂಭವಾದ ನೂರು ವರ್ಷ ಪೂರ್ತಿಯಾದ ಶತಮಾನೋತ್ಸವ ಆಚರಿಸುತ್ತಿದ್ದೇವೆ. ದಿನಾಂಕ ೦೮.೦೫.೧೯೦೫ನೇ ಸೋಮವಾರ ಬೆಳಿಗ್ಗೆ ೯.೦೫ ಗಂಟೆಗೆ ಗದಗ ಜಿಲ್ಲೆಯ ಕಣಗಿನಹಾಳ ಗ್ರಾಮದಲ್ಲಿ ಈ ರಾಷ್ಟ್ರದ ಪ್ರಪ್ರಥಮ ಕೃಷಿ ಪತ್ತಿನ ಸಹಕಾರ ಸಂಘವು ನೋಂದಾಯಿಸಲ್ಪಟ್ಟಿತು – ಈ ಸಂಘದ ಸಂಸ್ಥಾಪಕ ಅಧ್ಯಕ್ಷರು ಶ್ರೀ ಶಿದ್ದನಗೌಡ ಸಂಣರಾಮನ ಗೌಡ ಪಾಟೀಲರು – ಇಂತಹ ದಾಖಲೆ ಕೆಲಸ ಮಾಡಿದ ಈ ಸನ್ಮಾನ್ಯರು ನಿಜಕ್ಕೂ ಮರೆಯಲಾರದವರು, ಪ್ರಾತಃಸ್ಮರಣೀಯರು! (ಮಾಹಿತಿಯ ಮೂಲ : 'ಸಹಕಾರ' ಪತ್ರಿಕೆಯ ವಿಶೇಷ ಸಂಚಿಕೆ, ದಿನಾಂಕ ೧೪.೧೧.೯೯, ಪುಟ ೧೬). ಬಂಡವಾಳವಾದಕ್ಕಿಂತ ಸಹಕಾರ ತತ್ವವೇ ಅತ್ಯುತ್ತಮ ಎಂದು ಮನಗಂಡು ಸಹಕಾರ ಚಳುವಳಿಯನ್ನು ಕರ್ನಾಟಕ ರಾಜ್ಯದಲ್ಲಿ 'ನಾಂದಿ' ಹಾಡಿದ ಈ ಮಹಾನುಭಾವರಿಂದಾಗಿ ಈ ದೇಶಾದ್ಯಂತದ ರೈತರ ಬೆಳವಣಿಗೆಗೆ, ನೆಮ್ಮದಿಗೆ, ಸುಖ–ಶಾಂತಿಗೆ ಕಾರಣ ಆಗಿದೆ!

"ಸಹಕಾರ ತತ್ವ ದುರ್ಬಲರ ರಕ್ಷಾ ಕವಚವೇ ಹೊರತು
ಸಬಲರ ಆಯುಧ ಅಲ್ಲ"

ಮರೆಯುವಂತಿಲ್ಲ.

ಸಾಧನೆಗಳು

'ಸಹಕಾರ' ಕ್ಷೇತ್ರದ ಸಾಧನೆ ಕಮ್ಮಿ ಏನಲ್ಲ. ಇಂದು ಭಾರತದಲ್ಲಿ ೩೦ ರಾಜ್ಯಮಟ್ಟದ ಅಪೆಕ್ಸ್ ಬ್ಯಾಂಕುಗಳು, ೩೬೮ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು, ೧,೦೧,೫೪೫ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಇದ್ದು, ಈ ಸಹಕಾರ ಸಂಸ್ಥೆಗಳಲ್ಲಿ ಸುಮಾರು ೧೧.೮೮ ಕೋಟಿ ಸದಸ್ಯರಿದ್ದಾರೆ. ಈ ಸಹಕಾರ ಸಂಸ್ಥೆಗಳಲ್ಲಿ ೨,೦೩,೮೪೨ ಪ್ರಾ.ಕೃ.ಪ.ಸಂಘಗಳಲ್ಲಿ ೧,೧೪,೭೫೭ ಡಿ.ಸಿ.ಸಿ. ಬ್ಯಾಂಕುಗಳಲ್ಲಿ ಹಾಗೂ ೧೬,೧೯೯ ರಾಜ್ಯಮಟ್ಟದ ಅಪೆಕ್ಸ್ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ನೌಕರರ ಮಾಹಿತಿ ೩೧.೩.೨೦೦೦ದ ದಿನಕ್ಕಿದ್ದು, ಈಚಿನ ವರ್ಷಗಳಲ್ಲಿ ಇನ್ನೂ ಸುಮಾರು ೪೦,೦೦೦ ಜನ ಈ ಸಂಸ್ಥೆಗಳಲ್ಲಿ ನೌಕರರಾಗಿ ಕೆಲಸಕ್ಕೆ ಸೇರಿದ್ದಾರೆ (ಈ ಮಾಹಿತಿಯ ಮೂಲ : ನ್ಯಾಫ್ ಸ್ಕ್ಯಾಬ್ ಬುಲೆಟಿನ್ ಜನವರಿ–ಮಾರ್ಚ್ ೨೦೦೨ರ ಸಂಚಿಕೆ, ಪುಟ ೫೭) ಎಂದು ನಂಬಲಾಗಿದೆ.

ಭಾರತದ ಎಲ್ಲ ರಾಜ್ಯಗಳಲ್ಲೂ ಸಹಕಾರ ಸಂಘ ಸಂಸ್ಥೆಗಳಿವೆ. ಅದರಲ್ಲಿ ಗುಜರಾತ್ ರಾಜ್ಯವು 'ಅಮುಲ್' (ಆನಂದ ಮಿಲ್ಕ್ ಯೂನಿಯನ್ ಲಿಮಿಟೆಡ್) ನಿಂದಾಗಿ ಮುಂಚೂಣಿಯಲ್ಲಿದೆ. ಮಹಾರಾಷ್ಟ್ರ, ಕರ್ನಾಟಕ, ಕೇರಳ, ತಮಿಳುನಾಡು... ಇವೂ ಸಹ ಈಗ ಪ್ರಮುಖ "ಸಹಕಾರೀ ರಾಜ್ಯ"ಗಳೆನಿಸಿವೆ. ಬೆಂಗಳೂರಿನ ಹಾಲು ಮಹಾಮಂಡಳದ 'ನಂದಿನಿ', ಮಂಗಳೂರಿನ 'ಕ್ಯಾಂಪ್ಕೋ', ಚಿಕ್ಕಮಗಳೂರಿನ ಬಳಿಯ (ಕೊಪ್ಪ ತಾಲ್ಲೂಕಿನ) ಕೊಪ್ಪದ ಸಹಕಾರ ಸಾರಿಗೆ, ಇವೆಲ್ಲ ನಮ್ಮ ರಾಜ್ಯಕ್ಕೆ ಒಳ್ಳೆಯ ಹೆಸರನ್ನು ತರುತ್ತಿರುವ ಸಹಕಾರ ಸಂಸ್ಥೆಗಳಾಗಿವೆ. ಉ.ಕ. ಜಿಲ್ಲೆಯ ಬೈರುಂಭೆ ಗ್ರಾಮದ ಸಹಕಾರ ಸಂಘ, ಸಿರಸಿಯ ತೋಟಗಾರ್ಸ್ ಸಹಕಾರ ಸಂಘ, ಉ.ಕ., ದ.ಕ., ಮತ್ತು ಕೊಡಗು ಜಿಲ್ಲಾ ಡಿಸಿಸಿ ಬ್ಯಾಂಕುಗಳು, ಬೆಂಗಳೂರಿನ ಅಪೆಕ್ಸ್ ಬ್ಯಾಂಕು ಇವೆಲ್ಲ ರಾಜ್ಯ, ರಾಷ್ಟ್ರಮಟ್ಟದಲ್ಲಿ ಖ್ಯಾತಿವೆತ್ತ ಬಹುಮಾನ, ಪ್ರಶಸ್ತಿ ಬಾಚಿಕೊಂಡ ಮತ್ತು ಬಾಚಿಕೊಳ್ಳುತ್ತಿರುವ ಕೆಲವು ಮುಖ್ಯ ಮಹಾನ್ ಸಹಕಾರ ಸಂಸ್ಥೆಗಳು! ಈ ಸಂಸ್ಥೆಗಳಲ್ಲಿ ದುಡಿಯುತ್ತಿರುವ ನೌಕರರು, ಅಲ್ಲಿಯ ಆಡಳಿತ ವರ್ಗ ನಿಜಕ್ಕೂ ಅಭಿನಂದನೆಗೆ ಅರ್ಹರು. ಇಂತಹ "ಸಹಕಾರ ಸಂಸ್ಥೆಗಳು ಹೆಚ್ಚಲಿ, ಬಡಜನರ ಬಾಳಿನಲಿ ದೀಪ ಹಚ್ಚಲಿ."

ಸವಾಲುಗಳು

"ಸಾಧಿಸಿದ್ದು ಬಹಳಷ್ಟು

ಸಾಧಿಸಬೇಕಾದ್ದು ಇನ್ನೂ ಬಹಳಷ್ಟು"...

ಸುಳ್ಳಲ್ಲ.

ಎಲ್ಲರೂ ಒಗ್ಗೂಡಿ ಸಹಕಾರ ಕ್ಷೇತ್ರದಲ್ಲಿ ದುಡಿಯುತ್ತಾ, ಭಾರತ ದೇಶದ ಪ್ರಗತಿಗೆ ದಾಪುಗಾಲು ಇಡುತ್ತಿರುವಾಗ, ಧುತ್ತೆಂದು 'ಜಾಗತೀಕರಣ'ದ ದೆವ್ವ ಇತ್ತೀಚಿನ ವರ್ಷಗಳಲ್ಲಿ ಎದ್ದು ನಿಂತು, "ತಾಕತ್ತಿದ್ದರೆ ನನ್ನನ್ನು ಭೇದಿಸಿ ಮುಂದಕ್ಕೆ ಹೋಗಿ ನೋಡುವಾ...."! ಎನ್ನುತ್ತಿದೆ. ಇದರಿಂದಾಗಿ ಠೇವಣಿ ಸಂಗ್ರಹಣೆ, ಸಾಲ ವಸೂಲಿ, ಲಾಭ ಗಿಟ್ಟಿಸುವಿಕೆ,...ಇತ್ಯಾದಿಗಳ ಮೇಲೆ ತೀವ್ರತರ ಹೊಡೆತ ಬಿದ್ದಿದೆ. ಭಾರತದ ಜನಸಂಖ್ಯೆಯ ೪೦% ಜನರು ಇನ್ನೂ ಬಡತನ ರೇಖೆ (ಬಿಪಿಎಲ್)ಗಿಂತ ಕೆಳಗೆ ಇದ್ದು, ಅವರಿನ್ನೂ ಬಂಡವಾಳಶಾಹಿಗಳ ಕಪಿಮುಷ್ಠಿಯಲ್ಲೇ 'ಬಂಧನ'ದಲ್ಲಿದ್ದಾರೆ. ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆ, ರೈತ ಬೆಳೆದ ಬೆಳೆಗಳ ತೀವ್ರ ಇಳಿಕೆ, ಬೆಳೆಗಳಿಗೆ ರೋಗ-ರುಜಿನಗಳ ಹಾವಳಿ, ಅತಿವೃಷ್ಟಿ, ಅನಾವೃಷ್ಟಿ, ಬರಗಾಲ...ಇವುಗಳಿಂದಾಗಿ ಹಲವು ಗ್ರಾಮಗಳ ರೈತರ ಜೀವನವೇ ದುಸ್ತರವಾಗಿ, ರೈತ ಪಡೆದ ಸಾಲ ತೀರಿಸಲಾರದೇ ಅಲ್ಲಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳು ಈಚೆಗೆ ಜಾಸ್ತಿ ಆಗುತ್ತಿರುವುದು ನಿಜಕ್ಕೂ ಖೇದಕರ. ಸಹಕಾರ ಸಂಸ್ಥೆಗಳಲ್ಲೂ ಅನೇಕ ಕಡೆ ಸಾಲ ವಸೂಲಾಗದೇ ನಷ್ಟ ಉಂಟಾಗಿ ಅಂತಹ ಸಂಘ-ಸಂಸ್ಥೆಗಳ ಅಸ್ತಿತ್ವಕ್ಕೇ ಧಕ್ಕೆ ಬಂದಿದೆ! ಎಲ್ಲೆಲ್ಲೂ ಸ್ಪರ್ಧೆ, ಸ್ಪರ್ಧೆ, ಸ್ಪರ್ಧೆ (Competition)! ಹೀಗೆ ಸವಾಲುಗಳ ತಾಂಡವ ನೃತ್ಯವೇ ನಡೆಯುತ್ತಿದೆ !!

2

ಪರಿಹಾರ

'ಸಹಕಾರ' ಕ್ಷೇತ್ರದಲ್ಲಿರುವ ಇಂದಿನ 'ಸವಾಲು'ಗಳನ್ನು ತಿಳಿದು ಕಂಗಾಲಾಗಬೇಕಿಲ್ಲ, ಧೃತಿಗೆಡಬೇಕಿಲ್ಲ – ಪ್ರತಿಯೊಂದು ಸಮಸ್ಯೆಗೂ ಪರಿಹಾರ ಇದ್ದೇ ಇದೆ. "ಮನಸ್ಸು ಮಾಡಿದರೆ", "ದೃಢ ಸಂಕಲ್ಪ ಮಾಡಿದರೆ", ಈ ಸಮಸ್ಯೆಗಳನ್ನೆಲ್ಲ ಒದ್ದೋಡಿಸಬಹುದು. ಅಂತಹ ಪುಟ್ಟ ರಾಷ್ಟ್ರ ಜಪಾನ್ ಎರಡನೇ ಮಹಾಯುದ್ಧ ಕಾಲದಲ್ಲಿ ನಾಗಾಸಾಕಿ, ಹಿರೋಷಿಮಾನಗರಗಳನ್ನು ಬಾಂಬಿನಿಂದಾಗಿ ಕಳಕೊಂಡರೂ, ಜನರ ದೃಢ ಸಂಕಲ್ಪ, ಛಲಗಳಿಂದಾಗಿ ಕೆಲವು ವರ್ಷಗಳಲ್ಲೇ ಪುನಃ ಮುಂಚೆಗಿಂತ ಚೆನ್ನಾಗಿ ಅಭಿವೃದ್ಧಿ ಹೊಂದಿ ಎದ್ದು ನಿಂತಿಲ್ಲವೇ?! ಹಾಗಾಗಿ ಹೆದರೋದು ಬೇಡಾ. "ಕಾಲಾಯ ತಸ್ಮೈ ನಮಃ" ಎಂದು ಮುನ್ನುಗ್ಗುವುದೇ ಈಗ ಸಹಕಾರಿಗಳ ಕೆಲಸವಾಗಬೇಕು. ಬ್ಯಾಂಕಿಂಗ್ ರಂಗ ಬದಲಾಗುತ್ತಿಲ್ಲವೇ? ಬದಲಾಗುತ್ತಿದೆ – ಹಾಗೆನೇ ಸಹಕಾರೀ ರಂಗವು ಬದಲಾಗಬೇಕು. ಬದಲಾಗುತ್ತಿದೆ – ಕಂಪ್ಯೂಟರ್, ಅಂತರ್ಜಾಲ (ಇಂಟರ್‌ನೆಟ್), ದೂರವಾಣಿ ....ಇತ್ಯಾದಿ ಆಧುನಿಕ ತಂತ್ರಜ್ಞಾನ ಸಹಕಾರ ರಂಗದಲ್ಲೂ ಪಾದಾರ್ಪಣೆ ಮಾಡಿದೆ. ಹೀಗೆ ಕಾಲಕ್ಕೆ ತಕ್ಕಂತೆ ಬದಲಾಗುವದೇ ಜಾಣತನ!!

ಸಹಕಾರ ಸಂಘ ಸಂಸ್ಥೆಗಳ ಮೇಲೆ ಸರ್ಕಾರದ ಹಿಡಿತ ಕಡಿಮೆ ಆಗಬೇಕು ಎಂದೇ ಸರ್ಕಾರವು ಸೌಹಾರ್ದ ಕಾನೂನನ್ನು ಕರ್ನಾಟಕದಲ್ಲಿ ಜಾರಿಗೆ ತಂದಿದೆ. ಇದರ "ಸದ್ಬಳಕೆ" ಎಲ್ಲೆಡೆಯೂ ಆಗಬೇಕು.

ಸಹಕಾರ ಸಂಘ–ಸಂಸ್ಥೆಗಳಲ್ಲಿ ದುಡಿಯುವ ನೌಕರರು ನಿಷ್ಠೆ, ಪ್ರಾಮಾಣಿಕತೆ, ದಕ್ಷತೆಯಿಂದ ಕೆಲಸಮಾಡಿದರೆ, ಅಲ್ಲಿಯ ಆಡಳಿತ ವರ್ಗವೂ ನಿಷ್ಪಕ್ಷಪಾತ, ನಿಸ್ವಾರ್ಥಗಳಿಂದ ಅಹರ್ನಿಶಿ ದುಡಿದರೆ, ಅಂತಹ ಸಂಸ್ಥೆಗಳೆಲ್ಲ ಸವಾಲುಗಳಿಂದ ಮುಕ್ತವಾಗಿ ಅಭಿವೃದ್ಧಿ ಹೊಂದುವುದರಲ್ಲಿ ಸಂಶಯವಿಲ್ಲ.

"ಮನಸ್ಸಿದ್ದಲ್ಲಿ ಮಾರ್ಗವಿದೆ
ಸಹಕಾರವಿದ್ದಲ್ಲಿ ನೆಮ್ಮದಿ ಇದೆ."

ಹಿಂದೆಂದೂ ಕಂಡಿರದ, ಕೇಳಿರದ ಸವಾಲುಗಳನ್ನು ಇಂದು ಸಹಕಾರ ಕ್ಷೇತ್ರ ಎದುರಿಸುತ್ತಿದ್ದರೂ,

ಹಿಂದೆ ಗುರುವೂ ಇದ್ದ, ಗುರಿಯೂ ಇತ್ತು
ಸಾಗುತ್ತಿತ್ತು ವೀರರ ದಂಡು,
ಈಗ ಗುರುವೂ ಇಲ್ಲ, ಗುರಿಯೂ ಇಲ್ಲ
ಓಡುತ್ತಿದೆ ಕುರಿಗಳ ಹಿಂಡು!

ಎಂದೆಲ್ಲ ತಲೆ ಕೆಡಿಸಿಕೊಳ್ಳದೇ, "ಸತ್ಯಕ್ಕೆ ಸಾವಿಲ್ಲ, ದುಷ್ಟರಿಗೆ ಉಳಿವಿಲ್ಲ" ಎಂದೇ ನಂಬುವ ಭಾರತೀಯರಾದ ನಾವು 'ಪ್ರಯತ್ನವೇ ಪರಮೇಶ್ವರ' ಎಂದು ಧೈರ್ಯದಿಂದ ಮುನ್ನುಗ್ಗಬೇಕು – ದ.ರಾ. ಬೇಂದ್ರೆ ಅವರು ಹೇಳಿದ ಹಾಗೆ:

"ನಡೆ ಮುಂದೆ ನಡೆ ಮುಂದೆ
ನುಗ್ಗಿ ನಡೆ ಮುಂದೆ
ಹಿಗ್ಗದೆಯೇ ಕುಗ್ಗದೆಯೇ
ನುಗ್ಗಿ ನಡೆ ಮುಂದೆ..... " ಎಂಬಂತೆ!

"ಏಳಿ ಎದ್ದೇಳಿ ನಿಮ್ಮ ಗುರಿ
ತಲುಪುವವರೆಗೆ ನಿಲ್ಲಬೇಡಿ"

ಎಂಬ ಸ್ವಾಮಿ ವಿವೇಕಾನಂದರ ವಾಣಿಯಂತೆ !

"ಸಹಕಾರವಿದು ಶೋಷಣೆಗಲ್ಲ
ಸೇವೆಯಿದು ಲಾಭಕ್ಕಲ್ಲ"

ಎಂಬುದನ್ನು ತಮ್ಮ 'ನಡೆ'ಯಿಂದ ಸತ್ಯವಾಗಿಸಿ, ಜನರಿಗೆ ಅಗತ್ಯವಾದ ದಿನನಿತ್ಯದ ಎಲ್ಲ ವಸ್ತುಗಳೂ ಸಹಕಾರ ಕ್ಷೇತ್ರದಲ್ಲಿ ಒಂದೆಡೆಯೇ ಸಿಗುವಂತೆ, ಸಹಕಾರ ರಂಗದ ನೌಕರರು, ಆಡಳಿತಮಂಡಳಿಯವರು, ಅಧಿಕಾರಿಗಳು ಕ್ರಮಕೈಗೊಳ್ಳಬೇಕು ಮತ್ತು

"ಸುವಿಚಾರಗಳು ಎಲ್ಲೆಡೆಯಿಂದಲೂ ಬರಲಿ"

ಎಂಬ ಋಗ್ವೇದದ ನುಡಿಯಂತೆ 'ಎಲ್ಲೆಡೆ'ಯಿಂದಲೂ (ವಿಶಾಲ ಅರ್ಥದಲ್ಲಿ) ಬರುವ ಸುವಿಚಾರಗಳನ್ನು ತಿಳಿದು, ನಮ್ಮ ಕಾಯಕವನ್ನು ಮಾಡಿದರೆ; ನಿಷ್ಠೆ, ಪ್ರಾಮಾಣಿಕತೆ, ದೂರದರ್ಶಿತ್ವ, ತಾಳ್ಮೆ, ಜವಾಬ್ದಾರಿಗಳಿಂದ ದುಡಿದರೆ, ಆಗ 'ಕರ್ಮ'ಕ್ಕೆ ತಕ್ಕ 'ಪ್ರತಿಫಲ' ಸಿಕ್ಕೇ ಸಿಗುತ್ತದೆ! ಸಹಕಾರ ಕ್ಷೇತ್ರದ ಸಮಸ್ಯೆಗಳು, ಸವಾಲುಗಳು ತಂತಾನೇ ಕರಗುತ್ತವೆ!! ಸಹಕಾರ ಸಂಸ್ಥೆಗಳ ಉದ್ಧಾರ ಆಗೇ ಆಗುತ್ತದೆ, ಇದಕ್ಕೆ ಸಂಶಯ ಬೇಡ !!!

"ಸರ್ವೇ ಜನಾಃ ಸುಖಿನೋ ಭವಂತು."

*

ಇಪ್ಪತ್ತೊಂದನೇ ಶತಮಾನದಲ್ಲಿ ಸಹಕಾರ ರಂಗ ಹೇಗಿರಬೇಕು?

ಸಹಕಾರ ಕ್ಷೇತ್ರದ ಸಹಕಾರ ತತ್ವದ ಅಗಾಧ ಬಳಕೆ, ಅವಲಂಬನೆಯಿಂದಾಗಿ ಜಪಾನ್ ದೇಶ ಅಪಾರ ಬೆಳವಣಿಗೆ ಹೊಂದಿ, "ಮೂರ್ತಿ(ದೇಶ) ಚಿಕ್ಕದಾದರೂ ಕೀರ್ತಿ (ಹೆಸರು) ದೊಡ್ಡದು" ಎಂಬಂತಾಗಿ, ಮೂಗಿನ ಮೇಲೆ ಬೆರಳಿಡುವಂತೆ ಅಲ್ಪ ಸಮಯದಲ್ಲಿಯೇ, 'ಪವಾಡ'ವೋ ಎಂಬಂತೆ ಆಗಿರುವಂತೆ, ಭಾರತದ ಸಹಕಾರಿಗಳು ದೃಢಸಂಕಲ್ಪ ಮಾಡಿದರೆ, ಛಲ ಬಿಡದೇ ಇದ್ದರೆ, 'ಸಹಕಾರ'ದಿಂದ ಭಾರತವನ್ನು ಇಪ್ಪತ್ತೊಂದನೇ ಶತಮಾನದಲ್ಲಿ ಒಂದು ಸಮೃದ್ಧ, ಸ್ವಾವಲಂಬೀ, ಸುಖೀ ರಾಷ್ಟ್ರವನ್ನಾಗಿ ಮಾಡಬಹುದಾಗಿದೆ!

ಅಗ್ಗದ, ಸುಲಭದ (ಸರಳ) ವಿಧಾನ

"ನಾನು ಎಲ್ಲರಿಗಾಗಿ, ಎಲ್ಲರೂ ನನಗಾಗಿ" ಎಂಬುದು ಸಹಕಾರದ ಮಂತ್ರ, ಪರಸ್ಪರ ಸಹಾಯವೆ ಇಲ್ಲಿಯ ತಂತ್ರ. 'ಸಹಕಾರ'ಕ್ಕಿಂತ ಅಗ್ಗದ, ಸುಲಭದ ವಿಧಾನ ಬೇರೊಂದಿಲ್ಲ!! ಹಾಗೆ ಹೇಳುವುದಾದರೆ, ಕುಟುಂಬ ಮಟ್ಟದಲ್ಲಿಯೇ ನಾವು ಈ 'ಸಹಕಾರ'ದ ಅಸ್ತಿತ್ವವನ್ನು ಗಮನಿಸಬಹುದಾಗಿದೆ (ಗಂಡನಿಗೆ ಹೆಂಡತಿ ದಿನಾಲೂ ಬೆಳಿಗ್ಗೆಯಿಂದ ಸಂಜೆಯವರೆಗೆ ಹಲವಾರು ವಸ್ತುಗಳನ್ನು ಹುಡುಕಿ ಹುಡುಕಿ ಕೊಡುವ, ಆಕೆಯು ಆತನ ಮನವರಿತು ವರ್ತಿಸುವ ಆಕೆಯ ಸಹಕಾರ, ಸಹಾಯ ಚಿಕ್ಕವೇ?).

ವಿವಿಧ ಹಂತಗಳು

ಮೇಲೆ ಹೇಳಿದಂತೆ ಕುಟುಂಬದ ಮಟ್ಟದಲ್ಲಿಯೇ ನಾವು ಸಹಕಾರವನ್ನು ನೋಡಬಹುದಾದರೂ, ಇನ್ನೂ ದೊಡ್ಡ ರೂಪದಲ್ಲಿ, ಸಂಘಟಿತ ರೂಪದಲ್ಲಿ ಕಾನೂನುಬದ್ಧ ರೂಪದಲ್ಲಿ ಹೇಳುವುದಾದರೆ, ಪ್ರಾಥಮಿಕ ಸಹಕಾರ ಸಂಘಗಳು ಸಹಕಾರ ಕ್ಷೇತ್ರದ ಪ್ರಥಮ ಹಂತ. ತಾಲ್ಲೂಕು ಕೃಷಿ ಉತ್ಪನ್ನ ಮಾರುಕಟ್ಟೆ ಸಂಘಗಳು ಎರಡನೇ ಹಂತ. ಜಿಲ್ಲಾ ಮಟ್ಟದ ಸಂಘಗಳು ಸಹಕಾರ ಬ್ಯಾಂಕುಗಳು ಮೂರನೇ ಹಂತವಾದರೆ, ಅಪೆಕ್ಸ್ ಬ್ಯಾಂಕು ರಾಜ್ಯ ಮಟ್ಟದಲ್ಲಿ ನಾಲ್ಕನೇ ಹಂತ.

'ಭೇಶ್' ಎನಿಸಿಕೊಳ್ಳುತ್ತಿರುವ ಕೆಲವೇ ಸಹಕಾರೀ ಸಂಸ್ಥೆಗಳು!

ಭಾರತ ದೇಶದ ಎಲ್ಲ ರಾಜ್ಯಗಳಲ್ಲೂ ಸಹಕಾರ ಸಂಸ್ಥೆಗಳಿದ್ದರೂ, ಗುಜರಾತ್ ರಾಜ್ಯ ಸಹಕಾರ ಕ್ಷೇತ್ರದಲ್ಲಿ ಭಾರತದ 'ನಂಬರ್ ಒನ್ ರಾಜ್ಯ'! ಮಹಾರಾಷ್ಟ್ರ, ಕರ್ನಾಟಕ, ಕೇರಳ, ತಮಿಳ್ನಾಡು ಅದರ ಹಿಂದಿವೆ. ಗುಜರಾತ್‌ನ 'ಅಮುಲ್' ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಖ್ಯಾತವಾದರೆ, ಬೆಂಗಳೂರು ಮತ್ತು ರಾಜ್ಯದ ಇತರ ಕೆಲವು ನಗರಗಳ ನಂದಿನಿ, ಮಂಗಳೂರಿನ ಕ್ಯಾಂಪ್ಕೊ, ಚಿಕ್ಕಮಗಳೂರು ಜಿಲ್ಲೆಯ ಕೊಪ್ಪದ ಸಹಕಾರ ಸಾರಿಗೆ, ಇವೆಲ್ಲವೂ ರಾಜ್ಯಮಟ್ಟದಲ್ಲಿ

ಸುವಿಖ್ಯಾತ. ಬೈರುಂಭೆ (ಉ.ಕ.ಜಿಲ್ಲೆ) ಯ ಸಹಕಾರ ಸಂಘ, ಉ.ಕ., ದ.ಕ., ಜಿಲ್ಲೆಗಳ ಡಿ.ಸಿ.ಸಿ. ಬ್ಯಾಂಕುಗಳು, ಬೆಂಗಳೂರಿನ ಅಪೆಕ್ಸ್ ಬ್ಯಾಂಕು ಇವೆಲ್ಲ ಕರ್ನಾಟಕದಲ್ಲಿ ಗ್ರಾಮ, ಜಿಲ್ಲೆಗಳಿಂದ ರಾಜ್ಯಮಟ್ಟ, ರಾಷ್ಟ್ರಮಟ್ಟದಲ್ಲೂ ಪ್ರಸಿದ್ಧಿ ಹೊಂದಿವೆ! ಅಂದರೆ, ಕೈಬೆರಳೆಣಿಕೆಗೆ ಸಿಗುವಷ್ಟು ಸಹಕಾರ ಸಂಸ್ಥೆಗಳು ಮಾತ್ರ ನಮ್ಮ ರಾಜ್ಯದಲ್ಲಿ 'ಭೇಶ್' ಎನ್ನಿಸಿಕೊಂಡಿವೆ!

ಯಶಸ್ಸಿಗೆ ಕಾರಣಗಳು

ಮೇಲೆ ಹೇಳಿದ ಸಹಕಾರ ಸಂಸ್ಥೆಗಳಿಗೆ ಒಳ್ಳೆಯ ಹೆಸರು ಹೇಗೆ ಬಂತು ಎಂದು ವಿಚಾರಿಸಲಾಗಿ, ಆ ಸಂಸ್ಥೆಗಳಲ್ಲಿ ಆಡಳಿತ ನಡೆಸುತ್ತಿರುವ ಆಡಳಿತ ಮಂಡಳಿ ಮತ್ತು ಕೆಲಸ ಮಾಡುತ್ತಿರುವ ನೌಕರ ವರ್ಗ ಇವರುಗಳು ಹಗಲಿಗೆ ಹಗಲು ನೀಡಿ ನಿಷ್ಠೆ, ಪ್ರಾಮಾಣಿಕತೆ, ದಕ್ಷತೆ, ನಿಸ್ವಾರ್ಥಗಳಿಂದ ಕಾರ್ಯನಿರ್ವಹಿಸುತ್ತಿರುವುದು ಮತ್ತು ಅವರಲ್ಲಿರುವ ಸಮರ್ಪಣಾಭಾವ (dedication) ಎಂದು ತಿಳಿಯುತ್ತದೆ. ಇಂತಹ ನಿಷ್ಠ, ಪ್ರಾಮಾಣಿಕ, ದಕ್ಷ, ನಿಸ್ವಾರ್ಥರು ಇರುವಲ್ಲಿ 'ಬೇಡಾ' ಎಂದರೂ ಅಭಿವೃದ್ಧಿ ತಂತಾನೇ ಆಗುತ್ತದೆ, ಒಳ್ಳೆಯ ಹೆಸರೂ ಬರುತ್ತದೆ; ಅಂತಹ ನೌಕರರಿಗೂ ಆನಂದ, ಆಡಳಿತ ಮಂಡಳಿಯೂ ಧನ್ಯ!

ಸಹಕಾರ ವಿಜಯದ ಗುಟ್ಟು

ಎಲ್ಲ ಕ್ಷೇತ್ರಗಳಲ್ಲಿ ಇರುವಂತೆ ಸಹಕಾರ ಕ್ಷೇತ್ರದಲ್ಲೂ ಈಗ ಕರಟಕ ದಮನಕರು, ಶಕುನಿಗಳು, ಕೌರವರೂ ಸಹ ಇದ್ದಾರೆ – ಸಹಕಾರ ಸಂಸ್ಥೆಯ ಆಡಳಿತದ ಚುಕ್ಕಾಣಿ ಹಿಡಿದವರಿಗೆ ಈ ಕರಟಕ, ದಮನಕರು, ಶಕುನಿಗಳು ಯಾರು, ಪಾಂಡವರು ಯಾರು ಎಂಬುದೆಲ್ಲ ಚೆನ್ನಾಗಿ ಗೊತ್ತಿರುತ್ತದೆ. ಸಂಸ್ಥೆಯ ಅಭಿವೃದ್ಧಿ, ಬೆಳವಣಿಗೆ ಬಯಸುವ ನಿಷ್ಕಳಂಕ, ನಿಸ್ವಾರ್ಥ ಆಡಳಿತ ವರ್ಗ "ಪಾಂಡವರ" ಸಲಹೆ, ಸಹಾಯದಿಂದ ಮುನ್ನಡೆಯುತ್ತದೆ, ಸ್ವಲಾಭ, ಸ್ವಾರ್ಥ, ಸ್ವಜನ ಪಕ್ಷಪಾತ ಆಡಳಿತ ವರ್ಗ ಕೌರವರ, ಶಕುನಿಗಳ, ಕರಟಕ ದಮನಕರ ಮತ್ತು ಭಸ್ಮಾಸುರರ ಸಲಹೆಯಂತೆ ಆಡಳಿತ ನಡೆಸುತ್ತದೆ. – ಯಾರ ತಪ್ಪಿಗೆ (ಆಡಳಿತವರ್ಗದ ತಪ್ಪಿಗೆ) ಯಾರಿಗೆ (ಸಹಕಾರ ಸಂಘಕ್ಕೆ) ಶಿಕ್ಷೆ? ನಷ್ಟ? ಸಂಸ್ಥೆಯ ಅಭಿವೃದ್ಧಿಯನ್ನು ಪ್ರಾಮಾಣಿಕವಾಗಿ, ನಿಜವಾಗಿ ಬಯಸುವ ಆಡಳಿತ ವರ್ಗವು ಕಾಯಾ, ವಾಚಾ, ಮನಸಾ ಸಂಸ್ಥೆಯ ಏಳ್ಗೆಯನ್ನೇ ಹಗಲೂ ರಾತ್ರಿ ಚಿಂತಿಸುವ ನೌಕರ ವರ್ಗದ ಜತೆಗೆ ಇದ್ದಾಗ, ಅದರಂತೆ ನಡೆದಾಗ, ಅಂತಹ ಸಂಸ್ಥೆ ದಿನೇ ದಿನೇ ಅಭಿವೃದ್ಧಿಯತ್ತ ದಾಪುಗಾಲು ಹಾಕುವುದರಲ್ಲಿ ಸಂಶಯವಿಲ್ಲ! ಆಡಳಿತ ವರ್ಗದ ಜತೆಗೆ ಸಮರ್ಪಣಾಭಾವದ ನಿಷ್ಠಾವಂತ, ಪ್ರಾಮಾಣಿಕ ನೌಕರವರ್ಗವಿದ್ದರಂತೂ ಕೇಳಬೇಕೇ? ಯಶಸ್ಸಿನ ಶಿಖರ ಬೇಗನೇ ಏರುವುದು ಖಂಡಿತಾ!

ಇಪ್ಪತ್ತೊಂದನೇ ಶತಮಾನದಲ್ಲಿ ಸಹಕಾರ ಕ್ಷೇತ್ರ

ಇಪ್ಪತ್ತೊಂದನೇ ಶತಮಾನದಲ್ಲಿ ಸಹಕಾರ ಸಂಸ್ಥೆಗಳು ಮೇಲೆ ಹೇಳಿದಂತೆ, ಆಡಳಿತವರ್ಗ, ನೌಕರ ವರ್ಗದ ಸಹಾಯದಿಂದ ತನ್ನ ಸದಸ್ಯರ ಅಂದರೆ ಗ್ರಾಮೀಣ ಜನರ, ರೈತರ ಸರ್ವತೋಮುಖ ಏಳ್ಗೆ ಸಾಧಿಸುವಂತಾಗಬೇಕು – ಸಾಲ ಅಷ್ಟೇ ಅಲ್ಲ, ಪ್ರತಿಯೊಬ್ಬ ರೈತನ ದೈನಂದಿನ ಅಗತ್ಯಗಳು

ಸಹಕಾರ ಸಂಸ್ಥೆಗಳಿಂದಲೇ ಪೂರೈಸುವಂತೆ (ಸಿಗುವಂತೆ) ಆಗಬೇಕು – ಕೆ.ಪಿ.ಟಿ.ಸಿ.ಎಲ್‌ನ ಬಿಲ್ಲು, ಫೋನ್ ಬಿಲ್ಲು, ನೀರು ಬಿಲ್ಲು ಇತ್ಯಾದಿ ಬಿಲ್ಲು ಕಟ್ಟಲಿಕ್ಕೇ ಇರಲಿ, ಗದ್ದೆಯನ್ನು ಟ್ರಾಕ್ಟರ್‌ನಿಂದ ಹೂಳಲಿಕ್ಕೇ ಇರಲಿ, ಆಹಾರ–ಬಟ್ಟೆ–ಔಷಧಿ, ವಿಮೆಗೇ ಇರಲಿ – ಯಾವುದೇ ಕಾರಣಕ್ಕೂ ಆತ 'ಸಹಕಾರ' ಕ್ಷೇತ್ರದ ಹೊರಗೆ ಕಾಲಿಡುವ ಅಗತ್ಯ ಇರಬಾರದು. ಸ್ಶಿರಸಿಯ ಪುಟ್ಟಗ್ರಾಮ ಬೈರುಂಭೆಯ ಸಹಕಾರ ಸಂಘದಂತಹ ಸಹಕಾರೀ ಸಂಸ್ಥೆಗಳು ಇದನ್ನೀಗಾಗಲೇ ಮಾಡಿ ತೋರಿಸಿವೆ! ಇಪ್ಪತ್ತೊಂದನೇ ಶತಮಾನದಲ್ಲಿ ಇಂತಹ ಸಹಕಾರ ಸಂಸ್ಥೆಗಳು, ಬ್ಯಾಂಕುಗಳು ಹಳ್ಳಿ ಹಳ್ಳಿಗಳಲ್ಲಿ ತಲೆ ಎತ್ತಬೇಕು. ಅಂತೆಯೇ ಇದಕ್ಕೆ ಪೂರಕವಾಗಿ ಸಹಕಾರೀ ಧುರೀಣರು, ಸಹಕಾರೀ ವಲಯದ ತಜ್ಞರು ಅಭಿಪ್ರಾಯ ಪಡುವಂತೆ ಸಹಕಾರ ಸಂಸ್ಥೆಗಳ ಮೇಲಿನ ಸರ್ಕಾರದ "ಬಿಗಿಹಿಡಿತ' ಸಡಿಲಾಗಬೇಕು (ಸಹಕಾರೀ ಸಂಸ್ಥೆಗಳಿಗೆ ಸರ್ಕಾರೀ ನಾಮಕರಣ ಆದಷ್ಟೂ ಮಿತವಾಗಿದ್ದರೇನೇ ಹೆಚ್ಚಿನ ಹಿತ ಎಂದು ತಜ್ಞರು ಅಭಿಪ್ರಾಯ ಪಡುತ್ತಾರೆ)

ಇದಕ್ಕೆ,

ರಾಜಕೀಯದಲ್ಲಿ ಸಹಕಾರ ಇರಬೇಕು
ಸಹಕಾರದಲ್ಲಿ ರಾಜಕೀಯ ಇರಬಾರದು

ಅಂತೆಯೇ,

'ಸಹಕಾರಿಗಳಲ್ಲಿ ಸಹಕಾರ' ತಪ್ಪದೇ ಇರಬೇಕು.

ಕಾಲಾಯ ತಸ್ಮೈ ನಮಃ

ಮಹಾಭಾರತದಲ್ಲಿ ದ್ರೋಣಾಚಾರ್ಯರು ಅರ್ಜುನನಿಗೆ ಬಿಲ್ಲು ವಿದ್ಯೆ ಕಲಿಸುವಾಗ, ಹಕ್ಕಿಗೆ ಬಾಣ ಹೊಡೆದು ಸಾಯಿಸಲು ಹೇಳಿ, ಮರದ ಮೇಲಿರುವ ಹಕ್ಕಿಯೊಂದನ್ನು ಅರ್ಜುನನಿಗೆ ತೋರಿಸಿ, 'ಅದೋ ಈಗ ಅಲ್ಲಿ ನಿನಗೇನು ಕಾಣಿಸುತ್ತಿದೆ?' ಎಂದು ಪ್ರಶ್ನಿಸಿದಾಗ, ಆತ 'ಹಕ್ಕಿಯ ಕುತ್ತಿಗೆ (ಕೊರಳು) ಮಾತ್ರ ಕಾಣಿಸುತ್ತಿದೆ ಗುರುಗಳೇ,' ಎಂದಿದ್ದನಂತೆ. ಹಾಗೆನೇ, ದೇಶದ ಅಭಿವೃದ್ಧಿಯನ್ನು ಸಹಕಾರ ಕ್ಷೇತ್ರದ ಮೂಲಕ ಮಾಡ ಹೊರಟವರಿಗೆ ಸಂಸ್ಥೆಯ ಅಭಿವೃದ್ಧಿ ಮಾತ್ರ ಕಣ್ಮುಂದೆ ಕಾಣುವಂತಾದರೆ, ಆ ನಿಟ್ಟಿನಲ್ಲಿ ಯೋಚಿಸಿ ಕಾರ್ಯೋನ್ಮುಖವಾಗುವಂತಾದರೆ ಅಂತಹ ಸಂಸ್ಥೆಗೆ ಜಯ ಖಂಡಿತಾ! ಇದಕ್ಕೆ ಪೂರಕವಾಗಿ 'ಕಾಲಾಯ ತಸ್ಮೈ ನಮಃ' ಎಂದು ಬದಲಾಗುತ್ತಿರುವ ಕಾಲಮಾನ, ಪರಿಸ್ಥಿತಿಗೆ ಅನುಗುಣವಾಗಿ ಕಂಪ್ಯೂಟರ್, ಅಂತರ್ಜಾಲ (ಇಂಟರ್‌ನೆಟ್), ದೂರವಾಣಿ ಇತ್ಯಾದಿ ನವ ತಂತ್ರಗಳನ್ನೂ, ವಿಧಾನಗಳನ್ನೂ ಸಹಕಾರೀಗಳೂ ಬೆಳೆಸಲೇಬೇಕು. ಈ ಸ್ಪರ್ಧಾಯುಗದಲ್ಲಿ ಯಾವ ಕೆಲಸವೂ ಕನಿಷ್ಠ ಅಲ್ಲ, ಪ್ರತಿಯೊಂದು ಕೆಲಸಕ್ಕೂ ಅದರದೆ ಆದ ಗೌರವ, ಸ್ಥಾನಮಾನ ಇದ್ದೇ ಇದೆ. ಒಟ್ಟಾರೆ ಹೇಳುವುದಾದರೆ, ಇಪ್ಪತ್ತೊಂದನೇ ಶತಮಾನದಲ್ಲಿ ಸಹಕಾರ ಗಲ್ಲಿ ಗಲ್ಲಿಗಳಿಂದ ರಾಷ್ಟ್ರಾದ್ಯಂತ ಹರಡಲಿ, ಬಡಜನರ ಬಾಳಿನಲಿ ದೀಪ ಬೆಳಗಲಿ, ರಾಷ್ಟ್ರ ನಿಜಕ್ಕೂ ಕನ್ಯಾಕುಮಾರಿಯಿಂದ ಕಾಶ್ಮೀರದ ವರೆಗೆ ಬೆಳಗಲಿ, ಪ್ರಕಾಶಿಸಲಿ.

*

ಭಾರತದಲ್ಲಿ ಸಹಕಾರಿ ಚಳುವಳಿ ಮತ್ತು ಗ್ರಾಮಾಭಿವೃದ್ಧಿ

ಇಂದು ಸಹಕಾರೀ ಕ್ಷೇತ್ರವು ನಮ್ಮ ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಪ್ರಮುಖ ಸ್ಥಾನ ಪಡೆದಿದೆ. ಸ್ವಾತಂತ್ರ್ಯಾನಂತರ ಸಹಕಾರ ಚಳುವಳಿಯನ್ನು ತೀವ್ರವಾಗಿ ಮುನ್ನಡೆಸುವ ಸರ್ಕಾರದ ಧೋರಣೆಯಿಂದ ಸಹಕಾರಿ ವಲಯದಲ್ಲಿ ಪ್ರಗತಿ ಸಾಧಿಸಲು ಸಾಧ್ಯವಾಯಿತು.

ಭಾರತದಾದ್ಯಂತ ಇಂದು ಸುಮಾರು ಐದು ಲಕ್ಷ ಸಹಕಾರ ಸಂಘಗಳಿದ್ದು, ಸುಮಾರು ಇಪ್ಪತ್ತೆಂಟು ಕೋಟಿ ಸದಸ್ಯರನ್ನು ಹೊಂದಿದೆ. ಜೊತೆಗೆ ಸುಮಾರು ತೊಂಬತ್ತೈದು ಸಾವಿರ ಕೋಟಿ ರೂ.ಗಳ ದುಡಿಯುವ ಬಂಡವಾಳ ಇದೆ. ಕೃಷಿಗೆ ಬೇಕಾದ ಸಾಲ (ಪತ್ತು) ಸೌಲಭ್ಯಗಳು, ಬೀಜ, ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ ಮುಂತಾದವನ್ನು ಒದಗಿಸುವಲ್ಲಿ ಮತ್ತು ಕೃಷಿ ಉತ್ಪನ್ನಗಳ ದಾಸ್ತಾನು ಮತ್ತು ಮಾರಾಟ ಸೌಲಭ್ಯಗಳನ್ನು ಒದಗಿಸುವಲ್ಲಿ ನಮ್ಮ ದೇಶದ ಸಹಕಾರ ಸಂಘಗಳು, ಸಹಕಾರ ಸಂಸ್ಥೆಗಳು ಪ್ರಮುಖ ಪಾತ್ರ ವಹಿಸುತ್ತಿವೆ. ಪಶು–ಸಂಗೋಪನೆ, ಮೀನುಗಾರಿಕೆ, ಕೋಳಿ ಸಾಕಾಣಿಕೆ, ರೇಷ್ಮೆ ವ್ಯವಸಾಯ ಇಂತಹ ಕಸುಬುಗಳಲ್ಲೂ ಸಹಕಾರ ಕ್ಷೇತ್ರವು ಪ್ರಮುಖ ಪಾತ್ರ ವಹಿಸುತ್ತಿದೆ.

ಬೆಳೆಸಾಲ ಅಲ್ಲದೇ, ಚಿನ್ನಾಭರಣ ಸಾಲ, ವಾಹನ ಸಾಲ, ಟ್ರಾಕ್ಟರ್ ಸಾಲ, ಗೃಹೋಪಕರಣ ಸಾಲ, ವೇತನದಾರರಿಗೆ ವೇತನಾಧಾರಿತ ಸಾಲ, ವ್ಯಾಪಾರ ಸಾಲ, ಗೃಹ ನಿರ್ಮಾಣ ಸಾಲ ...ಹೀಗೆ ಹತ್ತು ಹಲವು ತರಹದ ಕೃಷಿಯೇತರ ಸಾಲಗಳನ್ನೂ ನೀಡಿ ಸಹಕಾರ ಬ್ಯಾಂಕುಗಳು ಇಂದು ವಾಣಿಜ್ಯ ಬ್ಯಾಂಕುಗಳಂತೆ ಗ್ರಾಹಕರಿಗೆ ಅನುಕೂಲ ಕಲ್ಪಿಸಿಕೊಡುತ್ತಿವೆ. ಗ್ರಾಹಕರ ವಸ್ತುಗಳ ವಿತರಣೆ, ಸಗಟು ಮತ್ತು ಚಿಲ್ಲರೆ ವ್ಯಾಪಾರ, ಕೈಮಗ್ಗ, ಸಣ್ಣ ಕೈಗಾರಿಕೆ ಇಂತಹ ಕ್ಷೇತ್ರಗಳಲ್ಲೂ ಸಹಕಾರ ಕ್ಷೇತ್ರವು ತನ್ನನ್ನು ತೊಡಗಿಸಿಕೊಂಡಿದೆ. ಗುಜರಾತ್ ರಾಜ್ಯದಲ್ಲಿ ಸಹಕಾರ ಚಳುವಳಿಯು ಅತ್ಯಂತ ಯಶಸ್ವಿಯಾಗಿ ನಡೆಯುತ್ತಿದ್ದು ಅಲ್ಲಿಯ ಆನಂದ ಮಿಲ್ಕ್ ಯೂನಿಯನ್ ಲಿಮಿಟೆಡ್‌ನ (ಅಮೂಲ್) ಹಾಲಿನ ಉತ್ಪನ್ನಗಳು ದೇಶಾದ್ಯಂತವಲ್ಲದೇ, ವಿದೇಶಗಳಲ್ಲೂ ಜನಪ್ರಿಯ. ನಮ್ಮ ರಾಜ್ಯದ ಸಹಕಾರೀ ಹಾಲು ಉತ್ಪಾದಕರ ಕೂಟದ ನಂದಿನಿ ಹಾಲು, ಬೆಣ್ಣೆ, ತುಪ್ಪ, ಪೇಡಾ, ಶ್ರೀಖಂಡ ಇವೆಲ್ಲ ಇಂದು ಕರ್ನಾಟಕದ ಜನರ ದಿನನಿತ್ಯದ ಬಳಕೆಯ ವಸ್ತುಗಳಾಗಿವೆ. ದ.ಕ. ಜಿಲ್ಲೆಯ ಸಹಕಾರೀ ವಲಯದಲ್ಲಿ ತಯಾರಾಗುತ್ತಿರುವ 'ಕ್ಯಾಂಪ್ಕೋ' ಚಾಕಲೇಟು, ಇಂದು ಭಾರತದಾದ್ಯಂತ ಪ್ರಸಿದ್ಧ.

ನಮ್ಮ ದೇಶದ ಸ್ವಾತಂತ್ರ್ಯ ಪೂರ್ವದಲ್ಲಿ ಸಹಕಾರ ಆಂದೋಲನವು ಸುಮಾರು ನಲ್ವತ್ತು ವರ್ಷಗಳ ಕಾಲ ಹಲವು ರೂಪಗಳಲ್ಲಿ ನಡೆದಿತ್ತು. ಪ್ರಪ್ರಥಮವಾಗಿ ೧೯೦೪ರಲ್ಲಿ ಕಾನೂನು ಮೂಲಕವಾಗಿ ಸಹಕಾರೀ ಸಂಘಗಳನ್ನು ಸ್ಥಾಪಿಸಿ, ಕೃಷಿಗೆ ಆದ್ಯತೆ ನೀಡಿ, ರೈತರನ್ನು ಸಾಹುಕಾರರ ಕಪಿಮುಷ್ಟಿಯಿಂದ ಬಿಡಿಸಲು ಪ್ರಯತ್ನಿಸಲಾಯಿತು.

ಸ್ವಾತಂತ್ರ್ಯದ ನಂತರ ಸಹಕಾರ ಚಳುವಳಿಯು ನಮ್ಮ ದೇಶದಲ್ಲಿ ತೀವ್ರವಾಗಿ ಬೆಳೆದು, ಎಲ್ಲೆಡೆ ವ್ಯಾಪಿಸಿತು. ನಮ್ಮ ಪ್ರಥಮಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರೂ ಅವರಿಗೆ ಈ ಚಳುವಳಿಯಲ್ಲಿ ಅಪಾರ ವಿಶ್ವಾಸವಿತ್ತು. ಈ ಚಳವಳಿ ನಮ್ಮ ದೇಶದಲ್ಲಿ ಸರ್ವವ್ಯಾಪಿ ಆಗಬೇಕು ಎಂದೇ ಅವರು ಬಯಸಿದ್ದರು. ರಾಷ್ಟ್ರಪಿತ ಮಹಾತ್ಮಾ ಗಾಂಧಿಯಂತೂ ಪ್ರತಿ ಹಳ್ಳಿ, ಗ್ರಾಮದ ಏಳ್ಗೆಗೆ ಸಹಕಾರ ಸಂಘ ಬೇಕೇ ಬೇಕು ಎಂದು ಹೇಳುತ್ತಿದ್ದರು.

ಗ್ರಾಮೀಣಾಭಿವೃದ್ಧಿ, ಕೃಷಿ ಅಭಿವೃದ್ಧಿ ಸಾಧಿಸಲು ಸಹಕಾರೀ ಸೂತ್ರವನ್ನು ಪ್ರಮುಖ ಸಾಧನವನ್ನಾಗಿ ರೂಪಿಸುವ ಸಹಕಾರಿ ಧೋರಣೆಯ ಮೂಲ ಅಂಶವನ್ನು ಕ್ರಿ.ಶ. ೧೯೫೪ರ ಗ್ರಾಮೀಣ ಸಾಲ ಸಮೀಕ್ಷಣ ಸಮಿತಿ ವರದಿ ಶಿಫಾರಸ್ಸುಗಳು ಒದಗಿಸಿದವು. ವ್ಯಾಪಾರಿಗಳು, ಭೂಮಾಲೀಕರು, ಬಡ್ಡಿಗೆ ಸಾಲ ಕೊಡುವ ಸಾಹುಕಾರರು, ಪಟ್ಟಭದ್ರ ಹಿತಾಸಕ್ತಿಗಳು – ಇವರೆಲ್ಲರ ವಿರುದ್ಧ ದುರ್ಬಲ ಸಹಕಾರೀ ಸಂಸ್ಥೆಗಳು ಉಳಿಯಲಾರವು ಎಂದು ಈ ಶಿಫಾರಸ್ಸುಗಳನ್ನು ಮಾಡಲಾಯಿತು. ಗ್ರಾಮಮಟ್ಟದಲ್ಲಿ ಪ್ರಾಥಮಿಕ ಸಹಕಾರಿ ಸಂಘಗಳು, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕೇಂದ್ರ ಸಹಕಾರೀ ಬ್ಯಾಂಕುಗಳು, ರಾಜ್ಯಮಟ್ಟದಲ್ಲಿ ಅಪೆಕ್ಸ್ ಬ್ಯಾಂಕು – ಇವೆಲ್ಲವೂ ರಿಜರ್ವ್‌ಬ್ಯಾಂಕಿನ ಅಂಗಸಂಸ್ಥೆಯಾದ ನಬಾರ್ಡ್ (NABARD)ನಿಂದ ಆರ್ಥಿಕ ನೆರವು ಪಡೆಯುತ್ತಿವೆ.

ಇಂದು ಪ್ರಾಥಮಿಕ ಸಹಕಾರಿ ಸಂಘಗಳು ಬೆಳೆ ಬೆಳೆಯಲು ಅಲ್ಪಾವಧಿ ಸಾಲ, ಪಂಪ್‌ಸೆಟ್ ಕೊಳ್ಳಲು, ಟ್ರಾಕ್ಟರ್–ಟಿಲ್ಲರ್ ಕೊಳ್ಳಲು ಮಧ್ಯಮಾವಧಿ ಸಾಲ ನೀಡುತ್ತಿವೆ. ತಾಲ್ಲೂಕು ಮಟ್ಟದಲ್ಲಿರುವ ಭೂ ಬ್ಯಾಂಕುಗಳು ಬಾವಿ ನಿರ್ಮಾಣ, ಭೂ ಅಭಿವೃದ್ಧಿ, ತಂತಿ ಬೇಲಿ ಇತ್ಯಾದಿಗಳಿಗಾಗಿ ಮಧ್ಯಮಾವಧಿ ಸಾಲ, ತೆಂಗಿನಂತಹ ಬೆಳೆ ಬೆಳೆಯಲು ದೀರ್ಘಕಾಲೀನ ಸಾಲ ಸಹ ನೀಡುತ್ತಿವೆ. ಲಾಭದಲ್ಲಿರುವ, ಪ್ರತಿಶತ ಅರ್ವತ್ತಕ್ಕಿಂತ ಹೆಚ್ಚಿನ ಸಾಲ ವಸೂಲಿ ಮಾಡಿರುವ ಹಲವು ಭೂ ಬ್ಯಾಂಕುಗಳು ಗೃಹ ನಿರ್ಮಾಣ ಸಾಲವನ್ನೂ ನೀಡುತ್ತಿವೆ.

ಗುಜರಾತಿನ ಕಲೋಲ್‌ನಲ್ಲಿ ಯೂರಿಯಾ ತಯಾರಿಸುವ ಕಾರ್ಖಾನೆಯನ್ನೂ, ಕಾಂಡ್ಲಾದಲ್ಲಿ ಸಾರಜನಕ, ರಂಜಕ, ಪೊಟಾಷಿಯಂ (ಎನ್‌ಪಿಕೆ)ಗಳ ಕಾರ್ಖಾನೆಯನ್ನೂ ಸ್ಥಾಪಿಸಿರುವ ಭಾರತೀಯ ರೈತರ ರಾಸಾಯನಿಕ ಗೊಬ್ಬರ ಸಂಸ್ಥೆ (ಇಫ್ಕೋ) ಯು ಉಲ್ಲೇಖನೀಯ ಕೆಲಸ ಮಾಡುತ್ತಿದೆ. ಇಪ್ಪತ್ತಾರು ಸಾವಿರಕ್ಕಿಂತ ಹೆಚ್ಚಿನ ಸಹಕಾರ ಸಂಸ್ಥೆಗಳನ್ನು ಹೊಂದಿರುವ ಈ ಸಂಸ್ಥೆಯು ಜಾಗತೀಕರಣ, ಸ್ಪರ್ಧೆ ಇತ್ಯಾದಿಗಳ ಹಾವಳಿಯ ಮಧ್ಯೆಯೂ ಸಾಕಷ್ಟು ಲಾಭ ಗಳಿಸಿ ಸದಸ್ಯರಿಗೆ ಈಗಲೂ ಪ್ರತಿಶತ ಇಪ್ಪತ್ತರಷ್ಟು ಲಾಭಾಂಶ ವಿತರಿಸುತ್ತಿರುವುದು ಆಶ್ಚರ್ಯಕರವಾದರೂ, ಆನಂದಕರ. ದೇಶದ ಅನೇಕ ರಾಜ್ಯಗಳಲ್ಲಿ ಇಫ್ಕೋ ಮತ್ತು ರಾಷ್ಟ್ರೀಯ ಗೊಬ್ಬರ ಮತ್ತು ರಾಸಾಯನಿಕಗಳ ಸಂಸ್ಥೆ (ಆರ್‌ಸಿಎಫ್‌ಎಲ್)ಗಳು ಮಾರುಕಟ್ಟೆಯ ಜಾಲಗಳನ್ನು ಹೊಂದಿವೆ.

ಹೀಗೆ ಕೃಷಿ ಕ್ಷೇತ್ರದ ಉದ್ಧಾರವೇ ಸಹಕಾರ ಚಳುವಳಿಯ ಮೂಲ ಉದ್ದೇಶ. ೨೦೦೦–೨೦೦೧ನೇ ಸಾಲಿನಲ್ಲಿ ರೂ. ೨೫,೬೯೮ ಕೋಟಿಗಳ ಸಾಲ ಸೌಲಭ್ಯವನ್ನು ಸಹಕಾರೀ ಸಂಘಗಳ ಮೂಲಕ ನಮ್ಮ ದೇಶದಲ್ಲಿ ರೈತರಿಗೆ ವಿತರಿಸಲಾಗಿದೆ. ರೈತರ ಆಪದ್ಬಾಂಧವ, ಕಲ್ಪವೃಕ್ಷ

ಎಂದೇ ಜನಪ್ರಿಯವಾದ ಕಿಸಾನ್ ಕ್ರೆಡಿಟ್ ಕಾರ್ಡ್ (ಕೆಸಿಸಿ) ಮೂಲಕ ೨೦೦೨-೦೩ನೇ ಸಾಲಿನಲ್ಲಿ ಸಹಕಾರ ಬ್ಯಾಂಕುಗಳ ಮೂಲಕ ೪೫.೮೦ ಲಕ್ಷ ಜನರಿಗೆ ನಮ್ಮ ದೇಶದಲ್ಲಿ ಸಾಲ ವಿತರಿಸಲಾಗಿದ್ದು, ೧೯೯೮-೯೯ನೇ ಸಾಲಿನಿಂದ ಪ್ರಾರಂಭವಾದ ಈ ಕೆಸಿಸಿ ಕಾರ್ಡುಗಳ ಮೂಲಕ ಅಲ್ಲಿಂದ ೨೦೦೨-೦೩ರ ವರೆಗೆ ಸಹಕಾರ ಬ್ಯಾಂಕುಗಳ ಮೂಲಕ ೧೯೩.೮೧ ಲಕ್ಷ ರೈತ ಸದಸ್ಯರಿಗೆ ಸಾಲ ವಿತರಿಸಲಾಗಿದೆ (ನಬಾರ್ಡ್‌ನ ೨೦೦೨-೦೩ನೇ ಸಾಲಿನ ವಾರ್ಷಿಕ ವರದಿ ಪುಟ ೧೫೫, ೧೫೩ ರ ಪ್ರಕಾರ ಈ ಅಂಕಿ-ಅಂಶ ಆಧಾರಿತ). ರಾಸಾಯನಿಕ ಗೊಬ್ಬರ ಮತ್ತು ಕೃಷಿ ಉತ್ಪನ್ನಗಳ ವಿತರಣೆಗಾಗಿ ಭಾರತದಾದ್ಯಂತ ಸುಮಾರು ೮೦,೦೦೦ (ಎಂಬತ್ತು ಸಾವಿರ) ಅಂಗಡಿಗಳನ್ನು ತೆರೆಯಲಾಗಿದೆ. ಸಹಕಾರಿ ಸಕ್ಕರೆ ಕಾರ್ಖಾನೆಗಳು ರಾಷ್ಟ್ರದ ಒಟ್ಟಾರೆ ಸಕ್ಕರೆ ಉತ್ಪಾದನೆಯ ಶೇಕಡಾ ಐವತ್ತೆಂಟು (೫೮)ರಷ್ಟು ಸಕ್ಕರೆ ಉತ್ಪಾದಿಸಿದರೆ, ಸಹಕಾರಿ ನೂಲು ಗಿರಣಿಗಳು ಶೇಕಡಾ ಇಪ್ಪತ್ತರಷ್ಟು (೨೦) ಉತ್ಪಾದನೆ ಮಾಡುತ್ತಿವೆ.

ಸಹಕಾರಿ ರಂಗದಲ್ಲಿ ಮಹತ್ಸಾಧನೆ ನಮ್ಮ ದೇಶದಲ್ಲಿ ಆಗುತ್ತಿದ್ದರೂ, ನಿರೀಕ್ಷಿತ ವೇಗದಲ್ಲಿ ಹಾಗೂ ಪ್ರಮಾಣದಲ್ಲಿ ಈ ಪ್ರಗತಿ ಆಗುತ್ತಿಲ್ಲ – ಕಾರಣ ಎಂದರೆ, ಸಹಕಾರ ರಂಗ ಎನ್ನುವುದು ಸ್ವಾರ್ಥ ರಾಜಕಾರಣಿಗಳು ತುಂಬಿ ತುಳುಕುತ್ತಿರುವ ಕ್ಷೇತ್ರವಾಗಿ ಅಲ್ಲಲ್ಲಿ ಸಂಘ ಸಂಸ್ಥೆಗಳಲ್ಲಿ ನಷ್ಟವಾಗಿ ಸಹಕಾರ ರಂಗದಲ್ಲೇ ಜನ ಸಾಮಾನ್ಯ ನಂಬಿಕೆ ಕಳೆದುಕೊಳ್ಳುತ್ತಿರುವುದು; "ಸಹಕಾರ ಸಂಘಗಳೆಂದರೆ ಅನುಭವಿ ರಾಜಕಾರಣಿಗಳ ಆಟದ ಮೈದಾನ (Co-operative societies are the playgrounds for the untrained politicians)" ಎಂಬ ಆಪಾದನೆ ಹೊತ್ತಿರುವುದು! ಸಹಕಾರಿಗಳಲ್ಲೂ ಸಹಕಾರ ಇಲದೇ ಸಹಕಾರ ಸಂಸ್ಥೆಗಳು ಸೊರಗುತ್ತಿರುವುದು ಎಂದು ತಜ್ಞರು ಹೇಳುತ್ತಾರೆ. ಇದರಿಂದಾಗಿ ಗ್ರಾಮೀಣಾಭಿವೃದ್ಧಿಗೆ ನಮ್ಮ ದೇಶದಲ್ಲಿ ಭಾರೀ ಪೆಟ್ಟು ಬೀಳುತ್ತಿದೆ. ನಮ್ಮ ದೇಶದ ಪ್ರತಿ ರೈತನೂ ಜಾಗೃತನಾಗಿ, ಸಹಕಾರೀ ರಂಗವು 'ಸ್ವಾಹಾಕಾರ ರಂಗ' ಆಗಲು ಬಿಡಬಾರದು. ಆಗ ಸಹಕಾರೀ ರಂಗವು ನಮ್ಮ ಗ್ರಾಮೀಣ ಅಭಿವೃದ್ಧಿ ಮಾಡುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ !

*

3

ಸಹಕಾರ ಬ್ಯಾಂಕುಗಳಿಗಿದು ಸಕಾಲವು.....

ಸಮಯ, ಸಂದರ್ಭಗಳನ್ನರಿತು ಕಾರ್ಯೋನ್ಮುಖವಾಗುವುದರಿಂದ, ಸಹಕಾರ ಬ್ಯಾಂಕುಗಳೂ ರಾಷ್ಟ್ರೀಕೃತ ಬ್ಯಾಂಕುಗಳಂತೆ, ವಾಣಿಜ್ಯ ಬ್ಯಾಂಕುಗಳಂತೆ ಗ್ರಾಹಕ ಸೇವೆ ಮಾಡಿ ಗ್ರಾಹಕರನ್ನು ಉದ್ಧರಿಸಿ ಬೆಳೆಸಿ, ತಾವೂ ಬೆಳೆದು ತಮ್ಮ ಉದ್ಧಾರ ಮಾಡಿಕೊಳ್ಳಬಹುದಾಗಿದೆ!

ಉಳಿದ ಬ್ಯಾಂಕುಗಳು ಅಡೆ–ತಡೆ ಅಲ್ಲ

ರಾಷ್ಟ್ರೀಕೃತ ಬ್ಯಾಂಕು, ವಾಣಿಜ್ಯ ಬ್ಯಾಂಕುಗಳಿಂದಾಗಿ ಸಹಕಾರ ಬ್ಯಾಂಕುಗಳು ಬೆಳೆಯಲು ಸಾಧ್ಯವಿಲ್ಲ ಎನ್ನುವ ದಿನಗಳು ಕಳೆದುಹೋದವು! ಮನಸ್ಸು ಮಾಡಿದರೆ, ದೃಢಸಂಕಲ್ಪ ಕೈಗೊಂಡರೆ, ಸಹಕಾರ ಬ್ಯಾಂಕುಗಳೂ ರಾಷ್ಟ್ರೀಕೃತ ಬ್ಯಾಂಕುಗಳಂತೆ, ವಾಣಿಜ್ಯ ಬ್ಯಾಂಕುಗಳಂತೆ ಜನಪ್ರಿಯ ಆಗಬಲ್ಲವು, ವಿಶ್ವಾಸಗಳಿಸಬಲ್ಲವು ಎಂಬುದಕ್ಕೆ ನಮ್ಮ ಎದುರಿಗೇನೇ ಹಲವಾರು ದೃಷ್ಟಾಂತಗಳಿವೆ! ಉ.ಕ. ಜಿಲ್ಲೆಯ ಭಟ್ಕಳದ ಕೃಷಿ ಬ್ಯಾಂಕು, ಉ.ಕ.ಜಿಲ್ಲಾ ಡಿ.ಸಿ.ಸಿ. ಬ್ಯಾಂಕು, ದ.ಕ.ದ ಡಿ.ಸಿ.ಸಿ. ಬ್ಯಾಂಕು ಕೆಲವು ಮುಖ್ಯ ಉದಾಹರಣೆಗಳು.

ವಿ.ಆರ್.ಎಸ್, ವಿ.ಆರ್.ಎಸ್!

ಸಾರ್ವಜನಿಕ ರಂಗದ ಉದ್ದಿಮೆಗಳಲ್ಲಿ, ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಈಗ ವಿ ಆರ್ ಎಸ್ (ವೋಲಂಟರಿ ರಿಟೈರ್‌ಮೆಂಟ್ ಸ್ಕೀಂ) ನ (ಸ್ವಯಂ ನಿವೃತ್ತಿ ಯೋಜನೆ) 'ಗಲಾಟೆ'! ಈ ಸ್ವಯಂ ನಿವೃತ್ತಿ ಯೋಜನೆ ಪ್ರಾರಂಭಿಸುವಾಗ ಅದರ ನಿರ್ಮಾಪಕರು ತಮ್ಮ ಸುಮಾರು ೯.೧–೧೦% ನೌಕರರು ಸ್ವಯಂ ನಿವೃತ್ತಿ ಹೊಂದಬಹುದು ಎಂದು ತಿಳಿಸಿದ್ದರಂತೆ – ಆದರೆ, ಜಾರಿಗೆ ತಂದಾಗ ೧೯–೨೦% ನೌಕರರು ಈ ಯೋಜನೆಯ ಲಾಭವನ್ನು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಪಡೆದಿದ್ದಾಗಿ ಪತ್ರಿಕಾ ವರದಿಗಳು ಹೇಳುತ್ತವೆ! ಹಲವಾರು ಬ್ಯಾಂಕುಗಳ ಹಿರಿ–ಕಿರಿಯ ಅಧಿಕಾರಿಗಳು, ಗುಮಾಸ್ತರೂ ಸಹ "ಈ ಸುಸಂದರ್ಭ ಬಿಟ್ಟರೆ ಸಿಗದು" ಎಂದು ಸ್ವಯಂ ನಿವೃತ್ತಿ ಹೊಂದಿದ್ದಾರೆ! ಇದರಿಂದಾಗಿ, ಇಂತಹ ಬ್ಯಾಂಕುಗಳಲ್ಲಿ ಉಳಿದಿರುವ ಸಿಬ್ಬಂದಿಗಳ ಮೇಲೆ ಕೆಲಸದ ಒತ್ತಡ ಜಾಸ್ತಿ ಆಗಿದೆ. ಅಲ್ಲದೇ ಹೊಸ ಹೊಸ ಯೋಜನೆಗಳಿಂದಾಗಿ ಮುಂಚೆಗಿಂತ ಕೆಲಸವೂ ಜಾಸ್ತಿ ಆಗಿದೆ. ಹಾಗಾಗಿ ಹಾಲಿ ಉಳಿದಿರುವ ನೌಕರರ 'ಫಜೀತಿ' ಹೇಳತೀರದು!

ಗ್ರಾಹಕರ ಕಣ್ಣು ಸಹಕಾರ ಬ್ಯಾಂಕುಗಳ ಮೇಲೆ...!

ಮೇಲೆ ಹೇಳಿದ ಕಾರಣಕ್ಕಾಗಿ, ಈಗ ಸಾರ್ವಜನಿಕರ, ರೈತರ ಕಣ್ಣು ಸಹಕಾರ ಬ್ಯಾಂಕುಗಳ ಮೇಲೆ...! ಕೆಲಸದ ಅತಿಯಾದ ಒತ್ತಡದಿಂದಾಗಿ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸಮಾಧಾನಕರ ಸೇವೆ ಸಿಗುತ್ತಿಲ್ಲವಾದುದರಿಂದ ಸಹಕಾರ ಬ್ಯಾಂಕುಗಳತ್ತ ಅವರು ಗಮನ ಹರಿಸಿದ್ದು ಸಹಜವೂ ಹೌದು. ಅಂದರೆ, ಈಗ ಸಹಕಾರ ಬ್ಯಾಂಕುಗಳ ಜವಾಬ್ದಾರಿಯೂ ಜಾಸ್ತಿ ಆಗುತ್ತಿದೆ – ತಮ್ಮ ಬ್ಯಾಂಕಿಗೆ

"ಗ್ರಾಹಕರ ಸೇವೆ" ಕೋರಿ ಬರುತ್ತಿರುವ ಗ್ರಾಹಕರನ್ನು ಹಾರ್ದಿಕವಾಗಿ ಸ್ವಾಗತಿಸಿ, ಅವರ ಕೋರಿಕೆಗಳಿಗೆ ಸ್ಪಂದಿಸಿ, ಅವರ ಸೇವೆ ಮಾಡಿದರೆ ಸಹಕಾರ ಬ್ಯಾಂಕುಗಳಿಗೆ 'ಶುಕ್ರದೆಸೆ' ತಪ್ಪಿದ್ದಲ್ಲ. ಮಹಾತ್ಮಾಗಾಂಧಿ ಹೇಳಿರುವ ಹಾಗೆ ಗ್ರಾಹಕ ಈಗ ಸಹಕಾರ ಬ್ಯಾಂಕುಗಳಿಗೆ ಬಂದು ನಮಗೆ (ಸಹಕಾರ ಬ್ಯಾಂಕುಗಳಿಗೆ) ಮಹದುಪಕಾರ ಮಾಡುತ್ತಿದ್ದಾನೆ – ಸಹಕಾರ ಬ್ಯಾಂಕುಗಳು ಹಿಂದೆಂದೂ ಇಲ್ಲದ ಈ ಸುಸಂದರ್ಭವನ್ನು ಬಿಟ್ಟುಕೊಡಬಾರದು, ಚೆನ್ನಾಗಿ ಬಳಸಿಕೊಳ್ಳಬೇಕು!

ಹಾಗಾದರೆ, ಸಹಕಾರ ಬ್ಯಾಂಕುಗಳು ಈಗ ಏನು ಮಾಡಬೇಕು? ಕೆಲವು ಮುಖ್ಯ ವಿಷಯಗಳು ಹೀಗಿವೆ:

ಸಹಕಾರ ಬ್ಯಾಂಕುಗಳು ತುರ್ತಾಗಿ ಮಾಡಬೇಕಾದ ಕೆಲಸಗಳು

೧. ರಾಷ್ಟ್ರೀಕೃತ ಬ್ಯಾಂಕಿನ ಅಕ್ಕಪಕ್ಕದ ಯಾವ ಶಾಖೆಯನ್ನು ರದ್ದುಪಡಿಸಲಾಗುತ್ತಿದೆ ಅಥವಾ ಬೇಕೆಂದು ಶಾಖೆಯ ಸಂಗಡ ಒಗ್ಗೂಡಿಸ ("ಮರ್ಜ್")ಲಾಗುತ್ತಿದೆ ಎಂಬುದನ್ನು ತಿಳಿದು ಅಂತಹ ಖಾಲಿ ಸ್ಥಳದ ಊರಿನಲ್ಲಿ ಈಗಾಗಲೇ ತನ್ನ ಶಾಖೆ ಇಲ್ಲದಿದ್ದರೆ ಅಲ್ಲಿ ಶೀಘ್ರದಲ್ಲೇ ತನ್ನದೊಂದು ಶಾಖೆಯನ್ನು ತೆರೆಯಬೇಕು.

೨. ರಾಷ್ಟ್ರೀಕೃತ/ವಾಣಿಜ್ಯ ಬ್ಯಾಂಕ್ ಶಾಖೆ ನೀಡುವ ಎಲ್ಲ ತರಹದ (ಠೇವಣಿ ಸಂಗ್ರಹಣೆ, ಸಾಲ ನೀಡಿಕೆ, ಹಣ ವರ್ಗಾವಣೆ, ಡಿಡಿ ನೀಡಿಕೆ ಇತ್ಯಾದಿ) ಗ್ರಾಹಕ ಸೇವೆಗಳನ್ನೂ ನೀಡಬೇಕು.

೩. ದೂರದೃಷ್ಟಿ ಬಳಸಿ ಎಲ್ಲ ಶಾಖೆಗಳನ್ನೂ ಕಂಪ್ಯೂಟರೀಕರಣಗೊಳಿಸಬೇಕು – ಇದು ಶುಭಸ್ಯ ಶೀಘ್ರಂ!

೪. ತನ್ನ ಹಿರಿ–ಕಿರಿಯ ಸಿಬ್ಬಂದಿಗಳೆಲ್ಲರಿಗೂ ಕಂಪ್ಯೂಟರ್ ತರಬೇತಿ, ಮಾನವ ಸಂಪನ್ಮೂಲ ತರಬೇತಿ, ಸಹಕಾರ ಕಾನೂನು ತರಬೇತಿ, ಬ್ಯಾಂಕಿಂಗ್ ಕಾನೂನು ತರಬೇತಿ ಇತ್ಯಾದಿ ಅಗತ್ಯ ಜ್ಞಾನದ ತರಬೇತಿ ನೀಡಬೇಕು. ಅಲ್ಲದೇ ಮರೆಯದೇ ಐವತ್ತು ವರ್ಷ ದಾಟಿದ ತನ್ನ ಎಲ್ಲ ನೌಕರರಿಗೆ "ಪುನರ್ಮನನ (Refreshing)ತರಬೇತಿ" ನೀಡಲು ಮರೆಯಬಾರದು. ಬ್ಯಾಂಕಿನ ಮುಖ್ಯ ಆಸ್ತಿಗಳಲ್ಲಿ ಈ ಜೀವಂತ ಆಸ್ತಿ (ಮಾನವ ಸಂಪನ್ಮೂಲ)ಯೂ ಒಂದಾದುದರಿಂದ ಈ ಆಸ್ತಿಯನ್ನು ಎಂದೂ ಕಡೆಗಣಿಸಬಾರದು.

೫. ಬ್ಯಾಂಕಿನ ಶಾಖೆಗಳ ಎದುರಿಗೆ ಆ ಶಾಖೆ ನೀಡುವ ಗ್ರಾಹಕ ಸೇವೆಗಳ ವಿವರ ಬರೆಸಬೇಕು – ಠೇವಣಿ ವಿವರ, ಠೇವಣಿ ಸಾಲಗಳ ಬಡ್ಡಿ ವಿವರ ಬರೆಸಬೇಕು – ಈ ಬಗ್ಗೆ ಕರಪತ್ರಗಳು, ಬ್ರೋಶರು (Brochures)ಗಳನ್ನು ಸಹ ಮುದ್ರಿಸಬಹುದು. ದ.ಕ. ಜಿಲ್ಲಾ ಡಿಸಿಸಿ ಬ್ಯಾಂಕು ಮಾಡಿರುವಂತೆ ಆ ಜಿಲ್ಲೆಯ ಗಡಿ ಊರುಗಳಲ್ಲಿ ಆ ಜಿಲ್ಲೆಗೆ ಸ್ವಾಗತಿಸುವ ಬೋರ್ಡ್ ಬರೆಸಿ, ತಮ್ಮ ಬ್ಯಾಂಕಿಗೂ ಭೇಟಿ ನೀಡುವಂತೆ ಸಾರ್ವಜನಿಕರನ್ನು ಆಮಂತ್ರಿಸಬಹುದಾಗಿದೆ. ಪತ್ರಿಕೆಗಳಲ್ಲಿ (ಸ್ಥಳೀಯ ಮತ್ತು ರಾಜ್ಯ ಮಟ್ಟದ) ಆಗಾಗ ಜಾಹೀರಾತನ್ನೂ ಸಹ ನೀಡಬಹುದಾಗಿದೆ.

೬. ಬಸ್ ನಿಲ್ದಾಣ,ರೈಲು ನಿಲ್ದಾಣಗಳಲ್ಲಿ ಬ್ಯಾಂಕಿನ ಖರ್ಚಿನಿಂದ ವೇಳಾಪಟ್ಟಿ ಬರೆಸಿದರೆ ಸಾರ್ವಜನಿಕರಿಗೆ ಅನುಕೂಲ – ಇಂತಹ ಸಾರ್ವಜನಿಕೋಪಯೋಗೀ ಫಲಕವನ್ನು ಆಯಾ ಊರುಗಳಿಗೆ ಸಂಬಂಧಿಸಿದಂತೆ ಅಲ್ಲಿಯ ಅಗತ್ಯಗಳನ್ನು ನೋಡಿ ಬರೆಸಬಹುದಾಗಿದೆ. (ಫಲಕದ ಕೊನೆಗೆ ಬ್ಯಾಂಕಿನ ಬಗ್ಗೆಯೂ ಚಿಕ್ಕ ಜಾಹೀರಾತು, ಹೆಸರು ಬರೆಸುವ ಜಾಣ್ಮೆ ತೋರಲು ಮರೆಯಬಾರದು).

೭. ವಿಮೆಸಹಿತ ಠೇವಣಿ, ಹೆಚ್ಚು ಸ್ವಸಹಾಯ ಗುಂಪುಗಳ ನಿರ್ಮಾಣ ಮತ್ತು ಜೋಡಣೆ (ಲಿಂಕೇಜ್), ಕಿಸಾನ್ ಕ್ರೆಡಿಟ್ ಕಾರ್ಡ್‌ಗಳ ಬಳಕೆ, ವಾಹನ ಸಾಲ, ಚಿನ್ನಾಭರಣ ಸಾಲ ಇತ್ಯಾದಿ ಕೃಷಿಯೇತರ ಸಾಲಗಳು ಹೆಚ್ಚಾಗಿ ನೀಡಿಕೆ, ದೂರವಾಣಿ ಬಿಲ್ಲು, ವಿದ್ಯುಚ್ಛಕ್ತಿ ಬಿಲ್ಲು ಇತ್ಯಾದಿಗಳನ್ನು ಸಾರ್ವಜನಿಕರಿಂದ ಸಂಗ್ರಹಿಸಿ ಸಂಬಂಧಿಸಿದ ಇಲಾಖೆಗೆ ಪಾವತಿಸುವುದು.... ಇತ್ಯಾದಿಗಳಿಂದಲೂ ಹೆಚ್ಚಿನ ಬಡ್ಡಿ / ಕಮೀಶನ್ ಗಳಿಸಬಹುದಾಗಿದೆ.

೮. ಅದಕ್ಷ ನೌಕರರಿಗೆ ಶಿಕ್ಷೆ, ದಕ್ಷ ನೌಕರರಿಗೆ ಬಡ್ತಿ ಅಥವಾ ವಾರ್ಷಿಕ ವೇತನ ನೀಡಿಕೆ ಇತ್ಯಾದಿಗಳಿಂದ ಪ್ರೋತ್ಸಾಹ ಮಾಡುವ ಮೂಲಕವೂ ನೌಕರರಲ್ಲಿ ದಕ್ಷತೆ ಹೆಚ್ಚಿಸ ಬಹುದಾಗಿದೆ.

೯. ಆಡಳಿತ ವರ್ಗ ನಿಷ್ಪಕ್ಷಪಾತವಾಗಿದ್ದು, ಸ್ವಜನ ಪಕ್ಷಪಾತ ಮಾಡದೇ, ತನ್ನ ಬ್ಯಾಂಕಿನ ಅಭಿವೃದ್ಧಿಯೇ ತನ್ನ ಕರ್ತವ್ಯ ಎಂದು ತಿಳಿದು ಕಾರ್ಯೋನ್ಮುಖವಾಗಬೇಕು. ಮತ್ತು ತನ್ನ ನೌಕರರಲ್ಲೂ ಅದರಲ್ಲೂ ಅನುಭವೀ ಹಿರಿಯ ನೌಕರರಲ್ಲಿ ಎಲ್ಲರೂ ದಡ್ಡರು ಎಂದು ಭಾವಿಸದೇ, ಕೆಲವರಾದರೂ ಹಿರಿಯ ನೌಕರರ/ಅಧಿಕಾರಿಗಳ ಅಭಿಪ್ರಾಯ, ಸಲಹೆಗಳನ್ನು ಆಗಾಗ ಪಡೆಯುತ್ತಿರಬೇಕು, ಅಂತಿಮ ನಿರ್ಣಯ ಆಡಳಿತಮಂಡಳಿಗೇ ಬಿಟ್ಟಿದ್ದು. ಹೀಗೆ ಮಾಡುವುದರಿಂದ ಆಡಳಿತ ವರ್ಗದ "ತಲೆನೋವು" ಬಹಳ ಮಟ್ಟಿಗೆ ಕಮ್ಮಿ ಆಗುವುದಲ್ಲದೇ ನೌಕರರಲ್ಲೂ ಆಡಳಿತ ವರ್ಗದ ಬಗ್ಗೆ ಗೌರವ ಅಭಿಮಾನ ಹೆಚ್ಚುತ್ತದೆ.

ಮೇಲೆ ಹೇಳಿದಂತೆ, ಸಹಕಾರ ಬ್ಯಾಂಕುಗಳು ಎಚ್ಚೆತ್ತು, ಈಗಿನಿಂದಲೇ 'ಕಾಲಾಯ ತಸ್ಮೈ ನಮಃ' ಎಂಬಂತೆ ಕಾಲಕ್ಕನುಗುಣವಾಗಿ ಗ್ರಾಹಕ ಸೇವೆ ಮಾಡಬೇಕು – ಇದರಿಂದ ಗ್ರಾಹಕನೂ ಬೆಳೆಯುತ್ತಾನೆ, ಬ್ಯಾಂಕೂ ಬೆಳೆಯುತ್ತದೆ, ನಿಸ್ಸಂಶಯ! – ಶುಭಸ್ಯ ಶೀಘ್ರಂ !!

*

ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳನ್ನು ಬಲಪಡಿಸುವುದು ಹೇಗೆ?

೧೯೦೪ರಲ್ಲಿ ಗದಗ ಜಿಲ್ಲೆಯ ಕಣಗಿನಹಾಳ ಗ್ರಾಮದಲ್ಲಿ ಮೊದಲ ಸಹಕಾರ ಸಂಘ ಸ್ಥಾಪನೆಯಾಗಿ ಸಹಕಾರ ಚಳುವಳಿಗೆ ನಾಂದಿಯಾಯಿತು. ಸಹಕಾರ ಚಳುವಳಿ ಬಡಜನರ ಏಳ್ಗೆಗಾಗಿ ಇರುವ ಕಾರಣ ಸಹಕಾರ ಚಳುವಳಿ ಸೋಲಲು ಬಿಡಬಾರದು – ಇಂದು ಸಹಕಾರ ಚಳುವಳಿ ಸೋಲದಿದ್ದರೂ ನಿರೀಕ್ಷಿತ ಮಟ್ಟದಲ್ಲಿ ಬೆಳವಣಿಗೆ ಹೊಂದಿಲ್ಲದಿರುವುದು ಗಮನಾರ್ಹ.

ಸಹಕಾರ ಚಳುವಳಿಗೆ ಸಂಬಂಧಿಸಿದಂತೆ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕು (ಡಿ.ಸಿ.ಸಿ. ಬ್ಯಾಂಕು) ವಹಿಸುವ ಪಾತ್ರ ಮುಖ್ಯವಾದುದು. ಕೇವಲ ಬೆರಳೆಣಿಕೆಯಷ್ಟು ಡಿ.ಸಿ.ಸಿ. ಬ್ಯಾಂಕುಗಳು ಮಾತ್ರ ನಮ್ಮ ರಾಜ್ಯದಲ್ಲಿ ಬೆಳವಣಿಗೆ ಹೊಂದಿದ್ದರೂ, ಉಳಿದ ಡಿ.ಸಿ.ಸಿ. ಬ್ಯಾಂಕುಗಳೂ ಸಹ ಬೆಳವಣಿಗೆ ಹೊಂದಲು ವಿಪುಲ ಅವಕಾಶಗಳಿವೆ. ಸಹಕಾರ ಬ್ಯಾಂಕುಗಳ ಬಲವೇ ಬಡಜನರ ಬಲವಾಗುವ ಕಾರಣ ಎಲ್ಲ ಡಿ.ಸಿ.ಸಿ. ಬ್ಯಾಂಕುಗಳೂ ಇಂದು ಬಲ ಹೊಂದತಕ್ಕ ತುರ್ತು ಅಗತ್ಯವಿದೆ.

ಈ ಕೆಳಗಿನ ವಿಧಾನಗಳಿಂದ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಬಲವೃದ್ಧಿಸಲು ಸಾಧ್ಯ.

೧. ಅಂತರ (ಗ್ಯಾಪ್) ನಿರ್ಮೂಲನೆ

ಡಿಸಿಸಿ ಬ್ಯಾಂಕುಗಳು ನಷ್ಟ ಹೊಂದಲು ಪ್ರಮುಖ ಕಾರಣಗಳಲ್ಲೊಂದು ಅಂತರ (GAP–ಗ್ಯಾಪ್). ಸದಸ್ಯರಿಂದ ಸಂಘಕ್ಕೆ ಬರತಕ್ಕ ಸಾಲ ಬಾಕಿಗೂ ಸಂಘದಿಂದ ಬ್ಯಾಂಕಿಗೆ ಪಾವತಿಸತಕ್ಕ ಸಾಲ ಬಾಕಿಗೂ ಇರುವ ವ್ಯತ್ಯಾಸವೆ ಈ ಅಂತರ. ಸಂಘದ ಮಟ್ಟದಲ್ಲಿ ನಡೆಯುವ ಹಣ ದುರುಪಯೋಗ, ಅಸಮರ್ಪಕ ಸಾಲ ವಸೂಲಿ ಇತ್ಯಾದಿಗಳೇ ಈ 'ಅಂತರ'ಕ್ಕೆ ಮುಖ್ಯ ಕಾರಣಗಳು. ಅಂತರದ ನಿರ್ಮೂಲನೆ ತಕ್ಷಣ ಪೂರ್ತಿಯಾಗಿ ಮಾಡಲಾಗದಿದ್ದರೂ, ಸತತವಾಗಿ ಪ್ರಯತ್ನಿಸಿ 'ಅಂತರ'ದ ನಿರ್ಮೂಲನೆಗೆ ಅಪೆಕ್ಸ್ ಬ್ಯಾಂಕು ಮತ್ತು ಕರ್ನಾಟಕ ಸರ್ಕಾರ ಆರ್ಥಿಕ ನೆರವು ನೀಡಿ ಸಹಾಯ ಮಾಡ ಹೊರಟಿರುವುದು ಉಲ್ಲೇಖನೀಯ.

೨. ಪಾಲುಧನ (ಷೇರು) ಸಂಗ್ರಹ

ಬ್ಯಾಂಕಿಗೆ ಇನ್ನೂ ಹೆಚ್ಚಿನ ಷೇರುಧನ ಸಂಗ್ರಹಿಸಿ, ತನ್ಮೂಲಕ ದುಡಿಯುವ ಬಂಡವಾಳ ಹೆಚ್ಚಿಸಿಕೊಂಡು ಬ್ಯಾಂಕಿನ ಆರ್ಥಿಕ ಬಲ ವೃದ್ಧಿಗೊಳಿಸಿಕೊಳ್ಳಬಹುದಾಗಿದೆ. "ಪಾಲು ಧನ (ಷೇರು) ಸಂಗ್ರಹ ಚಳುವಳಿ," "ಷೇರು ಸಂಗ್ರಹ ಮಾಸಾಚರಣೆ"... ಇತ್ಯಾದಿ ಮಾಡಿ ಷೇರು ಸಂಗ್ರಹಿಸಬಹುದಾಗಿದೆ. ಸರ್ಕಾರದಿಂದ ಸಹ ಷೇರು ಧನ ಸಹಾಯ (ಎಲ್ಟಿಓ ನಿಧಿಯಿಂದ) ಪಡೆಯಬಹುದಾಗಿದೆ. ಬ್ಯಾಂಕಿನ ಉಪನಿಯಮದಲ್ಲಿ ಅಗತ್ಯವಾದರೆ ತಿದ್ದುಪಡಿ ಮಾಡಿಕೊಂಡು ಸಹ ಸದಸ್ಯ (ಎಸ್ಸೋಸಿಯೇಟ್ ಮೆಂಬರ್) ರಿಂದಲೂ ಷೇರು ಧನ ಪಡೆಯಬಹುದಾಗಿದೆ.

೩. ಠೇವಣಿ ಸಂಗ್ರಹ

ಹೆಚ್ಚು ಹೆಚ್ಚು ಠೇವಣಿಗಳನ್ನು ಸಾರ್ವಜನಿಕರಿಂದ, ಸದಸ್ಯರಿಂದ ಸಂಗ್ರಹಿಸಿಕೊಂಡು,

ದುಡಿಯುವ ಬಂಡವಾಳವನ್ನು ಹೆಚ್ಚಿಸಿಕೊಳ್ಳಬಹುದು. ಸಂಚಯ (ಎಸ್‌ಬಿ), ಚಾಲ್ತಿ (ಕರೆಂಟ್) ಖಾತೆಗಳಿಗೆ ಕಡಿಮೆ ಬಡ್ಡಿದರದಲ್ಲಿ ಠೇವಣಿ ಸಿಗುವ ಕಾರಣ, ಬ್ಯಾಂಕುಗಳು ಆದಷ್ಟೂ ಜಾಸ್ತಿ ಪ್ರಮಾಣದಲ್ಲಿ ಈ ಕಡಿಮೆ ದರದ (ಲೋಕಾಸ್ಟ್) ಠೇವಣಿಗಳನ್ನು ಸಂಗ್ರಹಿಸುವುದು ಲಾಭಕರ. ಹೀಗೆ ಕಡಿಮೆ ಬಡ್ಡಿದರ ಮತ್ತು ಹೆಚ್ಚಿನ ಬಡ್ಡಿದರ (ಮುದ್ದತು ಠೇವಣಿ ಇತ್ಯಾದಿಗಳಿಗೆ ಕೊಡುವಂತಹುದು)ದ ಠೇವಣಿಗಳ ಅನುಪಾತವು ಕ್ರಮವಾಗಿ ೬೦:೪೦ ಇದ್ದರೆ ಒಳಿತು ಎಂದು ಬ್ಯಾಂಕಿಂಗ್ ತಜ್ಞರು ಅಭಿಪ್ರಾಯ ಪಡುತ್ತಾರೆ. ಈ ಹಿನ್ನೆಲೆಯಲ್ಲಿ ಬ್ಯಾಂಕುಗಳು ಕಡಿಮೆ ದರದಲ್ಲಿ ಠೇವಣಿ ಸಿಗುವ ಸ್ವಯಂ ಸೇವಾ ಗುಂಪು (ಎಸ್.ಹೆಚ್.ಜಿ)ಗಳನ್ನು ಹೆಚ್ಚು ಹೆಚ್ಚಾಗಿ ರಚಿಸಿಕೊಳ್ಳುವುದು ಸೂಕ್ತ. ಕಡಿಮೆ ದರದಲ್ಲಿ ಠೇವಣಿ ಸಿಗುವ ಪಿಗ್ಮಿ ಠೇವಣಿಗಳನ್ನೂ ಸಹ ಸಂಗ್ರಹಿಸಬಹುದಾಗಿದೆ – ಆದರೆ ಪಿಗ್ಮಿ ಠೇವಣಿಯನ್ನು ಬ್ಯಾಂಕಿನ ನೌಕರರಲ್ಲದವರು ಮಾಡಿದರೆ ಅಂತಹವರು ಭವಿಷ್ಯನಿಧಿ ಕಟ್ಟಬೇಕಾಗುವುದು. ಇತ್ಯಾದಿ ಹೊಸ ಸಮಸ್ಯೆಗಳು ಈಚೆಗೆ ಉದ್ಭವವಾಗಿರುವುದರಿಂದ ಬ್ಯಾಂಕಿನ ನೌಕರರು (ಉದಾಹರಣೆಗೆ: ಸೇವಕರು) ಈ ಪಿಗ್ಮಿ ಸಂಗ್ರಹಣೆ ಕೆಲಸವನ್ನು ತಮ್ಮ ಬಿಡುವಿನ ವೇಳೆಯಲ್ಲಿ ಮಾಡಬಹುದಾಗಿದೆ. "ಠೇವಣಿ ಸಂಗ್ರಹ ಮಾಸಾಚರಣೆ" ಮಾಡಿಯೂ ಹೆಚ್ಚಿನ ಠೇವಣಿ ಸಂಗ್ರಹಿಸಬಹುದಾಗಿದೆ.

೪. ಸಾಲ ವಿತರಣೆ

ಹೆಚ್ಚು ಹೆಚ್ಚು ಬಡ್ಡಿ ತರುವ ಕೃಷಿಯೇತರ ಸಾಲಗಳನ್ನು (ಉದಾಹರಣೆಗೆ: ವಾಹನ ಸಾಲ, ಬಂಗಾರದ ಆಭರಣಗಳ ಸಾಲ, ಗೃಹೋಪಕರಣ ಸಾಲ, ಸಂಬಳದಾರರ ಸಾಲ, ವ್ಯಾಪಾರ ಸಾಲ ಇತ್ಯಾದಿ) ಹೆಚ್ಚು ಹೆಚ್ಚು ಬಿಡುಗಡೆಗೊಳಿಸಿ ಕೊಟ್ಟು ಬಂಡವಾಳ ಹೆಚ್ಚಿಸಿಕೊಳ್ಳಬಹುದು. ಸಾಲ ಬಿಡುಗಡೆಗೊಳಿಸಿದ ನಂತರ ಪಡೆದ ಉದ್ದೇಶಕ್ಕೇನೇ ಆ ಸಾಲದ ಹಣದ ವಿನಿಯೋಗ ಆಗಿದೆಯೇ ಎಂದು ನೋಡಬೇಕು. ಸಾಲದ ಹಣದ ದುರ್ವಿನಿಯೋಗ, ದುರ್ಬಳಕೆ ಆಗದಂತೆ ಎಚ್ಚರ ವಹಿಸುವುದೂ ಸಹ ಮುಂದೆ ವಸೂಲಿ ದೃಷ್ಟಿಯಿಂದ ಮುಖ್ಯವಾದುದು.

೫. ಸಾಲ ವಸೂಲಿ

ಕೊಟ್ಟ ಸಾಲವನ್ನು ಹೆಚ್ಚಿನ ಪ್ರಮಾಣದಲ್ಲಿ ವಸೂಲು ಮಾಡಿ ಸುಸ್ತಿಯಾಗಲು ಬಿಡದಿರುವದು ಬ್ಯಾಂಕಿನ ಬಲವೃದ್ಧಿಗೆ ಪೂರಕ. ಸಾಲ ಈಗಾಗಲೇ ಸುಸ್ತಿಯಾಗಿದ್ದರೆ ಅಂತಹ ಸಾಲಗಾರರ ವಿರುದ್ಧ ಕಾನೂನು ಕ್ರಮ ಕೈಗೊಂಡು ವಸೂಲಿಗೆ ಕ್ರಮ ಕೈಗೊಳ್ಳಬೇಕು. ಕೃಷಿಯೇತರ ಸಾಲಗಳಾದ ವಾಹನ ಸಾಲವನ್ನು 'ಸೀಜರ್' (Seizure) ಮೂಲಕ ವಾಹನವನ್ನು ಮುಟ್ಟುಗೋಲು ಹಾಕಿಕೊಂಡು ಮತ್ತು ಆಭರಣ ಸಾಲಗಳನ್ನು ಆಭರಣದ ಹರಾಜು ಮಾಡುವುದರಿಂದಲೂ, ಗೃಹಸಾಲಗಳನ್ನು ಗೃಹ ಹರಾಜು ಮೂಲಕವೂ ವಸೂಲಿ ಮಾಡಬಹುದು. ಸಾಲವಸೂಲಿಗಾಗಿಯೇ ಪ್ರತ್ಯೇಕವಾದ ವಾಹನವನ್ನು ಇಟ್ಟುಕೊಳ್ಳುವುದು ಒಳಿತು. ಆದರೆ ವರ್ಷದ ಎಲ್ಲ ದಿನಗಳಲ್ಲಿ ವಸೂಲಿ ಇಲ್ಲವಾದರೆ ವಸೂಲಿ ಕಾಲದಲ್ಲಿ ಮಾತ್ರ ಆ ಬಗ್ಗೆ ಬಾಡಿಗೆ ವಾಹನವನ್ನು ಬಳಸುವುದು ಹಿತಕರ. ಸಾಲ ವಸೂಲಿಗಾಗಿಯೇ ವಿಶೇಷ ತರಬೇತಿ ಹೊಂದಿದ ಅಧಿಕಾರಿಗಳನ್ನು ಈ ಬಗ್ಗೆ ನೇಮಿಸುವುದು ಜಾಣತನ.

೬. ನಾಮಕರಣ

ಅಪೆಕ್ಸ್ ಬ್ಯಾಂಕು, ಸರ್ಕಾರದಿಂದ ನಾಮಕರಣಗೊಂಡ ಸದಸ್ಯರು ತನ್ನನ್ನು ನಾಮಕರಣ ಮಾಡಿ ಕಳಿಸಿದವರಿಗೆ ಹಿತವಾಗುವಂತೆ ಕೆಲಸ ಮಾಡುವುದರಿಂದ ಸಹಕಾರ ಚಳುವಳಿಗೆ ಪೆಟ್ಟು

ಬಿದ್ದು, ಅಂತಹ ಸಂಸ್ಥೆಗೆ ನಷ್ಟ ಉಂಟಾಗುವ ಸಾಧ್ಯತೆ ಇದೆ ಎಂದು ಸಹಕಾರೀ ತಜ್ಞರು ಅಭಿಪ್ರಾಯಪಟ್ಟು, ಸರ್ಕಾರ ನಾಮಕರಣವನ್ನು ಕೈಬಿಡಬೇಕು, ಇಲ್ಲವೇ ಆದಷ್ಟೂ ಕಡಿಮೆ ಸಂಖ್ಯೆಯಲ್ಲಿ ನಾಮಕರಣ ಮಾಡಬಹುದು ಎಂದು ಹೇಳುತ್ತಾರೆ.

೭. ಪ್ರಚಾರ

ಡಿ.ಸಿ.ಸಿ. ಬ್ಯಾಂಕುಗಳು ಗ್ರಾಮಾಭಿವೃದ್ಧಿಯಲ್ಲಿ ವಹಿಸುವ ಪಾತ್ರ ಹಳ್ಳಿ ಹಳ್ಳಿಯ ಜನರಿಗೆ ತಿಳಿದಿರಬೇಕು. ಇದಕ್ಕೆ ಪ್ರಚಾರ/ಜಾಹೀರಾತು ಅಗತ್ಯ. ಪತ್ರಿಕೆಗಳ ಮೂಲಕ ಪ್ರಚಾರ ಯಾವುದೇ ಕಾರಣಕ್ಕೆ ಅಸಾಧ್ಯ ಎಂದಾದರೆ, ಬ್ಯಾಂಕಿನ ಶಾಖೆಯ ಹೊರಗೆ ಬ್ಯಾಂಕಿನಲ್ಲಿ ಸಿಗುವ ಠೇವಣಿ, ಸಾಲ ಸೌಲಭ್ಯಗಳು, ಇನ್ನಿತರ ಸೇವೆಗಳ ಬಗ್ಗೆ ಫಲಕ (ಬೋರ್ಡು) ಬರೆಸಿ ತೂಗಿ ಹಾಕಬಹುದು. ಕರಪತ್ರ ಮುದ್ರಿಸಿ ಹಂಚಬಹುದು. ಗ್ರಾಹಕರ ಸಭೆ ಕರೆದು ಬ್ಯಾಂಕು ನೀಡುತ್ತಿರುವ ಸೇವಾ ವಿವರ ಹೇಳಬಹುದು, ಗ್ರಾಹಕರ ಸಂಕಷ್ಟ ಆಲಿಸಬಹುದು.

೮. ನಿಷ್ಠೆ, ದಕ್ಷತೆ, ನಿಸ್ವಾರ್ಥ

ನೌಕರರ ನಿಷ್ಠೆ ಆಡಳಿತ ಮಂಡಳಿಯ ದಕ್ಷತೆ, ನಿಸ್ವಾರ್ಥತೆ, ಛಲ ಇವುಗಳ ಸಮ್ಮಿಲನವಾದರೆ ಅಂತಹ ಸಹಕಾರ ಸಂಸ್ಥೆ ಖಂಡಿತಾ ಬೆಳವಣಿಗೆ ಹೊಂದುತ್ತದೆ.

೯. ಪುನರ್ಧನ (Refinance) ಸೌಲಭ್ಯದ ಬಳಕೆ

ಕೆಲವು ನಿರ್ದಿಷ್ಟ ಸಾಲಗಳಿಗೆ ನಬಾರ್ಡ್/ರಿಜರ್ವ್ ಬ್ಯಾಂಕಿನಿಂದ ಪುನರ್ಧನ ಸೌಲಭ್ಯ ಇದೆ . ಅತಿ ಕಡಿಮೆ ಬಡ್ಡಿದರದಲ್ಲಿ ಈ ಧನ ಬ್ಯಾಂಕುಗಳಿಗೆ ಸಿಗುತ್ತದೆ. ಕಡಿಮೆ ಬಡ್ಡಿದರದ ಈ ಮೊಬಲಗನ್ನು ಹೆಚ್ಚಿನ ಬಡ್ಡಿ ಸಿಗುವ ಕೃಷಿಯೇತರ ಸಾಲ ನೀಡಲು ಬಳಸಿಕೊಂಡು ಬ್ಯಾಂಕಿನ ಆರ್ಥಿಕ ಬಲ ವೃದ್ಧಿಸಬಹುದು. ಹಲವಾರು ಡಿ.ಸಿ.ಸಿ. ಬ್ಯಾಂಕುಗಳು ಪುನರ್ಧನ ಸೌಲಭ್ಯ ಬಳಸಿಕೊಳ್ಳುತ್ತಿಲ್ಲ ಎಂಬ ದೂರು ಇರುವ ಕಾರಣ ಈ ವಿಷಯ ಇಲ್ಲಿ ತೀರಾ ಪ್ರಸ್ತುತ.

೧೦. ತರಬೇತಿ

ಬ್ಯಾಂಕಿನ ಆರ್ಥಿಕ ಬಲವೃದ್ಧಿಗೆ ಮತ್ತು ಸರ್ವತೋಮುಖ ಬೆಳವಣಿಗೆಗಾಗಿ ಆಡಳಿತ ಮಂಡಳಿಯ ಸದಸ್ಯರಿಗೂ, ನೌಕರ ವರ್ಗದವರಿಗೂ ಸೂಕ್ತ ತರಬೇತಿಯ ಅಗತ್ಯವಿದೆ.

೧೧. ಕಂಪ್ಯೂಟರೀಕರಣ

ಬ್ಯಾಂಕುಗಳ ಕಂಪ್ಯೂಟರೀಕರಣಕ್ಕೆ ಅಪೆಕ್ಸ್ ಬ್ಯಾಂಕು, ನಬಾರ್ಡ್‌ಗಳಿಂದ ಧನ ಸಹಾಯ ಲಭ್ಯ – ಇದರ ಸದುಪಯೋಗ ಮಾಡಿಕೊಂಡು ಬ್ಯಾಂಕುಗಳ ಸಂಪೂರ್ಣ ಕಂಪ್ಯೂಟರೀಕರಣಗೊಳಿಸಿದರೆ ಅದೆಷ್ಟೋ ಸಮಸ್ಯಾ ಪರಿಹಾರ ತಂತಾನೇ ಆಗುತ್ತವೆ!

*

ಸಹಕಾರ ಸಂಘಗಳು – ಸಾಮಾಜಿಕ ಹೊಣೆ, ಕರ್ತವ್ಯ

ಸಹಕಾರ ಸಂಘಗಳು ತಮ್ಮ ಜವಾಬ್ದಾರಿ ಅರಿತು ದಕ್ಷತೆ, ಪ್ರಾಮಾಣಿಕತೆ, ನಿಷ್ಠೆ, ಸಮಾನತೆ ದೃಷ್ಟಿಯಿಂದ ಕೆಲಸ ಮಾಡಿದರೆ ಅಂತಹ ರಾಜ್ಯ ಮತ್ತು ದೇಶ ಸರ್ವತೋಮುಖ ಅಭಿವೃದ್ಧಿ ಹೊಂದುವುದರಲ್ಲಿ ಸಂಶಯವಿಲ್ಲ.

ಗಾಂಧಿ ನುಡಿ

"ಪ್ರತಿ ಗ್ರಾಮದಲ್ಲೂ ಒಂದು ಶಾಲೆ, ಒಂದು ಪಂಚಾಯತ್ ಕಛೇರಿ ಮತ್ತು ಒಂದು ಸಹಕಾರ ಸಂಘ ಸ್ಥಾಪನೆಗೊಂಡರೆ, ಅಂತಹ ಗ್ರಾಮ ಎಲ್ಲ ರೀತಿಯಲ್ಲೂ ಬೆಳವಣಿಗೆ ಹೊಂದುವದು" ಎಂಬ ಗಾಂಧಿವಾಣಿ ಒಂದು ಅಮೃತವಾಣಿ. ಈ ಮಾತು ಹಳ್ಳಿ ಹಳ್ಳಿಗಳಲ್ಲಿ ಸಹಕಾರ ಸಂಘ ಇರಬೇಕಾದ ಅವಶ್ಯಕತೆಯನ್ನು ಎತ್ತಿ ತೋರಿಸುತ್ತದೆ.

'ಸಹಕಾರ ಸಂಘ' ಎಂದರೇನು?

'ಸಹಕಾರ' ಎಂದರೆ ಕೂಡಿ ಕೆಲಸಮಾಡುವುದು – ಈ ರೀತಿಯ ಸಹಕಾರವನ್ನು, ಒಂದಗಳು ಕಂಡರೆ ತನ್ನ ಬಳಗವನ್ನೆಲ್ಲ ಕೂಗಿ ಕರೆಯುವ ಕಾಗೆಗಳಲ್ಲಿ, ಸಾಲುಗಟ್ಟಿ ತಮ್ಮ ಆಹಾರವನ್ನು ಒಯ್ದು ಒಂದೆಡೆ ಶೇಖರಿಸಿ ಇಡುವ ಇರುವೆಗಳಲ್ಲಿ ಸಹ ಕಾಣುತ್ತೇವೆ. ಮಾನವನ ಬಗ್ಗೆ ಹೇಳುವುದಾದರೆ "ಹಿಂದೂ ಅವಿಭಕ್ತ ಕುಟುಂಬ" ಒಳ್ಳೆಯ ಉದಾಹರಣೆ. ಇಂತಹ ಅವಿಭಕ್ತ ಕುಟುಂಬದಲ್ಲಿ ಅಣ್ಣ–ತಮ್ಮ, ಅವರ ಮಕ್ಕಳು, ಪಾಲಕರು ಇವರೆಲ್ಲ ಒಂದೆ ಮನೆಯಲ್ಲಿ ಒಟ್ಟಿಗೇ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಾರೆ.

ಇದೇ ರೀತಿ ಕೃಷಿ ಉದ್ದೇಶಕ್ಕಾಗಿ, ಕೃಷಿಯೇತರ ಉದ್ದೇಶಗಳಿಗಾಗಿ ಸಾಲ ಪಡೆಯಲು ಕೆಲವು ಸಮಾನ ಮನಸ್ಕ ಜನಸೇರಿ ಒಂದು ಸಂಘ ಕಟ್ಟಿಕೊಳ್ಳಬಹುದು ಅಥವಾ ತಮ್ಮ ಕೃಷಿ ಹುಟ್ಟುವಳಿ ಮಾರಾಟ ಮಾಡಲು ಕೆಲವು ರೈತರು ಸೇರಿ ಒಂದು ಸಂಘ ಕಟ್ಟಿಕೊಳ್ಳಬಹುದು – ಇಂತಹ ಸಹಕಾರ ಸಂಘಗಳಿಗೆ ಕ್ರಮವಾಗಿ ಪತ್ತಿನ ಸಹಕಾರ ಸಂಘ, ಕೃಷಿ ಉತ್ಪನ್ನ ಸಹಕಾರ ಮಾರಾಟ ಸಂಘ ಎನ್ನುತ್ತಾರೆ. ಇದೇ ರೀತಿಯಲ್ಲಿ ಹಾಲು ಮಾರಾಟ ಸಹಕಾರ ಸಂಘಗಳು, ಮಹಿಳಾ ವಿವಿಧೋದ್ಧೇಶ ಸಹಕಾರ ಸಂಘಗಳು, ತೆಂಗಿನ ಮತ್ತು ನಾರಿನ ಉತ್ಪನ್ನ ಕೈಗಾರಿಕಾ ಸಹಕಾರ ಸಂಘಗಳು, ನೌಕರರ ಸಹಕಾರ ಸಂಘಗಳು ಇತ್ಯಾದಿ ನೂರಾರು ಸಹಕಾರ ಸಂಘಗಳು ಈಗ ಅಸ್ತಿತ್ವದಲ್ಲಿವೆ.

"ಹೆಬ್ಬಾಗಿಲು"

"ಆರ್ಥಿಕ ಸ್ವಾತಂತ್ರ್ಯಕ್ಕೆ ಸಹಕಾರವೇ ಹೆಬ್ಬಾಗಿಲು" – ಮರೆಯುವಂತಿಲ್ಲ.

"ಸಹಕಾರ ಅಬಲರ ರಕ್ಷಾ ಕವಚವೇ ಹೊರತು ಸಬಲರ ಆಯುಧವಲ್ಲ"–

ನೆನಪಿಡತಕ್ಕ ಮಾತು.

ಹೀಗೆ ಬಂಡವಾಳಶಾಹಿಗಳ ಕಪಿಮುಷ್ಟಿಯಿಂದ ಬಡರೈತರನ್ನೂ, ಬಡಕಾರ್ಮಿಕರನ್ನೂ ಬಿಡಿಸಲು ಮೈ ತಳೆದ ಸಹಕಾರ ಸಂಘಗಳು ನಿಜವಾಗಿಯೂ ಸಮಾಜಕ್ಕೆ ಅದರ ಅಭಿವೃದ್ಧಿಗೆ ಅಮೋಘ ಕಾಣಿಕೆ ನೀಡುತ್ತಿವೆ.

ಸಹಕಾರ ಸಂಘಗಳ ಪ್ರಾರಂಭ

೧೮೪೪ನೇ ಅಕ್ಟೋಬರ್ ೨೪ರಂದು ಬ್ರಿಟನ್‌ನ ರಾಕ್‌ಡೇಲ್ ಪಟ್ಟಣದ ೨೮ ಜನ ನೇಕಾರರು ಸೇರಿ, "ರಾಕ್‌ಡೇಲ್ ಸೊಸೈಟಿ ಆಫ್ ಈಕ್ವಿಟೇಬಲ್ ಪಯೋನೀರ್ಸ್" ಎಂಬ ಗ್ರಾಹಕರ ಸಂಘವನ್ನು ಸ್ಥಾಪಿಸಿದರು – ಇದುವೇ ಪ್ರಪಂಚದ ಪ್ರಪ್ರಥಮ ಸಹಕಾರ ಸಂಘ! ಭಾರತದ ಮಟ್ಟಿಗೆ ಹೇಳುವುದಾದರೆ, ದಿನಾಂಕ ೮–೫–೧೯೦೫ನೇ ಸೋಮವಾರ ಬೆಳಿಗ್ಗೆ ೯–೦೫ ಗಂಟೆಗೆ ಈಗಿನ ಗದಗ ಜಿಲ್ಲೆಯ ಕಣಗಿನಹಾಳ ಗ್ರಾಮದಲ್ಲಿ ಕೃಷಿಪತ್ತಿನ ಸಹಕಾರ ಸಂಘ ಸ್ಥಾಪಿಸಲ್ಪಟ್ಟಿತು – ಇದು ಭಾರತ ದೇಶದ ಮೊಟ್ಟ ಮೊದಲ ಸಹಕಾರ ಸಂಘ !!

ನಂತರ ಹಲವಾರು ಸಹಕಾರ ಸಂಘಗಳು ಭಾರತದಲ್ಲಿ ಸ್ಥಾಪನೆ ಆದವು – ಕರ್ನಾಟಕದಲ್ಲಿ ಈವರೆಗೆ ಸುಮಾರು ಇಪ್ಪತ್ತೊಂಬತ್ತು ಸಾವಿರ (೨೯,೦೦೦) ಸಹಕಾರ ಸಂಘಗಳು ಸ್ಥಾಪನೆ ಆಗಿದ್ದು, ಆ ಪೈಕಿ ಸುಮಾರು ಹದಿನೈದು ಸಾವಿರ (೧೫,೦೦೦) ಸಹಕಾರ ಸಂಘಗಳು ಮಾತ್ರ ಈಗ ಕೆಲಸ ಮಾಡುತ್ತಿವೆ ಮತ್ತು ಸುಮಾರು ಎರಡು ಕೋಟಿ ಸದಸ್ಯರು ಈ ಸಂಘಗಳಲ್ಲಿ ಇದ್ದಾರೆ !

ಅನ್ವಯಿಸುವ ನಿಯಮ, ಕಾನೂನುಗಳು

ಕರ್ನಾಟಕದ ಸಹಕಾರ ಸಂಘಗಳಿಗೆ ಅವುಗಳ ಉಪನಿಯಮ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ೧೯೫೯ ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು ೧೯೬೦ ಇವು ಅನ್ವಯಿಸುತ್ತವೆ – ಈ ಸಂಘಗಳು ಗ್ರಾಮ ಮಟ್ಟದ ವ್ಯವಸಾಯ ಸೇವಾ ಸಹಕಾರ ಸಂಘಗಳಿರಬಹುದು, ತಾಲ್ಲೂಕು ಮಟ್ಟದ ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳಿರಬಹುದು, ಜಿಲ್ಲಾ ಮಟ್ಟದ ಜನತಾ ಬಜಾರ್/ ಡಿಸಿಸಿ ಬ್ಯಾಂಕು ಇರಬಹುದು ಅಥವಾ ರಾಜ್ಯ ಮಟ್ಟದ ಅಪೆಕ್ಸ್ ಬ್ಯಾಂಕು ಇರಬಹುದು. ಈ ಸಹಕಾರ ಬ್ಯಾಂಕುಗಳು ನಬಾರ್ಡ್ ಮತ್ತು ರಿಜರ್ವ್ ಬ್ಯಾಂಕಿನ ಕಾನೂನುಗಳ ಪ್ರಕಾರ ಸಹ ಆರ್ಥಿಕ ಶಿಸ್ತು ಪಾಲನೆ ಮಾಡಬೇಕಾಗುತ್ತದೆ ಎಂಬುದು ಇಲ್ಲಿ ಗಮನಾರ್ಹ.

ಸಾಮಾಜಿಕ ಹೊಣೆ, ಕರ್ತವ್ಯ

"ಗ್ರಾಮ ಸ್ವರಾಜ್ಯ ಸ್ಥಾಪನೆ ಸಹಕಾರ ತತ್ವದಡಿ ಸಾಧ್ಯ" – ಗಾಂಧಿ

"ಜನತೆಯ ಆರ್ಥಿಕ ಸಂಕಷ್ಟಕ್ಕೆ ಸಹಕಾರ ದಿವ್ಯ ಔಷಧಿ."

"ಸಹಕಾರವಿದು ಶೋಷಣೆಗಲ್ಲ, ಸೇವೆಯಿದು ಲಾಭಕ್ಕಲ್ಲ."

"ಸಾಮಾಜಿಕ ಕಳಕಳಿಯೇ ಸಹಕಾರದ ಬುನಾದಿ, ಶೋಷಿತರನ್ನು ಮೇಲೆತ್ತುವುದೇ ಸಹಕಾರದ ಗುರಿ."

4

"ಸರ್ವರಿಗೆ ಸಮಬಾಳು, ಸರ್ವರಿಗೆ ಸಮಪಾಲು."

ಈ ಮೇಲಿನ ಕೆಲವು ಮುಖ್ಯ ನುಡಿಗಳು ಸಹಕಾರ ಸಂಘಗಳ ಹೊಣೆ, ಕರ್ತವ್ಯಗಳನ್ನು ಚೆನ್ನಾಗಿ ತಿಳಿಸುತ್ತಿವೆ!

ಗ್ರಾಮೀಣ ಅಭಿವೃದ್ಧಿ, ರೈತರ ಸರ್ವತೋಮುಖ ಅಭಿವೃದ್ಧಿ ಇವು ಪ್ರತಿಯೊಂದು ಸಹಕಾರ ಸಂಘದ ಪ್ರಮುಖ ಕರ್ತವ್ಯ, ಮುಖ್ಯ ಹೊಣೆಯೂ ಹೌದು. ಉತ್ತರ ಕನ್ನಡ ಜಿಲ್ಲೆಯ ಭೈರುಂಭೆ (ಸಿರಸಿ ತಾಲ್ಲೂಕು) ಸಹಕಾರ ಸಂಘ; ಕೊಡಗು, ದ.ಕ.–ಉ.ಕ. ಡಿಸಿಸಿ ಬ್ಯಾಂಕುಗಳು, ಚಿಕ್ಕಮಗಳೂರಿನ ಗೃಹನಿರ್ಮಾಣ ಸಹಕಾರ ಸಂಘ, ಭಟ್ಕಳ ಮತ್ತು ಕೊಪ್ಪ (ಚಿಕ್ಕಮಗಳೂರು ಜಿಲ್ಲೆ) ಬಳಿಯ ಕರಿಮನೆ ಭೂ ಬ್ಯಾಂಕು, ನಮ್ಮ ರಾಜ್ಯದ ಅಪೆಕ್ಸ್ ಬ್ಯಾಂಕು ಇವೆಲ್ಲ ಸಹಕಾರ ರಂಗದ ಮಾದರಿ ಸಂಸ್ಥೆಗಳು – ಚಿಕ್ಕಮಗಳೂರು ಜಿಲ್ಲೆಯ ಕೊಪ್ಪದ ಸಹಕಾರ ಸಾರಿಗೆಯೂ ಇಲ್ಲಿ ಉಲ್ಲೇಖನೀಯ – ತಮ್ಮ ತಮ್ಮ ವೃತ್ತಿಯ ಸದಸ್ಯರುಗಳಿಗೆ ಅಪಾರ ಸೇವೆ, ಸಹಾಯ ಸಲ್ಲಿಸಿ, ಸಾರ್ವಜನಿಕರಂಗದಲ್ಲಿ 'ಭೇಶ್' ಎನಿಸಿಕೊಂಡ ಈ ಮಾದರಿ ಸಂಸ್ಥೆಗಳು ಬಹುಮಾನ, ಪ್ರಶಸ್ತಿ ಪಡೆದಿವೆ.

ಸಮಸ್ಯೆಗಳು

ಕರ್ನಾಟಕದಂತಹ ವಿಶಾಲ ರಾಜ್ಯದಲ್ಲಿ ಇಂತಹ ಕೈಬೆರಳೆಣಿಕೆಯ ಸಹಕಾರ ಸಂಸ್ಥೆಗಳು ಯಶಸ್ಸಾದರೆ ಸಾಲದು –ಆರ್ಥಿಕ ಉದಾರೀಕರಣ, ಸದಸ್ಯರ ನಿರಾಸಕ್ತಿ, ತಾತ್ವಿಕ ಭಿನ್ನಾಭಿಪ್ರಾಯ, ಸ್ವಾರ್ಥ ಸಾಧಕ ಪದಾಧಿಕಾರಿಗಳ ಹುನ್ನಾರ, ಕಾನೂನುಗಳ ಬಿಗಿ ಹಿಡಿತ.... ಇವು ಸಹಕಾರ ಸಂಘಗಳು ಬೆಳವಣಿಗೆ ಹೊಂದಲು ಹಾಲಿ ಇರುವ ಕೆಲವು ಮುಖ್ಯ ಸಮಸ್ಯೆಗಳು.

ಹಾಗಾಗಿ, "ನಡೆದಷ್ಟೂ ದಾರಿ ಇದೆ, ಮಾಡಿದಷ್ಟೂ ಸಮಾಜಸೇವೆ ಇದೆ" ಎಂಬಂತೆ ಸಹಕಾರ ಸಂಘಗಳು ಸಾಕಷ್ಟು ಸಾಧಿಸಿದ್ದರೂ, ಸಾಧಿಸಲು ಇನ್ನೂ ಬಹಳಷ್ಟಿವೆ.

ಈಗ ಮೂರು ವರ್ಷಗಳ ಹಿಂದೆ ಕರ್ನಾಟಕದಲ್ಲಿ ಜಾರಿಗೆ ಬಂದಿರುವ "ಸೌಹಾರ್ದ ಕಾನೂನು" ಕರ್ನಾಟಕದ ಸಹಕಾರ ರಂಗದಲ್ಲಿ ಹೊಸ ಆಶಾಭಾವನೆ ಮೂಡಿಸಿದೆ.

ಚಿನ್ನದಂತಹ ಅವಕಾಶ

"ಮಾನವ ಜನುಮ ದೊಡ್ಡದು
ಇದ ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ"

ಎಂಬ ಪುರಂದರದಾಸರ ವಾಣಿಯಂತೆ ಸಹಕಾರ ಸಂಘಗಳ/ಸಂಸ್ಥೆಗಳ ಆಡಳಿತ ಚುಕ್ಕಾಣಿ ಹಿಡಿದವರು,

"ನಾನು ಎಲ್ಲರಿಗಾಗಿ
ಎಲ್ಲರೂ ನನಗಾಗಿ"

ಎಂಬುದನ್ನು ಎಂದೆಂದಿಗೂ ಮರೆಯದೇ, "ಪರೋಪಕಾರಾರ್ಥಂ ಇದಂ ಶರೀರಂ" ಎಂಬಂತೆ ನಿಸ್ವಾರ್ಥದಿಂದ ಕಾರ್ಯೋನ್ಮುಖರಾದರೆ, ಜನಸೇವೆಗೈಯಲು ಸಿಕ್ಕಿರುವ ಚಿನ್ನದಂತಹ ಅವಕಾಶವನ್ನು ಬಳಸಿಕೊಂಡರೆ, ಆಗ ಸಹಕಾರ ಸಂಘಗಳ ಹೊಣೆ, ಕರ್ತವ್ಯಗಳು ತಂತಾನೇ ಪೂರೈಸಲ್ಪಡುತ್ತವೆ! ಗ್ರಾಮೀಣಾಭಿವೃದ್ಧಿಯೂ ಆಗುತ್ತದೆ – ಇದಕ್ಕೆ ಸಂಶಯವಿಲ್ಲ, ಹಾಗಾಗಿ,

"ಸಹಕಾರ ಸಂಘ ಸಂಸ್ಥೆಗಳು ಹೆಚ್ಚಲಿ
ಸರ್ವಜನರ ಬಾಳಿನಲ್ಲಿ ದೀಪ ಹಚ್ಚಲಿ"

*

ಸಹಕಾರ ಸಂಘಗಳ ಬೆಳವಣಿಗೆಯಲ್ಲಿ ಆಡಳಿತ ಮಂಡಳಿ ಮತ್ತು ನೌಕರ ವರ್ಗದ ಪಾತ್ರ

ಭಾರತ ಎಂದರೆ ಹಳ್ಳಿಗಳೇ ಜಾಸ್ತಿ ಇರುವ ದೇಶ. ಇಲ್ಲಿಯ ಜನಸಂಖ್ಯೆ ಸುಮಾರು ೧೦೬ ಕೋಟಿ. ಈ ಪೈಕಿ ಶೇಕಡಾ ೭೫ಕ್ಕೂ ಮೀರಿ ರೈತ ಜನಸಂಖ್ಯೆ ನಮ್ಮ ದೇಶದಲ್ಲಿ ಇದೆ. ಹಾಗಾಗಿ ಭಾರತ ದೇಶದ ಅಭಿವೃದ್ಧಿ ಆಗಬೇಕಾದರೆ ಈ ರೈತರ ಅಭಿವೃದ್ಧಿ ಆಗಬೇಕು. ಈ ರೈತರ, ಗ್ರಾಮಗಳ ಏಳ್ಗೆಯು ಸುವ್ಯವಸ್ಥಿತ, ಅಭಿವೃದ್ಧಿ ಹೊಂದಿದ ಸಮರ್ಥ ಸಹಕಾರ ಸಂಘಗಳಿಂದ, ಸಹಕಾರ ಸಂಸ್ಥೆಗಳಿಂದ ಖಂಡಿತಾ ಸಾಧ್ಯ.

ಸಹಕಾರ ಸಂಘಗಳ ಪ್ರಾರಂಭ, ಶತಮಾನದತ್ತ ದಾಪುಗಾಲು

೧೯೦೪ರಲ್ಲಿ ಧಾರವಾಡ ಬಳಿಯ (ಈಗಿನ ಗದಗ ಜಿಲ್ಲೆಯ) ಕಣಗಿನಹಾಳ ಗ್ರಾಮದಲ್ಲಿ ಭಾರತ ದೇಶದ ಮೊಟ್ಟಮೊದಲ ಸಹಕಾರ ಸಂಘದ ಸ್ಥಾಪನೆ ಆಯಿತು – ಎಲ್ಲ ಕನ್ನಡಿಗರೂ ಹೆಮ್ಮೆ ಪಡತಕ್ಕ ವಿಷಯ ಇದು. ಈ ಸಂಘ ಸ್ಥಾಪನೆಯಾಗಿ ಮುಂದೆ ೦೮.೦೫.೦೫ ರಂದು ನೋಂದಾಯಿಸಲ್ಪಟ್ಟಿತು. ಶತಮಾನೋತ್ಸವ ಕಾಣುತ್ತಿರುವ ಮೊದಲ ಸಂಘದ ಬಗ್ಗೆ ನಿಜಕ್ಕೂ ಕರ್ನಾಟಕದ ಜನ ಶ್ಲಾಘನೀಯರು, ಅಭಿನಂದನೀಯರು.

ಹಾಲಿ ಪರಿಸ್ಥಿತಿ

ಈವರೆಗೆ ಸುಮಾರು ೨೯,೦೦೦ ಸಹಕಾರ ಸಂಘಗಳು ನಮ್ಮ ರಾಜ್ಯದಲ್ಲಿ ಸ್ಥಾಪನೆ ಆಗಿದ್ದು ಸುಮಾರು ೧೫೦೦೦ ಸಹಕಾರ ಸಂಘಗಳು ಮಾತ್ರ ಈಗ ಕೆಲಸ ಮಾಡುತ್ತಿವೆ. ಸುಮಾರು ಎರಡು ಕೋಟಿ ಜನ ಈ ಸಂಘಗಳಲ್ಲಿ ಸದಸ್ಯರಾಗಿದ್ದಾರೆ (ಕರ್ನಾಟಕದ ಜನಸಂಖ್ಯೆ ಸುಮಾರು ಐದೂವರೆ ಕೋಟಿ).

ಅಂದರೆ, ಸುಮಾರು ೧೪,೦೦೦ ಸಹಕಾರ ಸಂಘಗಳು ನಿಷ್ಕ್ರಿಯವಾಗಿವೆ. ಸಹಕಾರ ಸಂಘಗಳಿರುವ ಕೆಲವು ಗ್ರಾಮಗಳಲ್ಲಿ ಅಕ್ಕಿ, ಗೋಧಿ, ಸಕ್ಕರೆ, ಸೀಮೆ ಎಣ್ಣೆ ವಿತರಣೆಗೆ ಮಾತ್ರ ತಿಂಗಳಿನಲ್ಲಿ ಐದಾರು ದಿನ ಸಂಘದ ಬಾಗಿಲು ತೆರೆಯಲಾಗುತ್ತಿದೆ – ಆ ಸಂಘಗಳು ಉಳಿದ ದಿನಗಳಂದು ಬಾಗಿಲು ಮುಚ್ಚಿರುವುದು ಕಟು ಸತ್ಯ! ಹಾಗಾಗಿ ಅಂತಹ ಹಳ್ಳಿಗಳಲ್ಲಿ ಈ ಸಂಘಗಳು 'ತಿಂಗಳಿನಲ್ಲಿ ನಾಲ್ಕೈದು ದಿನ ಬಾಗಿಲು ತೆರೆಯೋ ಸೊಸೈಟಿ' ಎಂತಲೇ ಪ್ರಸಿದ್ಧಿ!

ಕಾಯ್ದೆ, ನಿಯಮಗಳು

ಸಹಕಾರ ಸಂಸ್ಥೆ ಪ್ರಾಥಮಿಕ ಸಹಕಾರ ಸಂಘ ಇರಲಿ, ಜನತಾ ಬಜಾರ್ ಇರಲಿ, ಡಿ.ಸಿ.ಸಿ. ಬ್ಯಾಂಕು, ಅಪೆಕ್ಸ್ ಬ್ಯಾಂಕೇ ಇರಲಿ...ಎಲ್ಲ ಸಹಕಾರ ಸಂಸ್ಥೆಯೂ ಸ್ಥಾಪನೆಯಾಗುವಾಗ ಸರ್ಕಾರ ಅನುಮೋದಿಸಿದ ಬೈಲಾ (ಉಪನಿಯಮ) ಹೊಂದಿರುತ್ತದೆ. ಈ ಉಪನಿಯಮ, ಕರ್ನಾಟಕ

ಸಹಕಾರ ಸಂಘಗಳ ಕಾಯ್ದೆ ೧೯೫೯, ಕರ್ನಾಟಕ ಸಹಕಾರ ಸಂಘಗಳ ನಿಯಮ ೧೯೬೦ ಗಳಲ್ಲಿ ಹೇಳಿರುವಂತೆ, ಅಂದರೆ ಈ ನಿಯಮ ಕಾನೂನುಗಳಂತೆ ಈ ಸಂಘಗಳು ನಡೆಯುತ್ತಿವೆ – ಈ ಕಾಯ್ದೆ, ನಿಯಮಗಳು ಹಾಕಿಕೊಟ್ಟ ಗೆರೆ ("ಲಕ್ಷ್ಮಣ ರೇಖೆ")ಯನ್ನು ಈ ಸಹಕಾರ ಸಂಸ್ಥೆಗಳು ದಾಟುವಂತಿಲ್ಲ!

ಶಾಸಕಾಂಗ, ಕಾರ್ಯಾಂಗ

ಸಹಕಾರ ಸಂಘದಲ್ಲಿ ಆಡಳಿತ ನೋಡಿಕೊಳ್ಳಲು ಇರುವ ನಿರ್ದೇಶಕರುಗಳ ಮಂಡಳಿಯೇ (ಶಾಸನ ರಚಿಸುವ) ಶಾಸಕಾಂಗ, ಇನ್ನು ಆಡಳಿತ ಮಂಡಳಿ ನಿರ್ದೇಶಿಸಿದಂತೆ ಸಂಘದ ಕಾರ್ಯ ಚಟುವಟಿಕೆಗಳನ್ನು ಕೈಗೊಳ್ಳುವ, ಜಾರಿಗೆ ತರುವ ಕಾರ್ಯ (ಕೆಲಸ) ಮಾಡುವ ನೌಕರರೇ ಕಾರ್ಯಾಂಗ. ಸಂಘದ ಬೆಳವಣಿಗೆ ಎಂದರೆ ಆ ಸಂಘದ ವ್ಯಾಪ್ತಿಯ ಗ್ರಾಮಗಳ, ಹಳ್ಳಿಗಳ ರೈತರ ಬೆಳವಣಿಗೆ ಎಂಬುದರಲ್ಲಿ ಎರಡು ಮಾತಿಲ್ಲ. ರೈತರ ಸರ್ವತೋಮುಖ ಅಭಿವೃದ್ಧಿ, ತನ್ಮೂಲಕ ಗ್ರಾಮದ ಅಭಿವೃದ್ಧಿಯೇ ಸಹಕಾರ ಸಂಘಗಳ ಮೂಲ ಉದ್ದೇಶ, ಧ್ಯೇಯ.

> **"ಸಾಮಾಜಿಕ ಕಳಕಳಿಯೇ ಸಹಕಾರದ ಬುನಾದಿ**
> **ಶೋಷಿತರನ್ನು ಮೇಲೆತ್ತುವುದೇ ಸಹಕಾರದ ಗುರಿ"**

ಮರೆಯಬಾರದ ಚಿನ್ನದಂತಹ ನುಡಿ!

ಅಂತೆಯೇ,

> **"ಸರ್ವರಿಗೆ ಸಮಪಾಲು**
> **ಸರ್ವರಿಗೆ ಸಮಬಾಳು"**

ಪಾಲಿಸತಕ್ಕ ನುಡಿ ಮುತ್ತುಗಳು!!

ಯಾವುದೇ ಸಹಕಾರಿ ಸಂಘವು ಬೆಳವಣಿಗೆ ಆಗಬೇಕಾದರೆ ಆ ಸಂಘದ ಎಲ್ಲ ನಿರ್ದೇಶಕರು ಪದಾಧಿಕಾರಿಗಳಲ್ಲಿ (ಸಹಕಾರಿಗಳಲ್ಲಿ) ಸಹಕಾರ ಇರಬೇಕು. ಇಂತಹ ಆಡಳಿತ ಮಂಡಳಿ ಮತ್ತು ನೌಕರರ ಮಧ್ಯೆ ಪರಸ್ಪರ ಅರ್ಥಮಾಡಿಕೊಂಡು ಕೆಲಸಮಾಡುವ ಸಾಮರಸ್ಯ ಇರಬೇಕು. ಆಗ ತಂತಾನೆ ಅಂತಹ ಸಂಘದ ಬೆಳವಣಿಗೆ ಸಾಧ್ಯವಾಗುತ್ತದೆ!

ಆಡಳಿತ ಮಂಡಳಿ ಮತ್ತು ನೌಕರರು

ಆಡಳಿತ ಮಂಡಳಿಯ ಸದಸ್ಯರು (ನಿರ್ದೇಶಕರು)ಗಳು ತಮಗೆ ವಿಧಿಸಿದ ನೀತಿ ಸಂಹಿತೆಯಂತೆ, ನಿಷ್ಪಕ್ಷಪಾತದಿಂದ, ಸಂಘದ ಏಳ್ಗೆಯನ್ನೇ ಗುರಿಯಾಗಿ ಇಟ್ಟುಕೊಂಡು ಕೆಲಸ ಮಾಡಬೇಕು.

ಸಹಕಾರ ಸಂಘದಿಂದ, ಜನಸಾಮಾನ್ಯನಿಗೆ, ಸದಸ್ಯರಿಗೆ ಅಗತ್ಯವಾದ ದೈನಂದಿನ ಜೀವನಾವಶ್ಯಕ ಎಲ್ಲ ವಸ್ತುಗಳೂ ಸಿಗಬೇಕು – ಶಿರಸಿ ತಾಲ್ಲೂಕಿನ (ಉ.ಕ.ಜಿಲ್ಲೆ) ಮುಟ್ಟಹಳ್ಳಿ ಬೈರುಂಭೆ ಈ ಕೆಲಸ ಮಾಡಬಹುದಾದರೆ ರಾಜ್ಯದ ಪಟ್ಟಣ, ನಗರಗಳಲ್ಲಿರುವ ಸಹಕಾರ ಸಂಘಗಳಿಗೆ ಈ 'ಸೇವೆ' ಮಾಡಲು ಸಾಧ್ಯವಿಲ್ಲ ಎಂದಾದರೆ ನಂಬಲು ಸಾಧ್ಯವಿಲ್ಲ!

ಆಡಳಿತ ಮಂಡಳಿಯ ಸದಸ್ಯರು ತಮ್ಮ ಜವಾಬ್ದಾರಿ ಅರಿತು ಸಂಘಕ್ಕೆ ಠೇವಣಿ ಸಂಗ್ರಹಣೆ, ಷೇರು ಸಂಗ್ರಹಣೆ, ಸಾಲ ವಸೂಲಿ...ಇತ್ಯಾದಿಗಳಿಗಾಗಿ ನೌಕರರ ಜತೆ ಓಡಾಡಬೇಕು, ಸಹಕರಿಸಬೇಕು. ನೌಕರರನ್ನು ಪ್ರೋತ್ಸಾಹಿಸಬೇಕು. – ನಿಷ್ಠಾವಂತ, ನಿಯತ್ತಿನ ನೌಕರರೇ ಆ ಸಂಸ್ಥೆಯ ದೊಡ್ಡ (ಜೀವಂತ) ಆಸ್ತಿ! ಆದರೆ, ನೌಕರರೂ ತಮಗೆ ಅನ್ನನೀಡುತ್ತಿರುವ ಸಹಕಾರ ಸಂಸ್ಥೆಯ ಬಗ್ಗೆ ಕಾಳಜಿ ವಹಿಸಬೇಕು. ಬೆಳವಣಿಗೆ ಬಗ್ಗೆ ಕಾರ್ಯಕ್ರಮ ರೂಪಿಸಿಕೊಂಡು ಕಾರ್ಯೋನ್ಮುಖ ಆಗಬೇಕು. ಬೆಳಿಗ್ಗೆ ಹತ್ತೂವರೆಗೆ ಸಂಘಕ್ಕೆ ಬಂದು, ಒಂದಿಷ್ಟು ಹೊತ್ತು ಅವರಿವರ ಹತ್ತಿರ ಹರಟೆ ಹೊಡೆದು, ಪತ್ರಿಕೆಗಳನ್ನು ಓದಿ, ಕಾಫಿ, ಊಟ ಸೇವಿಸಿ ಬೇಜವಾಬ್ದಾರಿಯಿಂದ, ಉದಾಸೀನದಿಂದ ವರ್ತಿಸಿ, ಗ್ರಾಹಕರೊಡನೆ ಅವಿಧೇಯರಾಗಿ ನಡೆದುಕೊಂಡು ಐದೂವರೆ ಗಂಟೆ ಢನ್ ಎಂದೊಡನೆ ಕಾಲೆರಡನ್ನೂ ಸಂಘದ ಹೊರಗೆ ಇಡುವ ನೌಕರರಿಂದ ಸಂಘಕ್ಕೆ ನಷ್ಟವೇ ಹೊರತು, ಕಿಂಚಿತ್ತೂ ಪ್ರಯೋಜನವಿಲ್ಲ. ಅಂತೆಯೇ, ಇವರಿಗೂ ಹೆಚ್ಚು ಅಪಾಯಕಾರಿಯಾದ ಭಸ್ಮಾಸುರನಂತೆ ವರ್ತಿಸುವ, ಗೋಮುಖ ವ್ಯಾಘ್ರ ನೌಕರರು ತಮ್ಮ ಬೇಳೆ ಬೇಯಿಸಿಕೊಳ್ಳಲು ಅರ್ರವತ್ನಾಲ್ಕು ವಿದ್ಯೆಗಳನ್ನೂ ಬಳಸಿಕೊಂಡು 'ಕುಬೇರ'ರಾಗಿ, ಸಂಘ ಇದ್ದರೇನು, ಸತ್ತರೇನು, ಸಂಘಕ್ಕೆ ಲಾಭವಾದರೇನು, ನಷ್ಟವಾದರೇನು ಎಂದು ಭಾವಿಸುತ್ತಾರೆ – ಇಂತಹ ನೌಕರರ ಬಗ್ಗೆಯಂತೂ ಆಡಳಿತ ಮಂಡಳಿ ಕಟ್ಟೆಚ್ಚರದಿಂದಿರಬೇಕು. ಇಲ್ಲವಾದರೆ, ಆ ಸಂಘಕ್ಕೂ ಕೇಡುಗಾಲ, ಆಡಳಿತ ಮಂಡಳಿಗೂ ಕೆಟ್ಟಕಾಲ ತಪ್ಪಿದ್ದಲ್ಲ!!

ಕರ್ಮಭೂಮಿ

ಪ್ರತಿ ಒಬ್ಬ ನೌಕರನೂ ತನ್ನ ಸಹಕಾರ ಸಂಸ್ಥೆಯೇ ತನ್ನ "ಕರ್ಮಭೂಮಿ" ಎಂಬುದನ್ನು ಮರೆಯದೇ, ನಿಷ್ಠೆ ಪ್ರಾಮಾಣಿಕತೆ, ಶ್ರದ್ಧೆ, ದಕ್ಷತೆಯಿಂದ ಕೆಲಸ ಮಾಡಬೇಕು – ತಾನು ಪಡೆಯುತ್ತಿರುವ ಸಂಬಳಕ್ಕೆ ಮೋಸವಾಗದ ಹಾಗೆ ಕೆಲಸವನ್ನು ಆತ್ಮಸಾಕ್ಷಿಯಾಗಿ ಮನಸಾರೆ ಮಾಡಬೇಕು. ತನ್ನ ಕೆಲಸದ ಬಗ್ಗೆ ಪ್ರತಿಯೊಬ್ಬ ನೌಕರನಿಗೂ ನೈಪುಣ್ಯತೆ, ಅರಿವು (ಜ್ಞಾನ) ಇರಬೇಕು (ಇಲ್ಲವಾದರೆ ತರಬೇತಿ ಪಡೆಯಬೇಕು)

ನಾಳಿನ ಬಗ್ಗೆ ಚಿಂತನೆ

ಸಂಘ ಸಂಸ್ಥೆಗಳ ನೌಕರ ವರ್ಗಕ್ಕೆ ಸ್ಪರ್ಧಾ (ಪೈಪೋಟಿ) ಕಾಲವಾದ ಈಗಿನ ದಿನಗಳಲ್ಲಿ ಕೈತುಂಬ ಕೆಲಸ, ತಲೆತುಂಬ ನಾಳಿನ ಚಿಂತನೆ! ನಮ್ಮ ಸಂಸ್ಥೆ ನಮಗೆ ಅನ್ನ ನೀಡಿ ಪೋಷಿಸುತ್ತಿರುವ ಕಾರಣ, ಸದರಿ ಸಂಸ್ಥೆಯ ಏಳ್ಗೆಗಾಗಿ ಹಗಲೂ ರಾತ್ರಿ 'ಕಾಲಾಯ ತಸ್ಮೈ ನಮಃ' ಎಂಬಂತೆ ದುಡಿಯಬೇಕು. ಸಂಘದಲ್ಲಿ ವ್ಯಾಪಾರಾಭಿವೃದ್ಧಿ ಮಾಡಲು ಹೆಣಗಾಡಬೇಕು. ಹೊಸ ಹೊಸ ಯೋಜನೆಗಳನ್ನು ಜಾರಿಗೆ ತರಲು ಪ್ರಯತ್ನಿಸಬೇಕು. ತೀರಾ ಅಗತ್ಯವಾದರೆ, ಸಂಘದ ಆರ್ಥಿಕ ಸ್ಥಿತಿ ತೀರಾ ಹದಗೆಟ್ಟಾಗ ಕಡಿಮೆ ಸಂಬಳ ಪಡೆದೂ ಕೆಲಸ ಮಾಡಲು ತಯಾರಿರಬೇಕು. ಆಡಳಿತ ಮಂಡಳಿ ಐದು ವರ್ಷದ್ದು, ನೌಕರರು ಹಾಗಲ್ಲವಲ್ಲ. ಐವತ್ತೆಂಟನೇ ವಯಸ್ಸಿನವರೆಗೂ ಈ ಸಂಸ್ಥೆಯಲ್ಲೇ ಇರಬೇಕು. ಹಾಗಾಗಿ ಮೈಮುರಿದು, ತಲೆ ಓಡಿಸಿ, ದುಡಿಯಲೇ ಬೇಕಾದ ಸ್ಥಿತಿ ಇದೀಗ ಬಂದಿದೆ. ಚಿಂತೆಯಿಲ್ಲ, ದುಡಿತಕ್ಕೆ ತಕ್ಕ ಪ್ರತಿಫಲ ಇದ್ದೇ ಇದೆ – ಕಾಯಕದಿಂದ ಕೈಲಾಸ – ಸುಳ್ಳಲ್ಲವೇ ಅಲ್ಲ!

ಅಂತೂ ನೌಕರರ ಮತ್ತು ಆಡಳಿತ ಮಂಡಳಿಯ ಜವಾಬ್ದಾರಿಯುತ, ದಕ್ಷ, ನಿಷ್ಪಕ್ಷಪಾತ ಪರಿಶ್ರಮದಿಂದ ಸಹಕಾರ ಸಂಘಗಳ ಬೆಳವಣಿಗೆ ಖಂಡಿತಾ ಸಾಧ್ಯ!! *

ಸಹಕಾರ ಬ್ಯಾಂಕುಗಳ ಆಸ್ತಿ ವರ್ಗೀಕರಣ–ರಿಜರ್ವ್ ಬ್ಯಾಂಕಿನ ಸೂತ್ರಗಳು

ನಮ್ಮ ದೇಶದ ಹಣಕಾಸಿಗೆ ಸಂಬಂಧಿಸಿದಂತೆ ರಚಿಸಲ್ಪಟ್ಟ ನರಸಿಂಹನ್ ಸಮಿತಿಯು ಆರ್ಥಿಕ ರಂಗಕ್ಕೆ ಸಂಬಂಧಿಸಿದಂತೆ ಕೆಲವು ಸುಧಾರಣೆಗಳನ್ನು ತರಲು ೧೯೯೧ ರಲ್ಲಿ ಶಿಫಾರಸ್ಸು ಮಾಡಿತು. ಆ ಮುಖ್ಯವಾದ ಶಿಫಾರಸ್ಸುಗಳಲ್ಲಿ ಒಂದು, ಬ್ಯಾಂಕುಗಳು ತಾವು ಪ್ರತಿವರ್ಷ ತಯಾರಿಸುವ ಲಾಭ–ನಷ್ಟ ತಃಖ್ತೆ, ಅಢಾವೆ ಪತ್ರಿಕೆಗೆ ಸಂಬಂಧಿಸಿದ್ದು. ನರಸಿಂಹನ್ ಸಮಿತಿಯು ಬ್ಯಾಂಕುಗಳ ಆರ್ಥಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ ಮಾಡಿರುವ ಕೆಲವು ಮುಖ್ಯ ಸಲಹೆಗಳು ಹೀಗಿವೆ:

೧. ಬ್ಯಾಂಕುಗಳ ಉತ್ಪನ್ನ ಗುರುತಿಸುವಿಕೆಗೆ ಸಂಬಂಧಿಸಿದ ವಿವೇಕಯುಕ್ತ ಸೂತ್ರಗಳು (Prudential Norms) ನಿಜವಾಗಿಯೂ ವಸೂಲಾದ ಸಾಲದ ಅಂಕಿ ಅಂಶಗಳ ಮೇಲೆ ಅವಲಂಬಿತವಾಗಿರಬೇಕು.

೨. ಆಸ್ತಿ ವರ್ಗೀಕರಣವನ್ನು, ವಿವೇಕಯುಕ್ತ ಸೂತ್ರಗಳನ್ನು, ಪಕ್ಷಪಾತರಹಿತವಾಗಿ ಅನ್ವಯಿಸಿ ಮಾಡಬೇಕು.

೩. ಆಸ್ತಿ ವರ್ಗೀಕರಣದ ಆಧಾರದ ಮೇಲೆ (ಉತ್ತಮ ದರ್ಜೆಯ, ಕೆಳದರ್ಜೆಯ ಸಂಶಯಾತ್ಮಕ ಮತ್ತು ನಷ್ಟದ ಆಸ್ತಿ) ಸಾಕಷ್ಟು ಮೊಬಲಗನ್ನು ಅಢಾವೆ ಪತ್ರಿಕೆಯಲ್ಲಿ ಪ್ರತ್ಯೇಕವಾಗಿ ತೆಗೆದಿರಿಸಬೇಕು.

ಭಾರತೀಯ ರಿಸರ್ವ್ ಬ್ಯಾಂಕು ಮೇಲಿನ ಶಿಫಾರಸ್ಸುಗಳನ್ನು ಸ್ವೀಕರಿಸಿ, ವಾಣಿಜ್ಯ ಬ್ಯಾಂಕುಗಳಿಗೆ ಮತ್ತು ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಮೇಲೆ ಹೇಳಿದ ಪದ್ಧತಿಯನ್ನು ೧೯೯೨–೯೩ರಿಂದ ಅನ್ವಯಿಸಿ ಜಾರಿಗೆ ತಂದಿತು. ಗ್ರಾಮೀಣ ಬ್ಯಾಂಕುಗಳು ಈ ಪದ್ಧತಿಯನ್ನು ಭಾರತೀಯ ರಿಜರ್ವ್ ಬ್ಯಾಂಕಿನ ಆದೇಶದಂತೆ ದಿನಾಂಕ ೩೧–೩–೯೬ರಿಂದ ಜಾರಿಗೆ ತಂದವು. ಆಸ್ತಿ ವರ್ಗೀಕರಣ, ಉತ್ಪನ್ನ ಗುರುತಿಸುವಿಕೆಗಳಿಗೆ ಸಂಬಂಧಿಸಿದ ಈ ವಿವೇಕಯುಕ್ತ ಸೂತ್ರಗಳನ್ನು ದಿನಾಂಕ ೩೧–೩–೯೭ರಿಂದ ಜಾರಿಗೆ ಬರುವಂತೆ ರಾಜ್ಯ ಸಹಕಾರ ಬ್ಯಾಂಕು ಮತ್ತು ಜಿಲ್ಲಾ ಸಹಕಾರ ಕೇಂದ್ರಬ್ಯಾಂಕುಗಳಿಗೆ ಅನ್ವಯಿಸಿ ಜಾರಿಗೆ ತರಲು ರಿಜರ್ವ್ ಬ್ಯಾಂಕ್ ನಿರ್ದೇಶಿಸಿದೆ. ಅದರಂತೆ, ಈಗಾಗಲೇ ಕರ್ನಾಟಕದ ಎಲ್ಲ ಜಿಲ್ಲಾ ಬ್ಯಾಂಕುಗಳು (ಡಿ.ಸಿ.ಸಿ. ಬ್ಯಾಂಕುಗಳು) ಮತ್ತು ಅಪೆಕ್ಸ್ ಬ್ಯಾಂಕು ದಿನಾಂಕ ೩೧–೩–೯೭ರಿಂದಲೇ ಈ ಪದ್ಧತಿಯನ್ನು ಜಾರಿಗೆ ತಂದಿವೆ. ಮೇಲೆ ಹೇಳಿದ ಆಸ್ತಿ ವರ್ಗೀಕರಣ ಹೇಗೆ ಮಾಡಬೇಕು ಎಂಬ ಬಗ್ಗೆ ರಿಜರ್ವ್ ಬ್ಯಾಂಕು ನೀಡಿರುವ ಮಾರ್ಗದರ್ಶಿ ಸೂತ್ರಗಳು ಈ ಕೆಳಗಿನಂತಿವೆ:

ಉತ್ಪನ್ನ ಗುರುತಿಸುವಿಕೆ

೧. ಬ್ಯಾಂಕಿಗೆ ತಲುಪದ (ವಸೂಲಾಗದ) ಮೊಬಲಗನ್ನು ರಾಜ್ಯ ಬ್ಯಾಂಕು ಅಥವ ಜಿಲ್ಲಾ ಬ್ಯಾಂಕು ಅಢಾವೆ ಪತ್ರಿಕೆಯಲ್ಲಿ ಲಾಭ–ನಷ್ಟದ ಖಾತೆಗೆ ತೆಗೆದುಕೊಳ್ಳಬಾರದು. ಒಂದು ವೇಳೆ ಹಾಗೆ ಮಾಡಿದ್ದೇ ಆದರೆ, ಅಂತಹ ಬ್ಯಾಂಕುಗಳು ಸಮಾನ ಮೊಬಲಗನ್ನು ಅಢಾವೆ ಪತ್ರಿಕೆಯಲ್ಲಿ ಖರ್ಚು ಹಾಕಿ ಸರಿದೂಗಿಸಬೇಕು. ಅಸಲು, ಬಡ್ಡಿ ಎರಡಕ್ಕೂ ಇದು ಅನ್ವಯಿಸುತ್ತದೆ.

೨. ಸಂಬಂಧಿಸಿದ ಖಾತೆಯನ್ನು ಉತ್ತಮ ದರ್ಜೆ (Standard) ಎಂದು ವರ್ಗೀಕರಿಸಿದ್ದರೆ ಮಾತ್ರ ಶುಲ್ಕ, ಕಮಿಷನ್, ಮತ್ತು ಇನ್ನಿತರ ಆದಾಯುವನ್ನು ಆದಾಯುವಾಗಿ ಪರಿಗಣಿಸಬಹುದಾಗಿದೆ. ಅಲ್ಲದೇ ಈ ಮುಂಚಿನ ವರ್ಷ ಇಂತಹ ಆದಾಯವು ವಸೂಲಾಗದಿದ್ದರೂ 'ಆದಾಯ' ಎಂದು ತೋರಿಸಲ್ಪಟ್ಟಿದ್ದರೆ ಅಷ್ಟು ಮಾತ್ರ ಮೊಬಲಗನ್ನು ಅಢಾವೆ ಪತ್ರಿಕೆಯಲ್ಲಿ ಸರಿದೂಗಿಸುವ ಮೊಬಲಾಗಿ (matching) ತೆಗೆದಿರಿಸಬೇಕು.

೩. ಸರ್ಕಾರದ ಖಾತ್ರಿ (ಗ್ಯಾರಂಟಿ) ಇರುವ ಸಾಲಗಳಿಗೆ ಸಂಬಂಧಿಸಿದಂತೆ, ಸಮಾನ ಮೊಬಲಗನ್ನು ತೆಗೆದಿರಿಸಿದ್ದರೆ ಮಾತ್ರ (matching provision) ಸುಸ್ತಿಬಡ್ಡಿಯನ್ನು ಲಾಭ–ನಷ್ಟದ ಜೊತೆಗೆ ತೆಗೆದುಕೊಳ್ಳಬಹುದಾಗಿದೆ.

೪. ಖರೀದಿಸಿದ ಅಥವಾ ಸೋಡಿ (ಡಿಸ್ಕೌಂಟ್) ಮಾಡಿದ ಹುಂಡಿಗಳನ್ನು 'ಸುಸ್ತಿ' ಎಂದು ಅವುಗಳ ಬಗ್ಗೆ ಹಣ ಪಾವತಿಯಾದಾಗ ಪರಿಗಣಿಸತಕ್ಕದ್ದು. ಅಂತಹ ಹುಂಡಿಗಳಿಗೆ ಬಡ್ಡಿಯನ್ನು ವಿಧಿಸಿ, ಲಾಭ–ನಷ್ಟದ ಖಾತೆಯಲ್ಲಿ ಸೂಕ್ತ ಸರಿದೂಗಿಸುವ (matching provision) ಅವಕಾಶ ಮಾಡಿಕೊಂಡು ಲಾಭ–ನಷ್ಟದ ಖಾತೆಗೆ ಪಡೆಯಬಹುದಾಗಿದೆ.

ಆಸ್ತಿ ವರ್ಗೀಕರಣ

ಕೃಷಿಸಾಲ ಮತ್ತು ಕೃಷಿಯೇತರ ಸಾಲ ಇವುಗಳನ್ನು 'ಕ್ರಿಯಾತ್ಮಕ ಆಸ್ತಿ' (Performing Asset) ಮತ್ತು ನಿಷ್ಕ್ರಿಯ ಆಸ್ತಿ (Non Performing Asset) ಎಂಬುದಾಗಿ ಎರಡು ವರ್ಗವಾಗಿ ವಿಂಗಡಿಸಬಹುದು. ಕ್ರಿಯಾತ್ಮಕ ಆಸ್ತಿಗೆ ಉತ್ತಮ ದರ್ಜೆಯ (Standard Asset) ಆಸ್ತಿ ಎಂತಲೂ ಕರೆಯುತ್ತಾರೆ. ವಸೂಲಿಗೆ ಸಂಬಂಧಿಸಿದಂತೆ ಯಾವುದೇ ಸಮಸ್ಯೆಗಳಿರದ ಸಾಲಗಳು "ಉತ್ತಮ ದರ್ಜೆಯ" ಆಸ್ತಿಗಳು. ಹೀಗೆ ಎಲ್ಲ ಚಾಲ್ತಿ ಸಾಲಗಳು, ಅನುತ್ಪಾದಕ ಆಸ್ತಿ ಆಗದಿರುವ ಅಲ್ಪಾವಧಿ ಕೃಷಿ, ಕೃಷಿಯೇತರ ಸಾಲಗಳು ಉತ್ತಮ ದರ್ಜೆಯ ಆಸ್ತಿಗಳು.

ನಿಷ್ಕ್ರಿಯ ಆಸ್ತಿಯಲ್ಲಿ (Non Performing Asset) ಸಾಲದ ಅಸಲಿನ ಕಂತು ಅಥವಾ ಬಡ್ಡಿ ಎರಡು ತ್ರೈಮಾಸಿಕ ಮತ್ತು ಜಾಸ್ತಿ ಅವಧಿಗೆ ವಸೂಲಾಗದೇ ಬಾಕಿ ಇದ್ದು 'ನಿಷ್ಕ್ರಿಯ (ಅನುತ್ಪಾದಕ) ಆಸ್ತಿ' ಎನ್ನಿಸಿಕೊಳ್ಳುತ್ತದೆ.

ಸುಸ್ತಿಯಾಗಿರುವ ಅವಧಿಯನ್ನು ಆಧರಿಸಿ ಕೃಷಿ, ಕೃಷಿಯೇತರ ಸಾಲಗಳನ್ನು ವರ್ಗೀಕರಿಸತಕ್ಕದ್ದಿದ್ದು ವಿವರ ಈ ಕೆಳಗಿನಂತಿದೆ:

ಕೆಳದರ್ಜೆಯ (ಸಬ್ ಸ್ಟ್ಯಾಂಡರ್ಡ್) ಆಸ್ತಿ

೧. ಕೃಷಿ, ಕೃಷಿಯೇತರ ಸಾಲಗಳಿಗೆ ಸಂಬಂಧಿಸಿದಂತೆ ಸದರಿ ಸಾಲಗಳು ಸುಸ್ತಿಯಾಗಿ ಮೂರು (೩) ವರ್ಷಗಳವರೆಗೆ "ಕೆಳದರ್ಜೆಯ ಆಸ್ತಿ" ಆಗಿರುತ್ತದೆ.

೨. ಅವಧಿ ಸಾಲಗಳಿಗೆ ಸಂಬಂಧಿಸಿದಂತೆ ಕಂತು ಸುಸ್ತಿಯಾಗಿ ೩. ವರ್ಷಗಳವರೆಗೆ ಬಾಕಿ ಆಗುವ ಅವಧಿ ಸಾಲದ ಪೂರ್ತಿ ಮೊಬಲಗು 'ಕೆಳದರ್ಜೆಯ ಆಸ್ತಿ' ಆಗಿರುತ್ತದೆ.

೩. ಸಾಲಗಳ ಅವಧಿಯ ಪುನರ್ ನಿಗದಿ (ರೀಷೆಡ್ಯೂಲ್) ಗೊಂಡಾಗ ಸಹ ಕೆಳದರ್ಜೆಯ ಆಸ್ತಿಯನ್ನು ಮೇಲ್ದರ್ಜೆಗೆ ಏರಿಸತಕ್ಕದ್ದಲ್ಲ.

ಸಂಶಯಾತ್ಮಕ ಆಸ್ತಿ (ಡೌಟ್‌ಫುಲ್ ಅಸೆಟ್ಸ್)

೧. ಮೂರು ವರ್ಷಕ್ಕಿಂತ ಜಾಸ್ತಿ ಸುಸ್ತಿಯಾಗಿರುವ ಕೃಷಿ, ಕೃಷಿಯೇತರ ಸಾಲಗಳು ಸಂಶಯಾತ್ಮಕ ಆಸ್ತಿಗಳು.

೨. ಅವಧಿ ಸಾಲಕ್ಕೆ ಸಂಬಂಧಿಸಿದಂತೆ, ಕಂತು ಸುಸ್ತಿಯಾಗಿ ಮೂರು ವರ್ಷ ದಾಟಿದ್ದರೆ, ಅಂತಹ ಅವಧಿ ಸಾಲದ ಪೂರ್ತಿ ಬಾಕಿ ಮೊಬಲಗು ಸಂಶಯಾತ್ಮಕ ಆಸ್ತಿ.

ನಷ್ಟದ ಆಸ್ತಿ (ಲಾಸ್ ಅಸೆಟ್ಸ್)

ಬ್ಯಾಂಕಿನ ಲೆಕ್ಕ ಪರಿಶೋಧನಾಧಿಕಾರಿಗಳು, ರಿಸರ್ವ್ ಬ್ಯಾಂಕು, ನಬಾರ್ಡಿನ ತಪಾಸಣಾಧಿಕಾರಿಗಳು ನಷ್ಟದ ಆಸ್ತಿ ಎಂದು ಗುರುತಿಸಿದ ಮತ್ತು ಪೂರ್ತಿಯಾಗಿ ಅಥವಾ ಭಾಗಶಃ ಮನ್ನಾ ಆಗದಿರುವ ಮೊಬಲಗು ನಷ್ಟದ ಆಸ್ತಿ ಎನ್ನಿಸಿಕೊಳ್ಳುತ್ತದೆ. ಅಂತಹ ನಷ್ಟದ ಆಸ್ತಿಗಳಲ್ಲಿ:

೧. ಡಿಕ್ರಿ ಆದೇಶ ಅಥವ ಜಪ್ತಿ ಆದೇಶಗಳ ಕಾಲ ಮೀರಿದ್ದರೆ ಅಥವ ದಾಖಲಾತಿಗಳು ಕಳೆದುಹೋಗಿದ್ದರೆ ಅಥವಾ ಸಾಲಗಾರನ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಬೇರಾವುದೇ ಕಾನೂನುಬದ್ಧ ದಾಖಲೆಗಳು ಲಭ್ಯವಿಲ್ಲದಿರುವುದು.

೨. ಸಾಲಗಾರರು ಮತ್ತು ಅವರ ಜಾಮೀನುದಾರರು "ದಿವಾಳಿಯಾಗಿದ್ದಾರೆ" ಎಂದು ಘೋಷಿಸಲ್ಪಟ್ಟಿದ್ದರೆ ಅಥವಾ ಅವರುಗಳು ಮೌಲ್ಯವುಳ್ಳ ಯಾವುದೇ ಆಸ್ತಿ ಹೊಂದದೇ ಸತ್ತಂತಹ ಪ್ರಕರಣಗಳು,

೩. ಸಂಘದ ವ್ಯಾಪ್ತಿಯಲ್ಲಿ ಯಾವುದೇ ಆಸ್ತಿ ಇಲ್ಲದೇ ಅಂತಹ ಸಂಘದ ಕಾರ್ಯವ್ಯಾಪ್ತಿ ಬಿಟ್ಟು ಬೇರೆಡೆಗೆ ಹೋಗಿ ವಾಸಿಸುತ್ತಿರುವುದು ಮತ್ತು ಜಾಮೀನುದಾರರೂ ಸಹ ಸಾಲ ತೀರಿಸಲು ಆರ್ಥಿಕವಾಗಿ ಅಶಕ್ತರಾಗಿರುವಂತಹ ಸಾಲಗಳು,

೪. ಸಾಲವೇ ಸುಳ್ಳು ಸಾಲವಾಗಿರುವುದು ಮತ್ತು ಸಾಲದ ದುರ್ಬಳಕೆ ಆಗಿರುವಂತಹ ಸಾಲಗಳು.

೫. ಸಂಘವು ಸಮಾಪನೆಗೊಂಡಿರುವುದರಿಂದ ಸಾಲದ ಹಣವನ್ನು ವಸೂಲು ಮಾಡಲಾಗದ ಪ್ರಕರಣಗಳು.

ಈ ಮೇಲಿನ ಪ್ರಕರಣಗಳು ನಷ್ಟದ ಆಸ್ತಿಯಲ್ಲಿ ಸೇರುತ್ತವೆ. ಅಂದರೆ ವಸೂಲ್ಮಾಡಲು ಅಸಾಧ್ಯ ಎಂದು ಪರಿಗಣಿಸಲ್ಪಟ್ಟ ಅಥವಾ ಸಂಶಯಾತ್ಮಕ ಆಸ್ತಿಯಾಗಿ ಮುಂದುವರಿಸುವುದರಿಂದ ವಸೂಲು ಆಗುವ ಸಾಧ್ಯತೆಯೇ ಇಲ್ಲದ ಆಸ್ತಿಗಳೇ 'ನಷ್ಟದ ಆಸ್ತಿಗಳು.'

ಮೊಬಲಗು ತೆಗೆದಿಡಲು ವಿಧಿಸಲ್ಪಟ್ಟ ಸೂತ್ರಗಳು

ಸಹಕಾರ ಬ್ಯಾಂಕುಗಳು ಹೊಸ ಪದ್ಧತಿಗೆ ಹೊಂದಿಕೊಳ್ಳುವ ಬಗ್ಗೆ ರಾಜ್ಯ ಸಹಕಾರ ಬ್ಯಾಂಕು ಮತ್ತು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಗೆ ಹಂತ ಹಂತವಾಗಿ ಮೊಬಲಗನ್ನು ತೆಗೆದಿಡಲು ಅವಕಾಶ ನೀಡಿದೆ. ಅದರಂತೆ ೧೯೯೬-೯೭ರಿಂದ ಮೇಲೆ ಹೇಳಿದ ಆಸ್ತಿಗಳ ಬಾಬ್ತು ತೆಗೆದಿರಿಸತಕ್ಕ ಮೊಬಲಗನ್ನು ರಿಜರ್ವ್ ಬ್ಯಾಂಕು ಈ ಮುಂಚೆಯೇ ತಿಳಿಸಿದೆ-ಅದರಂತೆ ಸಹಕಾರ ಬ್ಯಾಂಕುಗಳು ಅಢಾವೆ ಪತ್ರಿಕೆಯಲ್ಲಿ ತೆಗೆದಿರಿಸಿದ್ದೂ ಆಯಿತು. ಹಾಲಿ ಆಸ್ತಿ ವರ್ಗೀಕರಣದ ಆಧಾರದ ಮೇಲೆ "ತೆಗೆದಿರಿಸುವ" ಬಗ್ಗೆ ಸೂತ್ರಗಳು ಈ ಕೆಳಗಿನಂತಿವೆ:.

೧. ಉತ್ತಮ ದರ್ಜೆಯ ಆಸ್ತಿ

ಒಟ್ಟೂ ಮೊಬಲಗಿನ ಶೇಕಡಾ ೦.೨೫ ರಷ್ಟು ಮಾತ್ರ.

೨. ಕೆಳದರ್ಜೆಯ ಆಸ್ತಿ.

ಒಟ್ಟೂ ಬಾಕಿಯ ಶೇಕಡಾ ೧೦ ರಷ್ಟು.

೩. ಸಂಶಯಾತ್ಮಕ ಆಸ್ತಿ

ಅ) ಆಧಾರರಹಿತ ಸಾಲಗಳಿಗೆ ಶೇಕಡಾ ೧೦೦ರಷ್ಟು.

ಆ) ಸಾಧಾರ ಸಾಲಗಳಿಗೆ ಅವು ಸುಸ್ತಿಯಾದ ಅವಧಿಗೆ ಅನುಗುಣವಾಗಿ ಈ ಕೆಳಗಿನಂತೆ ಮೊಬಲಗನ್ನು ತೆಗೆದಿರಿಸಬೇಕು.

ಸುಸ್ತಿಯಾದ ಅವಧಿ	ಪ್ರತಿ ಶತ ತೆಗೆದಿರಿಸತಕ್ಕದ್ದು
೩ ರಿಂದ ೪ ವರ್ಷಗಳವರೆಗೆ	೨೦%
೪ ವರ್ಷದಿಂದ ೬ ವರ್ಷಗಳ ವರೆಗೆ	೩೦%
೬ ವರ್ಷ ಮೀರಿ	೫೦%

ನಷ್ಟದ ಆಸ್ತಿ

ನಷ್ಟದ ಆಸ್ತಿಯ ಪೂರ್ತಾ ಮೊಬಲಗನ್ನು ಅಢಾವೆ ಪತ್ರಿಕೆಯಲ್ಲಿ ತೆಗೆದಿರಿಸಬೇಕು.

ಮೊಬಲಗನ್ನು ತೆಗೆದಿರಿಸುವಾಗ (ಕಾದಿರಿಸುವಾಗ) ಗಮನಿಸತಕ್ಕ ಅಂಶಗಳು

೧. ಭದ್ರತೆ ಹೊಂದಿರುವ ಕೃಷಿ ಸಾಲಗಳು – ಎಲ್ಲ ಕೃಷಿ ಸಾಲಗಳನ್ನು ಭದ್ರತಾ ಸಾಲಗಳೆಂದು ಪರಿಗಣಿಸತಕ್ಕದ್ದು. (ಸಹಕಾರ ಕಾಯ್ದೆಯಂತೆ ಸಾಲಗಾರರ ಜಮೀನು ಸಾಲ ನೀಡಿದವರಿಗೆ ಋಣಭಾರವಾಗಿರುವ ಕಾರಣ).

೨. ಭವಿಷ್ಯ ನಿಧಿ ಮತ್ತು ಉಪದಾನ (ಗ್ರ್ಯಾಚ್ಯುಯಿಟಿ)ದ ಮೊಬಲಗು – ಇದನ್ನು ಪೂರ್ತಿಯಾಗಿ ಕಾದಿರಿಸಬೇಕು.

೩. ಕಾದಿರಿಸುವಿಕೆಯಿಂದ ವಿನಾಯಿತಿ ಹೊಂದಿರುವ ಸಾಲಗಳು– ಮುದ್ದತು ಠೇವಣಿ, ರಾ.ಉ.ಯೋಜನೆ ಪತ್ರಗಳು (ಎನ್.ಎಸ್.ಸಿ.), ಜೀವವಿಮಾ ಪಾಲಿಸಿ– ಇವುಗಳ ಆಧಾರದ ಮೇಲೆ ನೀಡಿದ ಸಾಲಗಳು ಕಾದಿರಿಸುವಿಕೆಯಿಂದ ಪೂರ್ತಿ ವಿನಾಯ್ತಿ ಪಡೆದಿವೆ – ಹಾಗಾಗಿ ಇಂತಹ ಸಾಲಗಳು ಅನುತ್ಪಾದಕ ಆಸ್ತಿಗಳಲ್ಲ.

೪. ಬಂಗಾರದ ಆಭರಣಗಳ ಈಚಿನ, ಸರ್ಕಾರೀ ಭದ್ರತಾ ಸಾಲಗಳು – ಬಂಗಾರದ ಆಭರಣಗಳ ಮೇಲೆ ಸರ್ಕಾರೀ ಭದ್ರತೆ (ಸೆಕ್ಯುರಿಟೀಸ್) ಮೇಲೆ ನೀಡಿದ ಸಾಲಗಳು ಕಾದಿರಿಸುವಿಕೆಯಿಂದ ಹೊರತಾಗಿಲ್ಲ.

೫. ಬಂಡವಾಳ ಹೂಡಿಕೆ ಮೇಲೆ ಸವಕಳಿ – ಬ್ಯಾಂಕಿನ ಬಂಡವಾಳ ಹೂಡಿಕೆಯ ಅನುಮೋದಿತ ಸಂಸ್ಥೆ (ಸೆಕ್ಯುರಿಟಿ)ಗಳಲ್ಲಿರಬಹುದು ಅಥವಾ ಇತರೇ ಸಂಸ್ಥೆಗಳಲ್ಲಿ ಪಾಲುಧನ, ಸಾಲಪತ್ರಗಳಲ್ಲಿ ಇರಬಹುದು. ಅನುಮೋದಿತ ಸಂಸ್ಥೆಗಳಲ್ಲಿ ತೊಡಗಿಸಿರುವ ಬಂಡವಾಳವನ್ನು ಶಾಶ್ವತ ಹೂಡಿಕೆ ಮತ್ತು ಚಾಲ್ತಿ ಹೂಡಿಕೆ ಎಂದು ವರ್ಗೀಕರಿಸಬಹುದು. ಶಾಶ್ವತ ಹೂಡಿಕೆಗಳಲ್ಲಿ ಅದು ಪರಿಪಕ್ವಗೊಳ್ಳುವ ದಿನಾಂಕದವರೆಗೆ ಕಡ್ಡಾಯವಾಗಿ ಬಿಡಬೇಕಾಗುತ್ತದೆ, ಚಾಲ್ತಿ ಹೂಡಿಕೆಯ ಮೊಬಲಗನ್ನು ದೈನಂದಿನ ವ್ಯವಹಾರಕ್ಕೆ ಬಳಸಲಾಗುತ್ತದೆ. ಬ್ಯಾಂಕು ತನ್ನ ಬಂಡವಾಳ ಹೂಡಿಕೆಯ ಒಟ್ಟೂ ಮೊಬಲಗಿನ ೫೦%ಕ್ಕೆ ಮೀರದಷ್ಟು ಮೊಬಲಗನ್ನು ಮಾತ್ರ ಇಂತಹ ಶಾಶ್ವತ ಹೂಡಿಕೆಯಲ್ಲಿ ತೊಡಗಿಸಬಹುದಾಗಿದೆ–ಈ ಶಾಶ್ವತ ಹೂಡಿಕೆಗೆ ಅಗತ್ಯವಾದರೆ ಸವಕಳಿ ತೆಗೆಯಬೇಕು. ಅಢಾವೆ ಪತ್ರಿಕೆಯಲ್ಲಿ ಬಂಡವಾಳ ಹೂಡಿಕೆ ದಾಖಲಿಸುವಾಗ ಮೇಲೆ ಹೇಳಿದಂತೆ ಸವಕಳಿ ತೆಗೆದ ನಂತರದ ಮೊಬಲಗನ್ನು ಬರೆಯಬೇಕು. ಬೇಕಿದ್ದರೆ ಬಂಡವಾಳ ಹೂಡಿಕೆಯ ಪುಸ್ತಕಮೌಲ್ಯ, ಅದರ ಮೇಲಿನ ಸವಕಳಿಯ ಮೊಬಲಗು ಮತ್ತು ಈ ಸವಕಳಿ ವಜಾ ಜಾತಾ ನಿವ್ವಳ ಮೊಬಲಗನ್ನು ಪ್ರತ್ಯೇಕವಾಗಿ ಸಹ ಬರೆಯಬಹುದು.

ಕಿಸಾನ್ ಕ್ರೆಡಿಟ್ ಕಾರ್ಡ್ ಸಾಲಗಳಿಗೆ ಸಂಬಂಧಿಸಿದಂತೆ "ಕ್ರಮಬದ್ಧವಲ್ಲದ ಪರಿಕಲ್ಪನೆ".

ಈ ಕೆಳಗಿನ ಸಂದರ್ಭಗಳಲ್ಲಿ ಕೆಸಿಸಿ ಸಾಲವನ್ನು "ಕ್ರಮಬದ್ಧವಲ್ಲ" ಎಂದು ಪರಿಗಣಿಸಬಹುದಾಗಿದೆ :-

೧. ಸತತ ಎರಡು ಬೆಳೆಗಳ ಕಾಲ (ಸೀಸನ್)ದಲ್ಲಿ ಮಿತಿಗಿಂತ ಜಾಸ್ತಿ ಬಾಕಿ ಇದ್ದರೆ,

೨. ಸತತ ಎರಡು ಬೆಳೆಗಳ ಕಾಲದಲ್ಲಿ ಸಾಲಗಳೇ ಜಮಾ ಇಲ್ಲವಾದರೆ,

ಸಿ.ಸಿ. ಸಾಲದ ಖಾತೆಗಳು ಸಹ ೧೮೦ ದಿನಗಳಿಗಿಂತ ಮೀರಿದ ಅವಧಿಗೆ ಕ್ರಮಬದ್ಧವಾಗಿರದಿದ್ದರೆ ಆಗ ಅಂತಹ ಸಾಲಗಳೂ 'ಅನುತ್ಪಾದಕ ಆಸ್ತಿ' ಆಗುತ್ತವೆ.

ರಿಜರ್ವ್ ಬ್ಯಾಂಕಿನ ಇತ್ತೀಚಿನ ಸುತ್ತೋಲೆಯಂತೆ, ದಿನಾಂಕ ೩೧–೦೩–೦೪ ರಿಂದ ೧೮೦ ದಿನಗಳ ಬದಲಿಗೆ ೯೦ ದಿನಗಳಿಗೇನೇ ಮೇಲೆ ಹೇಳಿದಂತೆ ಕೃಷಿಯೇತರ ಸಾಲಗಳನ್ನು ಅನುತ್ಪಾದಕ ಆಸ್ತಿ ಎಂದು ಪರಿಗಣಿಸಬೇಕು. ಆದರೂ, ಬ್ಯಾಂಕು ಹೀಗೆ ೯೦ ದಿನಗಳ ಆಧಾರದ ಮೇಲೆ ಲೆಕ್ಕಾಚಾರ ಮಾಡಿದ ಅನುತ್ಪಾದಕ ಆಸ್ತಿಗೆ ಮತ್ತೆ ೨೫% ರಷ್ಟು ಹೆಚ್ಚಿನ ತೆಗೆದಿರಿಸುವಿಕೆಯನ್ನು ದಿನಾಂಕ ೩೧–೦೩–೦೪ಕ್ಕೂ, ಹೆಚ್ಚಿನ ಶೇಕಡಾ ೫೦ ರಷ್ಟು ದಿನಾಂಕ ೩೧–೦೩–೨೦೦೫ಕ್ಕೂ ಕಾದಿರಿಸಬೇಕು.

ಅಂದರೆ, ಬ್ಯಾಂಕು (೧) ೧೮೦ ದಿನಗಳ ಪರಿಕಲ್ಪನೆಗೆ ಒಂದು, (೨) ೯೦ ದಿನಗಳ ಪರಿಕಲ್ಪನೆಗೆ ಇನ್ನೊಂದು – ಹೀಗೆ ಎರಡೆರಡು ಅನುತ್ಪಾದಕ ಆಸ್ತಿಗಳ ತಃಖ್ತೆಯನ್ನು ತಯಾರಿಸಬೇಕಾಗುತ್ತದೆ!

*

'ಸಹಕಾರ ಸಾರಿಗೆ'ಗೆ ನೌಕರರೇ ಒಡೆಯರು

'ಸಹಕಾರ ಸಾರಿಗೆ ಕೊಪ್ಪ' ಅಥವಾ 'ಟ್ರಾನ್ಸ್‌ಪೋರ್ಟ್ ಕೋ-ಆಪರೇಟಿವ್ ಸೊಸೈಟಿ ಕೊಪ್ಪ' ಇದು ಭಾರತ ದೇಶದಲ್ಲೇ ನೌಕರರಿಂದಲೇ ನಡೆಯಲ್ಪಡುತ್ತಿರುವ ಏಕ ಮಾತ್ರ ಸಹಕಾರ ಸಂಸ್ಥೆ. ಇಲ್ಲಿ ನೌಕರರೇ ಒಡೆಯರೂ ಹೌದು !

ಈ ಸಹಕಾರ ಸಾರಿಗೆ ೧೯೯೧ರಲ್ಲಿ ಅಂದರೆ ಈಗ್ಗೆ ೧೩ ವರ್ಷಗಳಷ್ಟು ಹಿಂದೆ ಅಸ್ತಿತ್ವಕ್ಕೆ ಬಂತು. ಸಹಕಾರ ತತ್ವದಡಿ ನಡೆಯುತ್ತಿರುವ ಈ ಸಂಸ್ಥೆಯ ಸಂಸ್ಥಾಪಕರಾದ ಚಿಕ್ಕೇಗೌಡರೇ ಈಗ ಸದರಿ ಸಂಸ್ಥೆಯ ಅಧ್ಯಕ್ಷರು. ಹಾಲಿ ೧೩೦ ನೌಕರರು ಈ ಸಹಕಾರ ಸಾರಿಗೆ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾರೆ.

ಈ ಸಂಸ್ಥೆಯಲ್ಲಿ ಈಗ ೭೫ ಬಸ್‌ಗಳಿವೆ. ಚಿಕ್ಕಮಗಳೂರು, ಶಿವಮೊಗ್ಗಾ, ದಕ್ಷಿಣಕನ್ನಡ ಜಿಲ್ಲೆಗಳಲ್ಲಿ ಓಡಾಡುತ್ತಿರುವ ಈ ಬಸ್‌ಗಳಿಗೆ ಪ್ರತಿಯೊಂದಕ್ಕೂ ಎದುರೊಂದು, ಹಿಂದೊಂದು ಹೀಗೆ ಎರಡೆರಡು ಹೆಸರುಗಳಿವೆ. ಉದಾಹರಣೆಗೆ ಉಡುಪಿ-ಕೊಪ್ಪ ಮಧ್ಯೆ ಓಡಾಡುತ್ತಿರುವ ಕೆ.ಎ. ೧೮ ಡಿ ೩೬೯ ನಂಬರ್‌ನ ಬಸ್ ಎದುರಿಗೆ 'ಚತುರ್ದಶಿ' ಎಂಬ ಹೆಸರನ್ನೂ, ಹಿಂಭಾಗದಲ್ಲಿ 'ದೀಪಾವಳಿ' ಎಂಬ ಹೆಸರನ್ನೂ ಪಡೆದಿದೆ. ಅಂತೆಯೇ ಕೆ.ಎ.೧೮ ಸಿ ೩೩೩ ನಂಬರ್‌ನ ಬಸ್‌ಗೆ ಎದುರಿಗೆ 'ಜ್ಞಾನಭಾರತಿ' ಎಂಬ ಹೆಸರಿದ್ದರೆ ಹಿಂಭಾಗ 'ಪ್ರಗತಿ' ಎಂಬ ಹೆಸರಿದೆ. 'ಸಹಕಾರ ಸಾರಿಗೆ ಬಸ್' ಎಂದೇ ಜನಪ್ರಿಯವಾಗಿರುವ ಈ ಬಸ್ಸಿಗೆ ಇನ್ನೆರಡೆರಡು ಹೆಸರು ಸೇರಿ ಒಟ್ಟೂ ತಲಾ ಬಸ್‌ಗೆ ಮೂರು ಹೆಸರುಗಳಿವೆ.

ಹೀಗೆ, ಬಸ್‌ಗಳಿಗೆ ಹೆಸರಿಟ್ಟಿರುವ ಬಗ್ಗೆ ಪ್ರಶ್ನಿಸಿದಾಗ ಸಹಕಾರ ಸಾರಿಗೆಯ ಅಧ್ಯಕ್ಷರಾದ ಶ್ರೀ ಚಿಕ್ಕೇಗೌಡರು 'ಹಳ್ಳಿಗಾಡಿನಲ್ಲಿ ನಮ್ಮ ಬಸ್ ಹೆಚ್ಚಾಗಿ ಓಡಾಡುವುದರಿಂದ ಅಲ್ಲಿಯ ಅಶಿಕ್ಷಿತ ಜನರಿಗೆ ಸುಲಭದಲ್ಲಿ ಬಸ್‌ಗಳನ್ನು ಗುರುತಿಸಲು ಅನುಕೂಲವಾಗುವಂತೆ ಮತ್ತು ಕೆಲವು ಬಸ್‌ಗಳಿಗೆ ಎ.ಬಿ.ಸಿ. ಇತ್ಯಾದಿ ಅಕ್ಷರಗಳೊಂದಿಗೆ ಒಂದೇ ನಂಬರ್ ಇರುವ ಕಾರಣ ಗುರುತಿಸಲು ಸುಲಭವಾಗುವಂತೆ ವಿವಿಧ ಹೆಸರಿಟ್ಟಿರುವುದಾಗಿ' ವಿವರಿಸಿದರು.

ಈ ಬಸ್‌ಗಳಲ್ಲಿ ಕೆಲವು ಬಸ್‌ಗಳಿಗೆ ಜ್ಞಾನಜ್ಯೋತಿ, ಪಾಂಚಜನ್ಯ, ಪಂಚವಟಿ, ಮಲೆನಾಡ ಮಲ್ಲಿಗೆ...ಇತ್ಯಾದಿ ವಿಶೇಷ ಹೆಸರುಗಳಿದ್ದರೆ, ಇನ್ನು ಕೆಲವಕ್ಕೆ ದೀಪಾವಳಿ, ಕರಾವಳಿ, ಭಾರತಾಂಬೆ, ವನಸುಮ, ಹೊಯ್ಸಳ, ಚಾಣಕ್ಯ, ಶ್ರೀಶಾರದಾಂಬೆ, ಬೆಳ್ಳಿಚುಕ್ಕಿ ಇತ್ಯಾದಿ ಮರೆಯಲಾರದ ಹೆಸರುಗಳಿವೆ. ಇನ್ನು ಕೆಲವಕ್ಕೆ ಶ್ರೀ ದುರ್ಗಾಪರಮೇಶ್ವರಿ, ಸರಸ್ವತಿ, ಅನ್ನಪೂರ್ಣೇಶ್ವರಿ,

ಸೌಭಾಗ್ಯಲಕ್ಷ್ಮಿ ಇತ್ಯಾದಿ ದೇವರ ಹೆಸರುಗಳಿವೆ. ಪರಿಸರಕ್ಕೆ ಸಂಬಂಧಿಸಿದ ವನರಾಣಿ, ಪ್ರಕೃತಿ, ಸಹ್ಯಾದ್ರಿ, ಕೊಡಚಾದ್ರಿ, ಶೃಂಗಗಿರಿ, ಎಂಬ ಹೆಸರುಗಳೂ ಇವೆ. ಲವಕುಶ, ನರ್ಮದ, ಭರತ, ಕಾವೇರಿ, ತೇಜಸ್ವಿ, ಅಭಿನಯ, ಅಪೂರ್ವ, ಪರಿಣಿ, ಮಾಧವ ಎಂಬ ಆಕರ್ಷಕ ನಾಮಧೇಯದ ಬಸ್ಸುಗಳೂ ಇವೆ.

ಕಳೆದ ವರ್ಷ ಈ ಹೊಸ ಸಾರಿಗೆ ವ್ಯವಸ್ಥೆ ನೋಡಲು ಜಪಾನ್‌ದೇಶದ ನಿಯೋಗ ಬಂದು ಮೆಚ್ಚುಗೆ ವ್ಯಕ್ತಪಡಿಸಿದೆ. ಇಂಥ ಸಹಕಾರ ಸಂಸ್ಥೆಗಳು ಹೆಚ್ಚಲಿ, ಬಡಜನರ ಬಾಳಿನಲ್ಲಿ ದೀಪ ಹಚ್ಚಲಿ.

*

ರೈತರ ಆಪದ್ಬಾಂಧವ : ಕಿಸಾನ್ ಕ್ರೆಡಿಟ್ ಕಾರ್ಡ್

ಭಾರತ ಕೃಷಿ ಪ್ರಧಾನ ದೇಶ. ಜನಸಂಖ್ಯೆ ಸುಮಾರು ೧೦೩ ಕೋಟಿ. ಈ ಪೈಕಿ ಸುಮಾರು ೭೦% ಜನರು ರೈತರು. ಅನೇಕ ರೈತರು ಶ್ರೀಮಂತರಲ್ಲ – ತಮ್ಮ ಕೃಷಿ ಚಟುವಟಿಕೆಗಾಗಿ ಆರ್ಥಿಕ ಸಹಾಯ ಬಯಸುವವರು ಇವರು. ಇಂತಹ ರೈತರಿಗಾಗಿ ಬ್ಯಾಂಕುಗಳು ಬೆಳೆ ಸಾಲ ನೀಡುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಆದರೆ ಈ ಬೆಳೆಸಾಲವನ್ನು ಕಾನೂನಿನ ಕಟ್ಟುಕಟ್ಟಳೆಗಳಿಂದಾಗಿ ಬ್ಯಾಂಕುಗಳು ರೈತರಿಗೆ ನೀಡಲು ಅನಿವಾರ್ಯವಾಗಿ ವಿಳಂಬವಾಗುತ್ತಿರುವುದು ಕೇಂದ್ರ ಸರ್ಕಾರದ ಗಮನಕ್ಕೆ ಬಂತು. ಈ ಕಾರಣಕ್ಕಾಗಿ ರೈತರಿಗೆ ಬ್ಯಾಂಕುಗಳಿಂದ ನೀಡುತ್ತಿರುವ ಬೆಳೆಸಾಲ ಪದ್ಧತಿಯಲ್ಲೇ ಅಮೂಲಾಗ್ರ ಬದಲಾವಣೆ, ಸುಧಾರಣೆ ಮಾಡಬಯಸಿದ ಸರ್ಕಾರವು "ಕಿಸಾನ್ ಕ್ರೆಡಿಟ್ ಕಾರ್ಡ್" ಎಂಬ ಹೊಸ ಯೋಜನೆಯನ್ನು ಜಾರಿಗೆ ತಂದಿತು.

ಉದ್ದೇಶ

ಹೀಗೆ ಕೃಷಿ ಸಲಕರಣೆ, ಬೀಜ, ಯಂತ್ರ, ಕೀಟನಾಶಕ ಇತ್ಯಾದಿ ಇತ್ಯಾದಿ ಅಗತ್ಯ ವಸ್ತುಗಳನ್ನು ಸಕಾಲದಲ್ಲಿ ಯಾವುದೇ ಕಷ್ಟನಷ್ಟಗಳಿಲ್ಲದೇ ಬ್ಯಾಂಕುಗಳಿಂದ ಸಕಾಲದಲ್ಲಿ ಧನ ಸಹಾಯ ಪಡೆದು ಖರೀದಿಸಿ, ಬೆಳೆ ಬೆಳೆಯಲು ರೈತರಿಗೆ ಸಹಾಯ ಮಾಡುವುದೇ ಈ ಕಿಸಾನ್ ಕ್ರೆಡಿಟ್‌ಕಾರ್ಡ್‌ನ ಉದ್ದೇಶ. ಈ ಯೋಜನೆಯು ೧೯೯೮–೯೯ನೇ ಸಾಲಿನಿಂದ ಜಾರಿಗೆ ಬಂತು.

ಸಹಕಾರ ಬ್ಯಾಂಕುಗಳ ಶ್ಲಾಘನೀಯ ಪಾತ್ರ

ದಿನಾಂಕ ೩೧–೦೩–೨೦೦೩ರ ವರೆಗೆ ಒಟ್ಟೂ ೩೧೩.೪೫ ಲಕ್ಷ ಕಿಸಾನ್ ಕ್ರೆಡಿಟ್‌ಗಳನ್ನು ನಮ್ಮ ದೇಶದಲ್ಲಿ ರೈತರಿಗೆ ನೀಡಲಾಯಿತು. ಈ ಕಾರ್ಡುಗಳನ್ನು ರಾಷ್ಟ್ರೀಕೃತ, ವಾಣಿಜ್ಯ ಮತ್ತು ಸಹಕಾರ ಬ್ಯಾಂಕುಗಳ ಮೂಲಕ ರೈತರಿಗೆ ಹಂಚಲಾಗಿದ್ದು, ಈ ಪೈಕಿ ೧೯೩.೮೧ ಲಕ್ಷ ರೈತರಿಗೆ ಅಂದರೆ ಒಟ್ಟು ನೀಡಲಾದ ಕಾರ್ಡುಗಳ ಪೈಕಿ ಶೇಕಡಾ ೬೧.೮೩% ಕಾರ್ಡುಗಳನ್ನು ರೈತರಿಗೆ ಸಹಕಾರ ಬ್ಯಾಂಕುಗಳ ಮೂಲಕ ವಿತರಿಸಲಾಗಿದೆ. (ಮಾಹಿತಿಯ ಮೂಲ : ನಬಾರ್ಡಿನ ೨೦೦೨–೦೩ನೇ ಸಾಲಿನ ವಾರ್ಷಿಕ ವರದಿ : ಪುಟ ೧೫೫)! ಈ ಅವಧಿಯಲ್ಲಿ ಕರ್ನಾಟಕದಲ್ಲಿ ಸುಮಾರು ೮ ಲಕ್ಷ ರೈತರಿಗೆ ಈ ಕಾರ್ಡು ನೀಡಲಾಗಿದೆ. ಈ ಪೈಕಿ ಬಿಜಾಪುರ, ಬೀದರ್ ಡಿ.ಸಿ.ಸಿ. ಬ್ಯಾಂಕುಗಳು ತಮ್ಮ ತಮ್ಮ ಜಿಲ್ಲೆಗಳಲ್ಲಿ ರಾಜ್ಯದಲ್ಲೇ ಅತ್ಯಂತ ಹೆಚ್ಚಿನ ಕಿಸಾನ್ ಕ್ರೆಡಿಟ್ ಕಾರ್ಡ್ ವಿತರಿಸಿದ ಕೀರ್ತಿಗೆ ಪಾತ್ರವಾಗಿವೆ.

ಸಂತಸದಿಂದ ಸ್ವೀಕಾರ

ಎಲ್ಲ ಅರ್ಹ ರೈತರಿಗೆ ದಿ. ೩೧–೦೩–೨೦೦೪ರ ಒಳಗೆ ಕೆ.ಸಿ.ಸಿ. ಕಾರ್ಡುಗಳನ್ನು ಹಂಚುವ

ಗುರಿಯನ್ನು ಕೇಂದ್ರ ಸರ್ಕಾರ ಎಲ್ಲ ಬ್ಯಾಂಕುಗಳಿಗೆ ನೀಡಿದ್ದು, ಎಲ್ಲ ಬ್ಯಾಂಕುಗಳಿಗೆ ಈ ಬಗ್ಗೆ ಕ್ರಮವಿಡಲು ಸೂಚಿಸಲಾಗಿದೆ. ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕು (ನಬಾರ್ಡ್) ಈ ಕಾರ್ಡುಗಳ ಉಪಯೋಗಗಳು ಮತ್ತು ಸಾಧಕ-ಬಾಧಕಗಳ ಬಗ್ಗೆ ಸಮೀಕ್ಷೆ ನಡೆಸಿ, ರೈತರು ಮತ್ತು ಬ್ಯಾಂಕುಗಳು ಸಂತಸದಿಂದ ಈ ಯೋಜನೆಯನ್ನು ಸ್ವೀಕರಿಸಿ ಬಳಸಿಕೊಳ್ಳುತ್ತಿರುವುದಾಗಿ ಮತ್ತು ರೈತರಿಗೂ ಬ್ಯಾಂಕುಗಳಿಗೂ (ಇಬ್ಬರಿಗೂ) ಈ ಯೋಜನೆಯಿಂದ ಲಾಭ ಮತ್ತು ಪ್ರಯೋಜನ ಆಗುತ್ತಿರುವುದಾಗಿ ವರದಿ ಮಾಡಿದೆ.

ಫಲಾನುಭವಿಗಳು ಯಾರು?

ನಬಾರ್ಡಿನ ಸುತ್ತೋಲೆ ಸಂಖ್ಯೆ ಎನ್.ಬಿ.ಪಿ.ಸಿ.ಡಿ.(OPR) ೩೩೬೧೦, ೧೩೭ (Spl) ೨೦೦-೦೧ ದಿನಾಂಕ ೦೩-೦೫-೨೦೦೦ರ ಪ್ರಕಾರ, ಬೆಳೆ ಸಾಲವನ್ನು ಪಡೆಯಲು ಅರ್ಹರಾದ ಎಲ್ಲರೂ ಕಿಸಾನ್ ಕ್ರೆಡಿಟ್ ಕಾರ್ಡಿನ ಫಲಾನುಭವಿಗಳಾಗಲು ಅರ್ಹರು.

ಕಾರ್ಡಿನಲ್ಲಿ ಏನಿರುತ್ತದೆ?

ಈ ಕಾರ್ಡನ್ನು ಕಾರ್ಡ್ ಮತ್ತು ('ಕಂ') ಪಾಸ್‌ಬುಕ್ ಆಗಿ ಬಳಸಬಹುದಾಗಿದೆ. ಈ ಕಾರ್ಡಿನಲ್ಲಿ ಸಾಲಗಾರನ ಹೆಸರು, ವಿಳಾಸ, ಕೆಸಿಸಿ ಸಾಲದ ಮಿತಿ, ಅವಧಿ, ಬಡ್ಡಿದರ ಇತ್ಯಾದಿ ವಿವರಗಳಿರುತ್ತವೆ.

ಯೋಜನೆಯ ಕೆಲವು ಮುಖ್ಯ ಸೌಲಭ್ಯಗಳು

ಕೆಸಿಸಿ ಯೋಜನೆಯ ಮೂಲಕ ರೈತರಿಗೆ ಸಿಗುವ ಮುಖ್ಯ ಸೌಲಭ್ಯಗಳು ಈ ಕೆಳಗಿನಂತಿವೆ:

೧. ಅರ್ಹರಾದ ಎಲ್ಲ ರೈತರೂ ಈ ಕಾರ್ಡು ಪಡೆಯಬಹುದು (ಇಲ್ಲಿ ಅರ್ಹರು ಎಂದರೆ ಆ ಹಣಕಾಸು ಸಂಸ್ಥೆಯ ವ್ಯಾಪ್ತಿಯಲ್ಲಿರುವವರು, ಆ ಸಂಸ್ಥೆಯ ಸದಸ್ಯ/ಗ್ರಾಹಕರಾಗಿರುವವರು, ಆ ಸಂಸ್ಥೆಯ ಉಪನಿಯಮ (ಬೈಲಾ) ರೀತ್ಯಾ ಅರ್ಹತೆ ಇರುವವರು ಎಂದು ಅರ್ಥ). ಈ ಮುಂಚೆ ಬೆಳೆಸಾಲ ಪಡೆದವರು ಪೂರ್ತಿಯಾಗಿ ಅಥವಾ ಭಾಗಶಃ ಸಾಲ ಮರಳಿಸಿ ಈ ಸೌಲಭ್ಯ ಪಡೆಯಬಹುದು.

೨. ಈ ಯೋಜನೆಯಡಿ ರೈತರಿಗೆ ಸಾಲದ ಮಿತಿ (ಉದಾಹರಣೆಗೆ ರೂ. ಐವತ್ತು ಸಾವಿರ) ನಿಗದಿಪಡಿಸಲಾಗುತ್ತದೆ. ಈ ಮಿತಿಯ ಒಳಗೆ ಕಾರ್ಡುದಾರರು ಹಣವನ್ನು ಎಷ್ಟು ಬಾರಿ ಬೇಕಾದರೂ 'ಡ್ರಾ' ಮಾಡಿ ಹಣ ಪಡೆಯಬಹುದು ಮತ್ತು ಹಣ ಜಮಾ ಮಾಡುತ್ತಿರಬಹುದು.

೩. ಸಾಲದ ಮೊಬಲಗಿಗಿಂತ ಜಾಸ್ತಿ ಹಣ ಕಟ್ಟಿದರೆ ಹಾಗೆ ಜಾಸ್ತಿ ಕಟ್ಟಿದ ಹಣಕ್ಕೆ (ಕ್ರೆಡಿಟ್ ಬ್ಯಾಲೆನ್ಸ್ ಗೆ) ಬ್ಯಾಂಕೇ ನಿಗದಿಪಡಿಸಿದ ಬಡ್ಡಿಯನ್ನು ಗ್ರಾಹಕನಿಗೆ ಪಾವತಿಸುತ್ತದೆ (ಈ ಕುರಿತು ಸಹ ಆ ಕಾರ್ಡಿನಲ್ಲಿ ಬರೆಯುವ ಕಾರಣ ಈ ಕಾರ್ಡು ಇಂತಹ ವ್ಯವಹಾರದಿಂದಾಗಿ ಪಾಸ್ ಪುಸ್ತಕದಂತೆ ಸಹ ಪರಿಗಣಿಸಲ್ಪಡುತ್ತದೆ)

೫. ರೈತ ಗ್ರಾಹಕರು ವಾಸ್ತವವಾಗಿ ಪಡೆದ ಸಾಲದ ಮೊಬಲಗು ಮತ್ತು ಸಾಲದ ವಾಸ್ತವ ಅವಧಿಗೆ ಮಾತ್ರ ಬಡ್ಡಿ ವಿಧಿಸಲಾಗುತ್ತದೆ.

೬. ಪ್ರತಿ ವರ್ಷ ನಿಗದಿತ ಸಾಲ ಸವೀಕರಿಸುವ ಷರತ್ತಿನ ಮೇಲೆ ಮೂರು ವರ್ಷಗಳ ಅವಧಿಗೆ ಸಾಲ ಮಂಜೂರು ಮಾಡಲಾಗುತ್ತದೆ. (ಈಚೆಗೆ 'ಸವೀಕರಿಸುವ' ಎಂಬ ಪದದ ಬದಲಿಗೆ ಸೇವೆ ಮಾಡುವದು –'Servicing' ಎಂಬ ಪದವನ್ನು ಬಳಸಲಾಗುತ್ತಿದೆ).

೭. ಎಲ್ಲ ಕೆಸಿಸಿ (ಕಾರ್ಡು)ದಾರರು ವೈಯಕ್ತಿಕ ಅಪಘಾತ ವಿಮಾಯೋಜನೆ ಮತ್ತು ಬೆಳೆ ವಿಮೆ ಯೋಜನೆಯ ಲಾಭ ಪಡೆಯಲು ಅರ್ಹರು ಮತ್ತು ಇದು ಕಡ್ಡಾಯ.

ವೈಯಕ್ತಿಕ ಅಪಘಾತ ವಿಮಾ ಯೋಜನೆ

ಕೆಸಿಸಿ ಪಡೆದಿರುವ ಎಲ್ಲರಿಗೂ (೭೦ ವರ್ಷ ಒಳಗಿರುವವರಿಗೆ) ಕಡ್ಡಾಯವಾಗಿ ಅಕ್ಟೋಬರ್ ೨೦೦೧ ರಿಂದ ವೈಯಕ್ತಿಕ ಅಪಘಾತ ವಿಮಾ ಯೋಜನೆ ಜಾರಿಗೆ ತರಲಾಗಿದೆ.

ಒಂದು ವರ್ಷಕ್ಕೆ ರೂ. ೧೫ರಂತೆ, ಮೂರು ವರ್ಷಗಳಿಗೆ ರೂ. ೪೫ರಂತೆ ಈ ಯೋಜನೆಯಡಿ ವಿಮಾ ಕಂತು ನಿಗದಿಗೊಳಿಸಲಾಗಿದೆ. ರೈತ ಮತ್ತು ಬ್ಯಾಂಕು ಅನುಕ್ರಮವಾಗಿ ೧:೨ ಅನುಪಾತದಲ್ಲಿ ಈ ಕಂತಿನ ಹಣ ಕಟ್ಟಬೇಕು. ದೇಶಾದ್ಯಂತ ಜನರಲ್ ಇನ್ಶೂರೆನ್ಸ್ ಕಂಪೆನಿಗೆ ಈ ಕೆಲಸ ವಹಿಸಲಾಗಿದ್ದು, ದಕ್ಷಿಣ ಭಾರತದಲ್ಲಿ ಜನರಲ್ ಇನ್ಶೂರೆನ್ಸ್ ಕಂಪೆನಿಯ ಅಂಗ ಸಂಸ್ಥೆಯಾದ ಯುನೈಟೆಡ್ ಇಂಡಿಯ ಇನ್ಶೂರೆನ್ಸ್ ಕಂಪೆನಿಯು ಈ ಯೋಜನೆಯನ್ನು (ಕೆಸಿಸಿದಾರರಿಗೆ ಅನ್ವಯಿಸುವಂತೆ) ನೋಡಿಕೊಳ್ಳುತ್ತಿದೆ.

ಈ ಯೋಜನೆಯಂತೆ ವಿಮಾ ಅವಧಿಯಲ್ಲಿ ವಾಹನ ಅಪಘಾತ, ನೀರಲ್ಲಿ ಮುಳುಗುವಿಕೆ, ಹಾವು ಕಚ್ಚುವಿಕೆ ಇತ್ಯಾದಿ ವಿಮಾ ಕಂಪೆನಿ ಒಪ್ಪಿ ನಿಗದಿಪಡಿಸಿದ ಕಾರಣಗಳಿಂದಾಗಿ ಆಕಸ್ಮಿಕವಾಗಿ ಸಾವು ಅಥವಾ ಕಣ್ಣು, ಕೈಕಾಲುಗಳ ವಿಕಲತೆ ಉಂಟಾದಲ್ಲಿ ರೂ. ೨೫,೦೦೦ ದಿಂದ ರೂ. ೫೦,೦೦೦ ವರೆಗೆ ಪರಿಹಾರ ನೀಡಲಾಗುತ್ತದೆ. ನೈಸರ್ಗಿಕ ಸಾವು, ಆತ್ಮಹತ್ಯೆ, ಹುಚ್ಚು ಇವುಗಳಿಂದಾದ ಸಾವಿಗೆ ಈ ಪರಿಹಾರವಿಲ್ಲ.

ಬೆಳೆ ವಿಮೆ

ಕೆಸಿಸಿಧಾರಕ ರೈತರು ಬೆಳೆಯುವ ಕೇಂದ್ರಸರ್ಕಾರ ನಿಗದಿಪಡಿಸಿದ ಕೆಲವು ಬೆಳೆಗಳಿಗೆ ನಿಸರ್ಗ ಪ್ರಕೋಪಗಳಿಂದಾಗಿ ನಷ್ಟ ಉಂಟಾದರೆ, ನಿಯಮಾನುಸಾರ ವಿಮಾ ಕಂಪೆನಿಯು ಪರಿಹಾರ ಧನ ನೀಡುತ್ತದೆ. ರಾಷ್ಟ್ರೀಯ ಕೃಷಿ ವಿಮಾ ಯೋಜನೆ (RKBY) ಅಡಿಯಲ್ಲಿ ಈ ಪರಿಹಾರ ನೀಡಲಾಗುತ್ತದೆ.

ಯಶೋಗಾಥೆ

ಕೆಸಿಸಿಗೆ ಶಿವಮೊಗ್ಗಾ ಜಿಲ್ಲೆಯ ಆಗುಂಬೆಯ ಸಿಂಡಿಕೇಟ್ ಬ್ಯಾಂಕಿನ ಗ್ರಾಹಕರುಗಳಾದ ಶ್ರೀ ಎಂ.ಟಿ. ದೇವೇಂದ್ರಪ್ಪ ಮತ್ತು ಶ್ರೀ ಬಿ.ಜಿ. ರಾಮಪ್ಪಗೌಡ ಎಂಬುವರು ತಮ್ಮ ಕೆಸಿಸಿ ಖಾತೆಯಲ್ಲಿ ಒಂದು ವರ್ಷದಲ್ಲಿ ೨೩ ರಿಂದ ೩೩ ಸಾರೆ ವ್ಯವಹರಿಸಿ ಕ್ರಮವಾಗಿ ರೂ. ೨,೫೦೫ ಮತ್ತು

ರೂ. ೪೪೫೨ ಬಡ್ಡಿಯನ್ನು ತಾವೇ ಬ್ಯಾಂಕಿನಿಂದ ಪಡೆದ ಪ್ರಥಮರಾಗಿದ್ದಾರೆ! ಇವರ ಸಾಲದ ಮಿತಿ ರೂ. ೪೫,೦೦೦ ಇದ್ದರೂ, ಜಾಣತನದಿಂದ ವ್ಯವಹರಿಸಿ, ಪಡೆದ ಸಾಲಕ್ಕಿಂತ ಹೆಚ್ಚಿನ ಹಣ ಗಳಿಸಿ (ಉತ್ಪಾದಿಸಿ) ಆ ಎಲ್ಲ ಹಣವನ್ನು ಬ್ಯಾಂಕಿನ ಕೆಸಿಸಿ ಖಾತೆಗೇ ಕಟ್ಟಿ, ಈ ಸಾಧನೆ ಮಾಡಿರುತ್ತಾರೆ. ಕೆಸಿಸಿ ಯೋಜನೆಯಿಂದ ರೈತರಿಗಷ್ಟೇ ಅಲ್ಲ ಸಂಬಂಧಿಸಿದ ಬ್ಯಾಂಕುಗಳಿಗೂ ಲಾಭ ಇದೆ. ಕರ್ನಾಟಕದ ಬೀದರ್ ಮತ್ತು ಬಿಜಾಪುರ ಡಿಸಿಸಿ ಬ್ಯಾಂಕುಗಳು ಹೆಚ್ಚಿನ ರೈತರಿಗೆ ಈ ಕಾರ್ಡು ನೀಡಿ ಹೆಚ್ಚಿನ ವ್ಯವಹಾರ ನಡೆಸಿ, ಹೆಚ್ಚು ಲಾಭ ಪಡೆದು ದಾಖಲೆ ಮಾಡಿದ್ದು ಇಲ್ಲಿ ಉಲ್ಲೇಖನೀಯ.

ಹೀಗೆ, ಕೆಸಿಸಿ ಯೋಜನೆಯು ರೈತರಿಗೆ ಆರ್ಥಿಕ ಸೌಲಭ್ಯವನ್ನು ಸಕಾಲದಲ್ಲಿ ಬ್ಯಾಂಕುಗಳಿಂದ ಪಡೆಯಲು ಒಂದು 'ವರದಾನ'ವಾದರೆ ಬ್ಯಾಂಕುಗಳಿಗೆ ತಮ್ಮ ವ್ಯವಹಾರ ಹೆಚ್ಚಿಸಿಕೊಳ್ಳಲು ಒಂದು ಸುಲಭದ ಮಾರ್ಗವಾಗಿದೆ.

*

ಚೆಕ್ ವಾಪಸಾದರೆ ಶಿಕ್ಷೆ ಏನು?

ಈ ಹಿಂದೆ ಚೆಕ್ ಬ್ಯಾಂಕಿನಿಂದ ವಾಪಸಾದರೆ ಆ ಚೆಕ್ಕಿನ ಮಾಲೀಕನಿಗೆ 'ಅಯ್ಯೋ, ಇಂತಹ ಅನ್ಯಾಯ ಆಯ್ತಲ್ಲ' ಎಂದು ನೊಂದು, ಆ ಚೆಕ್ಕು ನೀಡಿದವನ ಬಳಿ ಹೋಗಿ ಬ್ಯಾಂಕಿಗೆ ಹಣ ಕಟ್ಟಲು ಅಥವಾ ಆ ಚೆಕ್ಕಿನ ಹಣವನ್ನು ವೈಯಕ್ತಿಕವಾಗಿ ಪಡೆಯುವುದನ್ನು ಬಿಟ್ಟರೆ ಬೇರೆ ಪರಿಣಾಮಕಾರೀ ಕಾನೂನು ಕ್ರಮ ಇರಲಿಲ್ಲ. ಚೆಕ್ಕಿನ ಮಾಲೀಕರಿಗೆ ಹೀಗೆ ಬ್ಯಾಂಕುಗಳಿಂದ ಚೆಕ್ ವಾಪಸಾದರೆ ...ಈ ಮೂಲಕ ತೊಂದರೆಯಾಗುವುದನ್ನು ತಿಳಿದ ಕೇಂದ್ರ ಸರ್ಕಾರ ಈಗ ಸುಮಾರು ಏಳು ವರ್ಷಗಳ ಹಿಂದೆ ಪರಿಣಾಮಕಾರೀ ಕಾನೂನೊಂದನ್ನು ಪಾಸು ಮಾಡಿದೆ.

ನೆಗೋಷಿಯೇಬಲ್ ಇನ್ಸ್ಟುಮೆಂಟ್ಸ್ ಆಕ್ಟ್ ೧೮೮೧ (N.I.Act-1881) ಇದು ಬ್ಯಾಂಕು ರಂಗಕ್ಕೇನೇ ಬೈಬಲ್ ಇದ್ದಂತೆ! ಸುಮಾರು ಒಂದುನೂರಏಳು ವರ್ಷಗಳಷ್ಟು ಹಳೆಯದಾದ ಈ ಕಾನೂನಿಗೆ ೧೯೮೮ರಲ್ಲಿ ತಿದ್ದುಪಡಿ ಮೂಲಕ 'ಹದಿನೇಳನೇ ಅಧ್ಯಾಯ' ಎಂಬ ಹೊಸ ಅಧ್ಯಾಯವೊಂದನ್ನು ಸೇರಿಸಲಾಗಿದೆ. ಈ ಅಧ್ಯಾಯದಲ್ಲಿ ಸೆಕ್ಷನ್ ೧೩೮ರಿಂದ ೧೪೨ರ ವರೆಗೆ ಅಂದರೆ ಐದು ಸೆಕ್ಷನ್‌ಗಳಿವೆ. ಈ ತಿದ್ದುಪಡಿ ತಾರೀಖು ೧೯–೧೨–೧೯೮೮ರಂದು ಅಧ್ಯಕ್ಷರ ಅಂಗೀಕಾರ ಪಡೆದು ಕಾನೂನು ಆಗಿದೆ. ಈಗ ಈ ಐದು ಸೆಕ್ಷನ್‌ಗಳ ಮಹತ್ವ ಮತ್ತು ಮುಖ್ಯಾಂಶಗಳನ್ನು ತಿಳಿಯೋಣ.

ಸೆಕ್ಷನ್ ೧೩೮–ಖಾತೆಯಲ್ಲಿ ಸಾಕಷ್ಟು ಹಣವಿಲ್ಲದಿರುವ ಬಗ್ಗೆ ಇತ್ಯಾದಿ ಕಾರಣಗಳಿಂದ ಚೆಕ್ ಪಾವತಿಯಾಗದಿರುವುದು:–

ಯಾವನೇ ಒಬ್ಬನು ತನ್ನ ಋಣ ತೀರಿಸಲು ಅಥವಾ ಇನ್ನಾವುದೇ ಕಾರಣಕ್ಕಾಗಿ ಇನ್ನೊಬ್ಬನಿಗೆ ಕೊಡತಕ್ಕ ಹಣದ ಬಾಬ್ತು ಆತನ ಬ್ಯಾಂಕಿನ ಚೆಕ್ಕು ಕೊಟ್ಟಿದ್ದು, ಆ ಚೆಕ್ಕು ಬ್ಯಾಂಕಿನಲ್ಲಿ ಹಾಜರ್ಪಡಿಸಲ್ಪಡಬಹುದಾದ ನಿಗದಿತ ದಿನದಲ್ಲಿ ಹಾಜರ್ಪಡಿಸಿದಾಗ ಅಂತಹ ಚೆಕ್ ಕೊಟ್ಟವನ ಖಾತೆಯಲ್ಲಿ 'ಸಾಕಷ್ಟು ಹಣ ಇಲ್ಲ' ಅಥವಾ 'ಸದರಿ ಚೆಕ್ಕು ಹಣ ಪಾವತಿಸಲು ಸಾಕಷ್ಟು ವ್ಯವಸ್ಥೆ ಮಾಡಿಲ್ಲ' ಎಂಬ ಕಾರಣಕ್ಕಾಗಿ ಚೆಕ್ಕು ಬ್ಯಾಂಕಿನಿಂದ ವಾಪಸ್ಸಾದರೆ, ಆಗ ಹಾಗೆ ಚೆಕ್ ಕೊಟ್ಟವನು ಒಂದು ವರ್ಷದ ವರೆಗಿನ ಶಿಕ್ಷೆ ಅಥವಾ ಚೆಕ್ಕಿನ ಹಣದ ದುಪ್ಪಟ್ಟು ಹಣದ ದಂಡ ಅಥವಾ ಶಿಕ್ಷೆ ಮತ್ತು ದಂಡಗಳೆರಡಕ್ಕೂ ಬಾಧ್ಯಸ್ಥನಾಗುತ್ತಾನೆ.

ಆದರೆ, ಈ ಕೆಳಗಿನ ಕ್ರಮಗಳನ್ನು ಅನುಸರಿಸಿದ ನಂತರ ಮಾತ್ರ ಆತ ಶಿಕ್ಷೆ ಮತ್ತು ದಂಡಗಳಿಗೆ ಅರ್ಹನಾಗುತ್ತಾನೆ.

ಅ) ಆ ಚೆಕ್ಕಿನಲ್ಲಿರುವ ತಾರೀಖಿನಿಂದ ಆರು ತಿಂಗಳೊಳಗೆ ಅಥವಾ ಆ ಚೆಕ್ಕಿನ ಆಯುಷ್ಯ ತೀರುವ ಮುನ್ನ ಸದರಿ ಚೆಕ್ಕನ್ನು ಬ್ಯಾಂಕಿನಲ್ಲಿ ಹಾಜರ್ಪಡಿಸಿರಬೇಕು.

ಬ) ಬ್ಯಾಂಕಿನಿಂದ ಸದರಿ ಚೆಕ್ಕು ವಾಪಸಾದ ತಾರೀಖಿನಿಂದ ಹದಿನೈದು ದಿನಗಳ ಒಳಗೆ ಆ ಚೆಕ್ಕನ್ನು ಹೊಂದಿರುವವರು ಆ ಚೆಕ್ಕಿನ ಮೂಲ ಮಾಲೀಕನಿಗೆ ಚೆಕ್ಕಿನ ಹಣ ನೀಡುವಂತೆ ನೋಟೀಸನ್ನು ಲಿಖಿತವಾಗಿ ನೀಡಿರಬೇಕು.

ಕ) ಆ ಚೆಕ್ಕಿನ ಮೂಲ ಮಾಲೀಕನು (ಬ)ದಲ್ಲಿ ಹೇಳಿದ ನೋಟೀಸು ತಲುಪಿದ ಹದಿನೈದು ದಿನಗಳವರೆಗೂ ಹಣ ಪಾವತಿಸದಿರಬೇಕು.

ಸೆಕ್ಷನ್ ೧೩೯–ಚೆಕ್ಕಿನ ವಾರಸುದಾರನ ಬಗೆಗಿನ ತಿಳುವಳಿಕೆ :

ಅನ್ಯಥಾ ಸಾಧಿಸುವವರೆಗೆ, ಚೆಕ್ಕನ್ನು ವಾರಸುದಾರನು ಮೂಲ ಮಾಲೀಕನಿಂದ ತನ್ನ ಸಾಲ ತೀರಿಸಲೆಂದೇ ಪಡೆದನೆಂದು ತಿಳಿಯಲಾಗುತ್ತದೆ.

ಸೆಕ್ಷನ್ ೧೪೦– ಸೆಕ್ಷನ್ ೧೩೮ರಡಿ ಸಾಧ್ಯವಾಗದ ರಕ್ಷಣಾವಾದ:

ಆ ಚೆಕ್ಕನ್ನು ಕೊಡುವಾಗ, ಆ ಚೆಕ್ಕನ್ನು ಬ್ಯಾಂಕಿನಲ್ಲಿ ಹಾಜರ್ಪಡಿಸಿದಾಗ 'ಹಣ ಪಾವತಿಯಾಗಲಿಕ್ಕಿಲ್ಲ' ಎಂದು ತನಗೆ ಗೊತ್ತಿರಲಿಲ್ಲ ಎಂಬ ವಾದ ಚೆಕ್ಕು ನೀಡಿದವನಿಗೆ ಕಾನೂನಿನಂತೆ ರಕ್ಷಣೆ ಸಿಗದು.

ಸೆಕ್ಷನ್ ೧೪೧–ಕಂಪನಿಗಳಿಂದ ಅಪರಾಧ :

ಸೆಕ್ಷನ್ ೧೩೮ರಲ್ಲಿ ಹೇಳಿದ ಅಪರಾಧವು ಕಂಪನಿಯೊಂದರಿಂದ ಆದಾಗ, ಆ ಸಮಯದಲ್ಲಿ ಆ ಕಂಪನಿಯ ವ್ಯವಹಾರ ನೋಡಿಕೊಳ್ಳುತ್ತಿದ್ದ ಪದಾಧಿಕಾರಿಗಳೆಲ್ಲ ಸಮನಾಗಿ ಬದ್ಧರು ಎಂದು ಈ ಸೆಕ್ಷನ್ ಹೇಳುತ್ತದೆ.

ಸೆಕ್ಷನ್ ೧೪೨–ಸದರಿ ಅಪರಾಧದ ವ್ಯಾಪ್ತಿ :

ಅ) ಸೆಕ್ಷನ್ ೧೩೮ರಲ್ಲಿ ಹೇಳಿದ ಅಪರಾಧದ ಕುರಿತು, ಚೆಕ್ಕನ್ನು ಹೊಂದಿರುವವನಿಂದ ಅಥವಾ ಆ ಚೆಕ್ಕಿನಲ್ಲಿ 'ಹಣ ಯಾರಿಗೆ ಕೊಡಿ' ಅಂತ ಇರುತ್ತದೋ ಅಂತಹವನಿಂದ ಲಿಖಿತ ದೂರು ಇಲ್ಲದೇ, ಈ ಅಪರಾಧದ ಕುರಿತು ಪರಿಶೀಲಿಸುವಂತಿಲ್ಲ.

ಬ) ಸೆಕ್ಷನ್ ೧೩೮ (ಕ)ದಲ್ಲಿ ಹೇಳಿದ ದಿನದಿಂದ ಒಂದು ತಿಂಗಳ ಒಳಗೆ ಅಂತಹ ಲಿಖಿತ ದೂರನ್ನು ನೀಡಿರಬೇಕು.

ಕ) ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಅಥವಾ ಪ್ರಥಮದರ್ಜೆ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್‌ಗಿಂತ ಕೆಳಗಿನ ಅಧಿಕಾರಿಗಳ ನ್ಯಾಯಾಲಯ ಸೆಕ್ಷನ್ ೧೩೮ರಲ್ಲಿ ಹೇಳಿದ ಅಪರಾಧಗಳ ಕುರಿತು ವಿಚಾರಣೆ ನಡೆಸುವಂತಿಲ್ಲ.

ಹೀಗೆ ಸಾಕಷ್ಟು ಹಣ ಇಲ್ಲದೆ ಚೆಕ್ ವಾಪಸಾದಾಗ ಅಂತಹ ಚೆಕ್ ನೀಡಿದವರ ವಿರುದ್ಧ ನೊಂದವರು ಪರಿಣಾಮಕಾರೀ ಕಾನೂನು ಕ್ರಮ ಕೈಗೊಳ್ಳಬಹುದು.

*

ಖಾತೆಯಲ್ಲಿ ಸಾಕಷ್ಟು ಹಣ ಇದ್ದರೂ ಚೆಕ್‌ಗಳನ್ನು ಯಾವಾಗ ವಾಪಸ್ ಮಾಡಬಹುದು?

ಭದ್ರತೆಗಾಗಿ, ಬಡ್ಡಿಗಾಗಿ, ಭವಿಷ್ಯದ ತಮ್ಮ ವಿವಿಧ ಯೋಜನೆಗಳಲ್ಲಿ ಬಳಸಲಿಕ್ಕಾಗಿ...ಹೀಗೆ ಬೇರೆ ಬೇರೆ ಕಾರಣಗಳಿಗಾಗಿ ಸಾರ್ವಜನಿಕರು ತಮ್ಮ ಹಣವನ್ನು ಬ್ಯಾಂಕಿನಲ್ಲಿ ಠೇವಣಿ ಇಟ್ಟಿರುತ್ತಾರೆ. ನಿಶ್ಚಿತ ಕಾಲಾವಧಿಯ ಮುದ್ದತು ಠೇವಣಿ (ಎಫ್‌ಡಿ) ಅದಾಗಿರಬಹುದು, ಪ್ರತಿ ತಿಂಗಳೂ ಕಟ್ಟುವ ಆವರ್ತ ಠೇವಣಿ (ಆರ್‌ಡಿ) ಅದಾಗಿರಬಹುದು, ಅಥವಾ ಕೈಯಲ್ಲಿ ಹಣ ಇದ್ದಾಗ ಬ್ಯಾಂಕಿನಲ್ಲಿಟ್ಟು, ಬೇಕೆಂದಾಗ ಬೇಕಾದಷ್ಟು ಹಣವನ್ನು ಮರಳಿ ಪಡೆಯಬಹುದಾದ ಉಳಿತಾಯ ಖಾತೆ (ಎಸ್.ಬಿ) ಅದಾಗಿರಬಹುದು.

ಉಳಿತಾಯ ಖಾತೆಯನ್ನು ವ್ಯವಹರಿಸುವಾಗ ಹಣವನ್ನು ಪಡೆಯಲು ಗ್ರಾಹಕರು ಚೆಕ್ (ಅಥವಾ ಧನಾದೇಶ) ಬಳಸಬೇಕಾಗುತ್ತದೆ. ತನ್ನ ಉಳಿತಾಯ ಖಾತೆಯಲ್ಲಿ ಸಾಕಷ್ಟು ಹಣ ಇದ್ದಾಗ ಆ ಗ್ರಾಹಕ ನೀಡಿದ ಚೆಕ್ ಸಾಮಾನ್ಯವಾಗಿ ವಾಪಸ್ ಆಗುವುದಿಲ್ಲ, ಬದಲಿಗೆ ಮಾನ್ಯವಾಗಿ ಹಣ ಧನಾದೇಶ ನೀಡಿದವನ ಕೈಗೆ ಸಿಗುತ್ತದೆ. ಆದರೆ, ಕೆಲವು ಸಂದರ್ಭಗಳಲ್ಲಿ ಉಳಿತಾಯ ಖಾತೆಯಲ್ಲಿ ಸಾಕಷ್ಟು ಶಿಲ್ಕು ಇದ್ದರೂ ಸಹ ಚೆಕ್‌ನ್ನು ಮಾನ್ಯಮಾಡದೇ ಬ್ಯಾಂಕು ವಾಪಸ್ ಮಾಡಬಹುದು, ಅಂತಹ ಸಂದರ್ಭಗಳು ಎಂದರೆ:

೧. **ಚೆಕ್‌ನ್ನು ತಿರಸ್ಕರಿಸಲು ಗ್ರಾಹಕನೇ ಕೇಳಿದಾಗ :**

ಚೆಕ್‌ನ್ನು ಖಾತೆದಾರನು ತನ್ನ ಇಷ್ಟದವರಿಗೆ ನೀಡಿದ ನಂತರ, ಆತನಿಗೆ ಆ ಚೆಕ್ಕನ್ನು (ಬೇರೆ ಬೇರೆ ಕಾರಣಗಳಿಂದಾಗಿ) ನೀಡಬಾರದಿತ್ತು ಅನ್ನಿಸಬಹುದು – ಆ ಚೆಕ್ಕಿನಲ್ಲಿ ಬರೆದ ಮೊಬಲಗು ಹೆಚ್ಚೋ ಕಮ್ಮಿಯೋ ಆಯ್ತು ಅನ್ನಿಸಬಹುದು. ಅಥವಾ ಇಂತಹ ಇನ್ನಾವುದೇ ಕಾರಣಕ್ಕಾಗಿ ಬ್ಯಾಂಕಿಗೆ ಸದರಿ ಚೆಕ್ಕು ಬಂದರೆ ಅದನ್ನು ಮರಳಿಸಲು ಲಿಖಿತವಾಗಿ ಕೇಳಬಹುದು. ಅಂತಹ ಸಮಯದಲ್ಲಿ ಆ ಬ್ಯಾಂಕು ಅಂತಹ ಚೆಕ್ಕನ್ನು ಮರಳಿ ನೀಡುತ್ತದೆ.

೨. **ಗ್ರಾಹಕನ ಸಾವು ಬ್ಯಾಂಕಿಗೆ ತಿಳಿದಾಗ:**

ಯಾವನೇ ವ್ಯಕ್ತಿ ಪೌತಿ (ಮರಣ) ಆದಾಗ ಆತನ ಆಸ್ತಿ ಪಾಸ್ತಿಗಳೆಲ್ಲ ಆತನ ವಾರಸುದಾರರಿಗೆ ಸಲ್ಲುತ್ತದೆ. ಹಾಗಾಗಿ ತನ್ನ ಖಾತೆದಾರ ಸತ್ತ ವಿಷಯ ತಿಳಿದ ತಕ್ಷಣ ಬ್ಯಾಂಕಿನವರು ಸದರಿ ಖಾತೆದಾರನ ಖಾತೆಯನ್ನು ವ್ಯವಹರಿಸಲು ಬಿಡುವಂತಿಲ್ಲ – ಬದಲಿಗೆ ಆ ಗ್ರಾಹಕನ ಸಂಬಂಧಿಗಳ ವಾರಸುಪತ್ರ (Legal Succession Certificate)ಪಡೆದು ಆ ವಾರಸುಪತ್ರದಲ್ಲಿ ಹೇಳಿದವರಿಗೆ ಅಥವಾ ನಾಮ ನಿರ್ದೇಶಿತರಿಗೆ ಮಾತ್ರ ಮೃತ ಖಾತೆದಾರನ ಖಾತೆಯ ಹಣವನ್ನು ನೀಡಬೇಕಾಗಿರುವುದು ಬ್ಯಾಂಕಿನ ಕರ್ತವ್ಯ. ಅಂತಹ ಸಂದರ್ಭಗಳಲ್ಲಿ ಬ್ಯಾಂಕು ತನ್ನ ಮೃತ ಗ್ರಾಹಕನ ಚೆಕ್ಕನ್ನು ಮರಳಿಸುತ್ತದೆ. ಆದರೆ, ತನ್ನ ಗ್ರಾಹಕ–ಸತ್ತ

ವಿಷಯ ಬ್ಯಾಂಕಿಗೆ ತಿಳಿಯದಿಲ್ಲದಿರುವಾಗ ಬಂದ ಚೆಕ್ಕನ್ನು ಮಾನ್ಯ ಮಾಡಿ ಹಣ ಪಾವತಿಸಿದರೆ ತಪ್ಪಿಲ್ಲ.

೩. ಗ್ರಾಹಕ ಸಂಪೂರ್ಣ ದಿವಾಳಿಯಾದಾಗ :

ಸೂಕ್ತ ನ್ಯಾಯಾಲಯ (Competent Court)ದ ಆದೇಶದ ರೀತ್ಯಾ ತನ್ನ ಖಾತೆದಾರ ದಿವಾಳಿ ಆಗಿರುವ ವಿಷಯ ಬ್ಯಾಂಕುಗಳಿಗೆ ತಿಳಿದಾಗ, ಅಂತಹ ಖಾತೆದಾರನ ಖಾತೆಯನ್ನು ಬ್ಯಾಂಕುಗಳು ವ್ಯವಹರಿಸಲು ಬಿಡುವುದಿಲ್ಲ.

೪. ಖಾತೆದಾರನಿಗೆ ಮತಿಭ್ರಮಣೆ ಆದಾಗ:

ಮನುಷ್ಯನಿಗೆ ಮತಿಭ್ರಮಣೆ ಆದಾಗ ಆತನಿಗೆ ತಾನೇನು ಹೇಳುತ್ತಿದ್ದೇನೆ, ಏನು ಮಾಡುತ್ತಿದ್ದೇನೆ, ಏನು ಬರೆಯುತ್ತಿದ್ದೇನೆ...ಇತ್ಯಾದಿ ತಿಳಿದಿರುವುದಿಲ್ಲ. ಹಾಗಾಗಿ ಖಾತೆದಾರ ಮತಿಭ್ರಮಣೆಗೊಂಡ ವಿಷಯ ತಿಳಿದಾಕ್ಷಣ ಬ್ಯಾಂಕುಗಳು ಅಂತಹ ಖಾತೆದಾರನ ಚೆಕ್ಕನ್ನು ವಾಪಸ್ ನೀಡುತ್ತವೆ.

೫. ನ್ಯಾಯಾಲಯ ಗಾರ್ನಿಶೀ ಆಜ್ಞೆ ಜಾರಿಮಾಡಿದಾಗ:

ಹಾಗೆ ಮಾಡಲು ಅಧಿಕಾರವುಳ್ಳ ನ್ಯಾಯಾಲಯವು ಗ್ರಾಹಕನೋರ್ವನ ಯಾವುದೇ ಬ್ಯಾಂಕಿನಲ್ಲಿರುವ ಖಾತೆಯ ವ್ಯವಹಾರವನ್ನು ನಿಲ್ಲಿಸುವಂತೆ ಅಥವಾ ತಡೆಹಿಡಿಯುವಂತೆ ಆ ಬ್ಯಾಂಕಿಗೆ "ಗಾರ್ನಿಶೀ ಆಜ್ಞೆ" ಹೊರಡಿಸಬಹುದು. ನ್ಯಾಯಾಲಯದಿಂದ ಇಂತಹ ಆಜ್ಞೆ ಬಂದ ಮೇಲೆ ಅಂತಹ ಬ್ಯಾಂಕು ಆ ಖಾತೆದಾರನ ಖಾತೆಗೆ ಸಂಬಂಧಿಸಿದಂತೆ ಬರುವ ಚೆಕ್ಕುಗಳನ್ನು ಪಾವತಿಸುವಂತಿಲ್ಲ. ಆದರೆ 'ಗಾರ್ನಿಶೀ ಆಜ್ಞೆ' ಕಡಿಮೆ ಮೊತ್ತಕ್ಕಿದ್ದು, ಖಾತೆಯಲ್ಲಿ ಜಾಸ್ತಿ ಶಿಲ್ಕು ಇದ್ದರೆ ಹೀಗೆ ಜಾಸ್ತಿ ಇರುವ (ಹಾಲಿ ಶಿಲ್ಕು – ಗಾರ್ನಿಶೀ ಆಜ್ಞೆಯ ಮೊತ್ತ = ಜಾಸ್ತಿ ಮೊಬಲಗು) ಮೊಬಲಗನ್ನು ಮಾತ್ರ ವ್ಯವಹರಿಸಲು ಖಾತೆದಾರನಿಗೆ ಅವಕಾಶ ಮಾಡಿಕೊಡಬಹುದಾಗಿದೆ.

೬. ಪಾಲುದಾರಿಕೆ ಸಂಸ್ಥೆಯ ಓರ್ವ ಪಾಲುದಾರ ತಡೆಹಿಡಿದಾಗ:

ಪಾಲುದಾರಿಕೆ (ಪಾರ್ಟನರ್‌ಶಿಪ್) ಸಂಸ್ಥೆಯ ಚೆಕ್ಕೊಂದು ಬ್ಯಾಂಕಿಗೆ ಬಂದಾಗ ಆ ಸಂಸ್ಥೆಯ ಓರ್ವ ಪಾಲುದಾರ ಸದರಿ ಚೆಕ್ಕನ್ನು ಮಾನ್ಯ ಮಾಡದಿರಲು ಲಿಖಿತವಾಗಿ ಕೋರಿದಾಗ, ಆ ಚೆಕ್ಕನ್ನು ಬ್ಯಾಂಕು ಹಿಂತಿರುಗಿಸಲೇಬೇಕು.

ಈ ಮೇಲಿನ ಮುಖ್ಯ ಕಾರಣಗಳಲ್ಲದೇ, ಖಾತೆದಾರನ ಸಹಿ (ಚೆಕ್ಕಿನಲ್ಲಿ ಇರುವುದು) ಬ್ಯಾಂಕಿನಲ್ಲಿರವ ಆತ ನೀಡಿದ ಈ ಮುಂಚಿನ ಮಾದರಿ ಸಹಿ ಜತೆ ತಾಳೆಯೇ ಆಗದಿದ್ದಾಗ, ಚೆಕ್ಕಿನಲ್ಲಿ ಬರೆದಿರುವ ಮೊಬಲಗು ಅಂಕಿಯಲ್ಲೋ ಒಂದು ಅಕ್ಷರದಲ್ಲಿ ಇನ್ನೊಂದು ಇದ್ದಾಗ, ಚೆಕ್‌ನ ತಾರೀಖು ಮುಂದಿನ ತಾರೀಖು ಇದ್ದಾಗ ಅಥವಾ ಆರು ತಿಂಗಳುಗಳಿಗಿಂತಲೂ ಹಿಂದಿನ ತಾರೀಖು ಇದ್ದಾಗ, ಚೆಕ್ಕು ಹರಿದುಹೋದಾಗ...ಇತ್ಯಾದಿ ಕಾರಣಗಳಿಗೂ ಸಹ ಖಾತೆದಾರನ ಖಾತೆಯಲ್ಲಿ ಸಾಕಷ್ಟು ಶಿಲ್ಕು ಇದ್ದರೂ ಅಂತಹ ಚೆಕ್ಕನ್ನು ಮಾನ್ಯ ಮಾಡದೇ ವಾಪಸ್ ಮಾಡಬೇಕಾಗುತ್ತದೆ – ಆದರೆ ನೆನಪಿರಲಿ. ಹೀಗೆ ಚೆಕ್ಕನ್ನು ಮರಳಿಸುವಾಗ ಸಕಾರಣವನ್ನು ಲಿಖಿತದಲ್ಲಿ ನೀಡಿ ಚೆಕ್ಕನ್ನು ಮರಳಿಸಬೇಕಾಗುತ್ತದೆ.

*

ಮಾನಸಿಕ ಒತ್ತಡ ಮತ್ತು ಪರಿಹಾರೋಪಾಯಗಳು

ಮನಸಿಕ ಒತ್ತಡ (Stress) ಹಿರಿಯ ಮನುಷ್ಯರಲ್ಲಿ ಮಾತ್ರವಲ್ಲ, ಮಗುವು ತಾಯ ಗರ್ಭದಿಂದ ಜನಿಸುವ ಮುಂಚೆನೇ ಇರುತ್ತದೆ! ಈ ಮಾನಸಿಕ ಒತ್ತಡ ಮಿತವಾಗಿದ್ದರೇನೇ ಹಿತ (ಮಾನಸಿಕ ಒತ್ತಡ ಇಲ್ಲದ ಮನುಷ್ಯ ಹೆಣವೆ ಸರಿ). ಅಮಿತವಾದಾಗ ಸಮಸ್ಯೆಗಳು ಆರಂಭ, ಖಾಯಿಲೆಗಳು ಪ್ರಾರಂಭ. ಮಾನಸಿಕ ಒತ್ತಡದ ದುಷ್ಪರಿಣಾಮಗಳ ನಿವಾರಣೆ ಹೇಗೆ ಎಂದು ನೋಡೋಣ:

ಹೆಚ್ಚಿನ ಇಂತಹ ಮಾನಸಿಕ ಒತ್ತಡಗಳು ಸಮಸ್ಯೆಗಳು ಜಾಸ್ತಿ ಆದಾಗ ಅದನ್ನು ಪರಿಹಾರ ಮಾಡಿಕೊಳ್ಳುವುದು ಹೇಗೆ ಎಂಬ ಬಗ್ಗೆ ಅರಿವು ಇಲ್ಲದುದರಿಂದ ಬರುತ್ತದೆ. ಕಡಿಮೆ ನೀರಿದ್ದ ಪಾತ್ರೆಗೆ ಕೆಲವು ಕಲ್ಲು ಹಾಕಿ ಕಾಗೆಯೊಂದು ಜಾಣ್ಮೆಯಿಂದ ನೀರನ್ನು ಮೇಲಕ್ಕೆ ತಂದುಕೊಂಡು, ಆ ನೀರನ್ನು ಕುಡಿದು ಹಾಯಾಗಿದ್ದ ಕತೆಯನ್ನು ನೆನಪಿಸಿಕೊಳ್ಳಿ. ಹಲವಾರು ಸಮಸ್ಯೆಗಳು ತಲೆ ತಿನ್ನುತ್ತಿರುವಾಗ ಹೀಗೆ ಮಾಡಿ:

1. **ಯೋಚಿಸಿ:** ನಮ್ಮ ಮುಂದಿನ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಉತ್ತಮ ಮಾರ್ಗಗಳಿರಬೇಕು ಎಂಬುದನ್ನು ಯೋಚಿಸಿ, ಮೇಲೆ ಹೇಳಿದ ಕಾಗೆಯ ಕತೆಯಂತಹ ಕತೆಗಳನ್ನು ನೆನಪಿಸಿಕೊಳ್ಳಿ.
2. **ಕೇಳಿ, ಕೇಳಿ, ಕೇಳಿ :** ಸಮಸ್ಯೆಗಳು ಎದುರಾದಾಗ ಅವುಗಳ ಪರಿಹಾರ ಮಾರ್ಗಗಳ ಬಗ್ಗೆ ನೀವು ನಿಮ್ಮಲ್ಲೇ ಯೋಚಿಸಿ, ಪರರನ್ನೂ ಕೇಳಿ ನೋಡಿ...
3. **ತಕ್ಷಣ ಮಾಡಿ :** ಸಮಸ್ಯಾ ಪರಿಹಾರಕ್ಕೆ ಈಗಲೇ ಕಾರ್ಯೋನ್ಮುಖರಾಗಿರಿ – ಸಮಸ್ಯೆಗಳು ಹಲವಾರು ಇರುವಾಗ ಯಾವುದನ್ನು ಮುಂಚೆ ಪರಿಹರಿಸಿಕೊಳ್ಳಬೇಕು ಎಂಬ ಬಗ್ಗೆ ಯೋಚಿಸಿ – ಬೇರೆಯವರಿಂದ ಈ ಕೆಲಸಗಳನ್ನು ಮಾಡಿಸಬಹುದು ಎಂದಾದರೆ ಅವರಿಗೆ ಹೇಳಿ ಮಾಡಿಸಿ, ಆದರೆ ಅವರು ಈ ಕೆಲಸ ಮಾಡುತ್ತಿರುವಾಗ, ಆಗಾಗ ಅವರು ಮಾಡುತ್ತಿರುವ ಈ ಕೆಲಸವನ್ನು, ಅದರ ಪ್ರಗತಿಯನ್ನು ನೋಡುತ್ತಿರಿ.

ಉತ್ತಮ ಯೋಚನೆಗಳಿಂದ ಉತ್ತಮ ಆರೋಗ್ಯ

ನಿಮ್ಮ ಯೋಚನೆಗಳನ್ನು ಗಮನಿಸಿ, ಅವು ನಿಮ್ಮ ಮಾತುಗಳಾಗುತ್ತವೆ. ನಿಮ್ಮ ಮಾತುಗಳನ್ನು ಗಮನಿಸಿ, ಅವು ನಿಮ್ಮ ಕ್ರಿಯೆ ಆಗುತ್ತವೆ. ನಿಮ್ಮ ಕ್ರಿಯೆಗಳನ್ನು ಗಮನಿಸಿ, ಅವು ನಿಮ್ಮ ಚಟ ಆಗುತ್ತವೆ. ನಿಮ್ಮ ಚಟಗಳನ್ನು ಗಮನಿಸಿ, ಅವು ನಿಮ್ಮ ನಡತೆ ಆಗುತ್ತವೆ.

ಹಾಗಾಗಿ ಉತ್ತಮ ಯೋಚನೆಗಳನ್ನೇ ಮಾಡಿ, ಸನ್ನಡತೆಯವರಾಗಿರಿ, ಆರೋಗ್ಯವಂತರಾಗಿರಿ.

ಬೈಸಿಕೊಳ್ಳಲು ಸಿದ್ಧರಾಗಿರಿ

ನೀವೊಬ್ಬ ನೌಕರ, ವ್ಯಾಪಾರಿ ಆಗಿದ್ದರೆ ಪ್ರತಿದಿನವೂ ನಿಮ್ಮ ಧಣಿ/ಹಿರಿಯ ಅಧಿಕಾರಿ/ಗ್ರಾಹಕರಿಂದ ಬೈಸಿಕೊಳ್ಳಲು ತಯಾರಾಗಿರಿ. ಪ್ರಾಮಾಣಿಕವಾಗಿ ನಿಮ್ಮ ಆತ್ಮಸಾಕ್ಷಿಯಂತೆ ಕೆಲಸ ಮಾಡಿದ್ದರೆ ಮಾತ್ರ ಅವರು ನಿಮಗೆ ಬೈದದ್ದಲ್ಲ, ಬೇರೆ ಯಾರಿಗೋ ಬೈದಿದ್ದು ಎಂದೇ ತಿಳಿಯಿರಿ!

ಸ್ವಲ್ಪ ಇಟ್ಟುಕೊಳ್ಳಲು ಮರೆಯಬೇಡಿ

ನೀವು ನಿಮ್ಮ ಜೀವಿತಾವಧಿಯಲ್ಲಿ ನಿಮ್ಮ ಎಲ್ಲವನ್ನೂ ನಿಮ್ಮ ಮಕ್ಕಳಿಗೆ ಕೊಟ್ಟು ಬಿಡಬೇಡಿ. "ಸ್ವಲ್ಪವನ್ನಾದರು" ನಿಮ್ಮ ಬಳಿ ಇಟ್ಟುಕೊಂಡಿರಿ. ಆಪತ್ಕಾಲದಲ್ಲಿ ಇದು ನಿಮ್ಮ ಸಹಾಯಕ್ಕೆ ಬರುತ್ತದೆ.

ಸ್ವಪರಿವರ್ತನೆ ಮಾತ್ರ ಸಾಧ್ಯ

ನೀವು ನಿಮ್ಮ ದೇಶ, ನಿಮ್ಮ ಊರು, ನಿಮ್ಮ ಕುಟುಂಬದ ತಂದೆ-ತಾಯಿ, ಹೆಂಡತಿ, ಸೋದರ ಸೋದರಿ ಮಗ, ದಣಿ (ಮಾಲೀಕ) ಇತ್ಯಾದಿ ಯಾರನ್ನೂ ಪರಿವರ್ತಿಸಲು ಸಾಧ್ಯವಿಲ್ಲ. ಸಾಧ್ಯ ಇರುವುದು ನಿಮ್ಮ ಸ್ವಂತ ಬದಲಾವಣೆ ಮಾತ್ರ. ಹಾಗಾಗಿ ನೆನಪಿರಲಿ, ನೀವೇ ಸ್ವತಃ ಬದಲಾಗಬೇಕು.

ಪ್ರೀತಿ, ಪ್ರಣಯ

ಸಾಧ್ಯವಾದಾಗಲೆಲ್ಲ ನಿಮ್ಮ ಕುಟುಂಬದೊಂದಿಗೆ ಹೆಚ್ಚಿನ ಸಮಯ ಕಳೆಯಿರಿ. ಪ್ರತಿದಿನ ನಿಮ್ಮ ಹೆಂಡತಿಯನ್ನು 'ನಾನೇನಾದರೂ ಕೆಲಸ ಮಾಡಲೇ?' ಎಂದು ಕೇಳುತ್ತಿರಿ. ಸಾಧ್ಯವಾದಷ್ಟು ಆಕೆಗೆ ಸಹಾಯಮಾಡಿ. ಆಗಾಗ ಆಕೆಗೆ ಹೂವನ್ನು ಖರೀದಿಸಿ ಕೊಡುತ್ತಿರಿ. ಆಕೆ ತವರಿಗೆ ಹೋಗಿ ತುಂಬ ಸಮಯ ಇದ್ದಾಗ, ಅವಳ ತವರಿಗೆ ನೀವೂ ಹೋಗಿ ಒಂದೆರಡು ರಾತ್ರಿ ಕಳೆದುಬನ್ನಿ. ನಿಮ್ಮ ಪ್ರೀತಿ-ಪ್ರಣಯ ಗಂಡ ಹೆಂಡಿರಲ್ಲಿ ಸದಾ ಕಾಲ ಇರಲಿ. ಇದು ನಿಮ್ಮ ವೈಯಕ್ತಿಕ ವಿಷಯವಾದರೂ, ನಿಮ್ಮ ಮಾನಸಿಕ ಒತ್ತಡಗಳನ್ನೆಲ್ಲ ಓಡಿಸಿ ಬಿಡುವ ಅದಮ್ಯ ಶಕ್ತಿ ಹೊಂದಿದೆ, ಪ್ರಯತ್ನಿಸಿ ನೋಡಿ.

ಯೋಚಿಸಲು ಸಮಯ ಯಾವುದಾದರೇನು?

ದಾಡಿ (ಮುಖಕ್ಷೌರ) ಮಾಡಿಕೊಳ್ಳುವಾಗ, ಸ್ನಾನ ಮಾಡುವಾಗ, ಪ್ರಯಾಣ ಮಾಡುವಾಗ, ಸ್ನಾನ ಮಾಡುವಾಗ, ಕೊನೆಗೆ ಶೌಚಾಲಯದಲ್ಲಿ ಕುಳಿತಿರುವಾಗಲೂ, ಅಂದರೆ, ಸಾಧ್ಯವಾದಾಗಲೆಲ್ಲ ನಿಮ್ಮ ಮಾನಸಿಕ ಒತ್ತಡ ಕಡಿಮೆ ಮಾಡಿಕೊಳ್ಳಲು ಬೇರೆ ಬೇರೆ ಮಾರ್ಗಗಳನ್ನು ಯೋಚಿಸಿ.

ವೃತ್ತಿ ಪರಿಣತಿ

ನಿಮ್ಮ ವೃತ್ತಿ ಬಗ್ಗೆ ನಿಮಗೆ ವೃತ್ತಿ ನೈಪುಣ್ಯ, ಪರಿಣತಿ ಪೂರ್ತಿಯಾಗಿ ಇರಲಿ. ನಿಮ್ಮ ವೃತ್ತಿಯಿಂದ ನಿಮಗಾಗುತ್ತಿರುವ ಅನುಕೂಲಗಳ ಬಗ್ಗೆ ಕೃತಜ್ಞತಾ ಭಾವನೆ ಸದಾಕಾಲ ಇರಲಿ – ಬೇಕಿದ್ದರೆ ಈ ಬಗ್ಗೆ ತರಬೇತಿ ಪಡೆಯಬಹುದು.

ಕಡಿಮೆ ಅದೃಷ್ಟಶಾಲಿಗಳೊಂದಿಗೆ ಹೋಲಿಸಿಕೊಳ್ಳಿ

ನಿಮ್ಮನ್ನು ಬೇರಾರೊಂದಿಗೆ ಹೋಲಿಸಲೇ ಬೇಕಿದ್ದರೆ ನಿಮಗಿಂತ ಕಡಿಮೆ ಅದೃಷ್ಟಶಾಲಿಗಳೊಂದಿಗೆ ಹೋಲಿಸಿಕೊಳ್ಳಿ, ನಿಮ್ಮ ಸೌಭಾಗ್ಯ ಅರಿತುಕೊಳ್ಳಿ, ನೀವು ಭಾಗ್ಯವಂತರು ಎಂಬುದನ್ನರಿತುಕೊಳ್ಳಿ. ವೃಥಾ ಯಾರ್ಯಾರೊಂದಿಗೋ ಹೋಲಿಸಿಕೊಂಡು ಕೊರಗದಿರಿ.

ಕೋಪ ನಿಯಂತ್ರಣ, ಸಮಚಿತ್ತ ದಿವ್ಯೌಷಧಿ

ಎಂದೂ ಕೋಪಿಸಿಕೊಳ್ಳಬೇಡಿ. ಎಂದೆಂದೂ ಸಮಚಿತ್ತದಿಂದ ಇರಿ. ಈ 'ಸಮಚಿತ್ತ' ಎಂದರೆ ಕೋಪತಾಪಗಳಿಗೆ ದಿವ್ಯೌಷಧಿ! ಇಲ್ಲವಾದರೆ ಹತ್ತು ನಿಮಿಷದ ಕೋಪದಿಂದ ನೀವು ಆ ೬೦೦ ಸೆಕೆಂಡುಗಳ ಹರ್ಷವನ್ನು ಕಳೆದುಕೊಳ್ಳುತ್ತೀರಿ– ಕಳೆದುಹೋದ ಸಮಯ ಮತ್ತೆ ಬಾರದು, ಅಲ್ಲವೇ?

ಸಣ್ಣ ಸಣ್ಣ ವಿಷಯಗಳ ಬಗ್ಗೆ ಹೊಗಳಿಕೆ

ನಿಮ್ಮ ನೌಕರರು/ಮಕ್ಕಳು ಮಾಡುವ ಸಣ್ಣ ಸಣ್ಣ ಸಾಧನೆ, ಕೆಲಸಗಳ ಬಗ್ಗೆಯೂ ಅವರನ್ನು ಅಭಿನಂದಿಸಿ, ಬೆನ್ನುತಟ್ಟಿ, ಪ್ರೋತ್ಸಾಹಿಸಿ.

ಅತ್ಯಾಸೆಯೇ ದುರಾಸೆ

ಆಸೆ ಬೇಕು. ಅತ್ಯಾಸೆ ಬೇಡಾ. ಯಾಕೆಂದರೆ ಅತ್ಯಾಸೆಯಿಂದ ದುರಾಸೆ. ದುರಾಸೆಯಿಂದ ಪಾಪಕೃತ್ಯ. ಪಾಪದಿಂದ ಮಾನಸಿಕ ಚಿಂತೆ, ಒತ್ತಡ. ಬುದ್ಧ ಹೇಳಿದ ಹಾಗೆ: "ಆಸೆಯೇ ಸಕಲ ದುಃಖಕ್ಕೆ ಮೂಲ" – ಗಮನದಲ್ಲಿರಬೇಕಾದ ನೂರಕ್ಕೆ ನೂರು ಸತ್ಯದ, ಚಿನ್ನದಂತಹ ಮಾತು!

ಬದುಕಲು ತಿನ್ನಿ, ತಿನ್ನಲು ಬದುಕುವದಲ್ಲ

"ತಿನ್ನಲು ಬದುಕುವುದಲ್ಲ , ಬದುಕಲು ತಿನ್ನುವುದು" – ಅರ್ಥ ಮಾಡಿಕೊಳ್ಳಬೇಕು. ಸಮತೂಕದ ಆಹಾರ ಸೇವನೆ ಆರೋಗ್ಯಕರ. ದೇಹಕ್ಕೆ ಚೆನ್ನಾಗಿರುವುದನ್ನೇ ತಿನ್ನಿ. ಚೆನ್ನಾಗಿ ಬಾಳಿ.

ತರಬೇತಿ

ಕಷ್ಟದ ಸಮಯವನ್ನು/ಪರಿಸ್ಥಿತಿಯನ್ನು ಅವರವರೇ ಎದುರಿಸಲು ನಿಮ್ಮ ಮಕ್ಕಳಿಗೆ, ನೌಕರರಿಗೆ ಸಮರ್ಥ ತರಬೇತಿ ನೀಡಿ.

ಬೇಗ ಮಲಗು, ಬೇಗ ಏಳು ....ಸಂಜೀವಿನಿ ಸೂತ್ರ

ನಿಮ್ಮ ಮಕ್ಕಳನ್ನು ರಾತ್ರಿ ಬೇಗ ಮಲಗಿ, ಬೆಳಿಗ್ಗೆ ಬೇಗ ಏಳಲು ಅಭ್ಯಸಿಸಿ, ನೀವೂ ಹಾಗೇ ಮಾಡಿ. ರಾತ್ರಿಯ ನಿದ್ದೆ ಎಂದರೆ ನೆಮ್ಮದಿಯ ನಿದ್ದೆ. ಅದುವೇ ಬದುಕಿನ ಸಂಜೀವಿನಿ, ನೆನಪಿರಲಿ.

ವರ್ತನೆ ಕಲಿಸಿ

ತಪ್ಪಾಯ್ತು, ಧನ್ಯವಾದಗಳು ಇತ್ಯಾದಿ ಮಾತುಗಳನ್ನು ಸಕಾಲದಲ್ಲಿ ನೀವೂ ಹೇಳಿ, ನಿಮ್ಮ ನೌಕರರಿಗೆ, ಮಕ್ಕಳಿಗೆ ಸಹ ಕಲಿಸಿ.

ಪ್ರಾರ್ಥನೆ ಮರೆಯದಿರಿ

ಯಾವ ದೇವರನ್ನಾದರೂ ಪ್ರಾರ್ಥಿಸಿ, ಪರವಾ ಇಲ್ಲ. ಪ್ರಾರ್ಥನೆಯನ್ನು ಮರೆಯಬೇಡಿ – ಏಕಾಗ್ರತೆಗೆ ಪ್ರಾರ್ಥನೆ ಅನುಕೂಲ, ನೆಮ್ಮದಿಗೆ ಸೋಪಾನ.

ಕ್ಷಮಾಗುಣ

"ತಪ್ಪು ಮಾಡುವುದು ಮಾನವ ಸಹಜಗುಣ, ಕ್ಷಮಿಸುವುದು ದೇವಗುಣ". ಈ ಗಾದೆ ನಂಬಲೇ ಬೇಕಾದದ್ದು –ನೌಕರರು, ಮಕ್ಕಳು ತಪ್ಪು ಮಾಡಿದಾಗ ಅವರನ್ನು ತಿದ್ದಿ, ನಂತರ ಕ್ಷಮಿಸಿ. ಕ್ಷಮಾಗುಣ ದೊಡ್ಡದು, ಕ್ಷಮಿಸಿದವನೂ 'ದೊಡ್ಡವ'ನಾಗುತ್ತಾನೆ!

ನಗಿ, ನಗಿಸಿ

ಯಾವಾಗಲೂ ನಗುತ್ತಾ ಇರಿ, ಇತರರನ್ನೂ ನಗಿಸಿ. ನಿಮ್ಮ ನಗು ನಿಮ್ಮ ಆರೋಗ್ಯವನ್ನು ಕಾಪಾಡುತ್ತದೆ. ಅಲ್ಲದೇ, ನಿಮ್ಮ ಮೂಲಕ ನಗುತ್ತಿರುವ ಇತರರ ಆರೋಗ್ಯವೂ ಚೆನ್ನಾಗಿರುತ್ತದೆ.

ಪುಸ್ತಕಗಳ ಸಹವಾಸ ಇರಲಿ

ಪುಸ್ತಕಗಳೇ ನಿಜವಾದ ಮಿತ್ರರು – ಸಂಕಷ್ಟದಲ್ಲಿ ಪುಸ್ತಕಗಳು ನೀಡುವ ಮಾರ್ಗದರ್ಶನ, ಸಮಸ್ಯಾ ಪರಿಹಾರ ಯಾವ ಮಿತ್ರನೂ ನೀಡಲಾರ ! ವಿರಾಮದಲ್ಲಿ ಪುಸ್ತಕಗಳನ್ನು, ಪತ್ರಿಕೆಗಳನ್ನು ಓದಿ.

ಕ್ರಿಯಾಶೀಲತೆ

ಎಂದೆಂದೂ ಕ್ರಿಯಾಶೀಲವಾಗಿರಿ. ಈ ಕ್ರಿಯಾಶೀಲತೆ ನಿಮ್ಮ ಆಯುಸ್ಸನ್ನು ಹೆಚ್ಚಿಸುತ್ತದೆ.

ಸಕಾಲದ ಹಾಜರಾತಿ

ಕಛೇರಿಗೆ ಸಾಕಷ್ಟು ಮುಂಚಿತವಾಗಿ ಹೊರಡಿ, ಸ್ವಂತ ವಾಹನದಲ್ಲಿ ಹೋಗುವುದಾದರೆ ವಾಹನ ಚಲಿಸುವಾಗ (ಡ್ರೈವ್ ಮಾಡುವಾಗ) ಶಾಂತ ಚಿತ್ತರಾಗಿರಿ, ಸುರಕ್ಷಿತವಾಗಿ ಕಛೇರಿ ತಲುಪಿ – ಅಲ್ಲಿ ನಿಮ್ಮ ಸಹೋದ್ಯೋಗಿಗಳನ್ನು ಹರ್ಷಚಿತ್ತ, ನಗುಮುಖದಿಂದ ಬರಮಾಡಿಕೊಳ್ಳಿ, ಸ್ವಾಗತಿಸಿ, ವಂದಿಸಿ.

ರಜಾದಿನಗಳಲ್ಲಿ ಪ್ರವಾಸ

ರಜಾದಿನಗಳಲ್ಲಿ ನಿಮ್ಮ ಕುಟುಂಬದೊಂದಿಗೆ ಪ್ರವಾಸಿಸಿ. ಅದು ಅಸಾಧ್ಯವಾದರೆ ಹತ್ತಿರದ ಉದ್ಯಾನವನಕ್ಕೋ, ದೇವಾಲಯಕ್ಕೋ, ಚಿತ್ರಮಂದಿರಕ್ಕೋ ಎಲ್ಲರೂ ಒಟ್ಟಾಗಿ ಹೋಗಿ ಬನ್ನಿ. 'ಕೋಶ ಓದು, ದೇಶ ನೋಡು' ಮರೆಯುವಂತಿಲ್ಲ.

ಲಿಂಬೆ ಹಣ್ಣಿನ ಬಳಕೆ

ಮಾನಸಿಕ ಒತ್ತಡಕ್ಕೆ ಲಿಂಬೆಹಣ್ಣು (Lemon) ಒಳ್ಳೆಯ ಔಷಧಿ ಎಂದು ಸಂಶೋಧನೆ ಕಂಡುಹಿಡಿದಿದೆ. ಲಿಂಬೆಹಣ್ಣಿನ ಶರಬತ್ತು (ಪಾನಕ) ಆಗಾಗ ಮಾಡಿ ಸೇವಿಸಬಹುದಾಗಿದೆ.

ನೆನಪಿರಲಿ :

ಯಾವುದೇ ಕಾಯಿಲೆ ಇಲ್ಲವಾದರೂ ನೀವು ಈ ಸೂತ್ರಗಳನ್ನು ಅನುಸರಿಸಿದರೆ, ಮುಂದೆ ನಿಮಗೆ ಯಾವ ಕಾಯಿಲೆಯೂ ಬರುವುದಿಲ್ಲ, ನಿಮ್ಮ ಆಯಸ್ಸು ದೀರ್ಘವಾಗುವುದರಲ್ಲಿ ಸಂಶಯವಿಲ್ಲ!!

॥ ಸರ್ವೇ ಜನಾಃ ಸುಖಿನೋ ಭವಂತು ॥

*

ಆಂತರಿಕ ವಿಚಾರಣೆಯ ವಿವಿಧ ಹಂತಗಳು

ಯಾವುದೇ ಒಂದು ಸಂಸ್ಥೆಯಲ್ಲಿ ದುಡಿಯುತ್ತಿರುವ ನೌಕರನು ಪ್ರಚಲಿತ ನಿಯಮ ಕಾನೂನುಗಳ ವಿರುದ್ಧ ವರ್ತಿಸಿ, ತಪ್ಪು ಮಾಡಿದ್ದಾನೆಂದು ಮೇಲ್ನೋಟಕ್ಕೆ ಕಂಡು ಬಂದಾಗ ಆತ ತಪ್ಪು ಮಾಡಿದ್ದು ನಿಜವೇ, ಯಾವ ಯಾವ ತಪ್ಪು ಮಾಡಿದ್ದಾನೆ ಎಂದು ವಿಚಾರಣೆ ಮಾಡುವುದು ಸಾಮಾನ್ಯ. ಇದಕ್ಕೆ "ಆಂತರಿಕ ವಿಚಾರಣೆ" ಎನ್ನುವುದು. ಹೀಗೆ ಸಹಕಾರ ಸಂಸ್ಥೆಗಳಲ್ಲಿ ಆರೋಪಿತ ನೌಕರನ ವಿರುದ್ಧ ನಡೆಸುವ ವಿಚಾರಣೆಯ ಮುಖ್ಯ ಹಂತಗಳು ಈ ಕೆಳಗಿನಂತಿವೆ:-

ವಿಚಾರಣಾಧಿಕಾರಿಯಾಗಿ ನೇಮಕಾತಿಯ ಆದೇಶ ಪಡೆದ ವಿಚಾರಣಾಧಿಕಾರಿಯು ಆಪಾದಿತ ನೌಕರನ ಆರೋಪ ಪಟ್ಟಿ (ಚಾರ್ಜ್ ಶೀಟ್), ಸದರಿ ಆರೋಪ ಪಟ್ಟಿ ತಲುಪಿದ ಬಗ್ಗೆ ಆಪಾದಿತ ನೌಕರ ನೀಡಿದ ಸ್ವೀಕೃತಿ ಪತ್ರ, ಮಂಡನಾಧಿಕಾರಿಯ ನೇಮಕಾತಿಯ ಆದೇಶ, ಇತ್ಯಾದಿ ಅಗತ್ಯ ದಾಖಲಾತಿಗಳನ್ನು ಪಡೆದುಕೊಳ್ಳುವುದು (ಶಿಸ್ತು ಕ್ರಮಾಧಿಕಾರಿಯು ಸದರಿ ದಾಖಲೆಗಳನ್ನು ವಿಚಾರಣಾಧಿಕಾರಿಗೆ ಒದಗಿಸುವುದು).

ವಿಚಾರಣಾಧಿಕಾರಿಯು ಆರೋಪ ಪಟ್ಟಿಯನ್ನು ವಿವರವಾಗಿ ಅಭ್ಯಸಿಸುವುದು.

ಪ್ರಾಥಮಿಕ ವಿಚಾರಣೆ ನಡೆಸುವ ಬಗ್ಗೆ ೧೫ (ಹದಿನೈದು) ದಿನಗಳ ಮುಂಚಿತ ತಿಳುವಳಿಕೆ (ನೋಟೀಸ್)ಯನ್ನು ಆರೋಪಿತ ನೌಕರನಿಗೆ ಮುದ್ದಾಂ ಆಗಿಯಾಗಲೀ ಅಥವಾ ನೋಂದಣಿ ಅಂಚೆ ಸ್ವೀಕೃತಿ ಮೂಲಕ (ಆರ್.ಪಿ.ಎ.ಡಿ.)ವಾಗಲಿ ಜಾರಿ ಮಾಡುವುದು. ಆರೋಪಿತನ ಮನೆಗೆ ಹೋಗಿ ಮುದ್ದಾಂ ಜಾರಿಗೊಳಿಸುವ ಮೂಲಕ ಅಥವಾ ಆರೋಪಿ ಮನೆಯಲ್ಲಿ ಇಲ್ಲವಾದರೆ, ಆತನ ಮನೆಯಲ್ಲಿರುವ ವಯಸ್ಕರಿಗೆ ನೋಟೀಸು, ಜಾರಿ ಮಾಡಿ, ಸ್ವೀಕೃತಿ (ಸಹಿ) ಪಡೆಯುವ ಮೂಲಕ ಸಹ ಜಾರಿ ಮಾಡಬಹುದು. (ಸ್ಥಳೀಯವಾಗಿ ಹೆಚ್ಚಿನ ಪ್ರಸಾರವಿರುವ ದಿನಪತ್ರಿಕೆಯಲ್ಲಿ ಪ್ರಕಟಣೆ ಮೂಲಕ, ಮೇಲಿನ ವಿಧಾನಗಳಿಂದ ಜಾರಿ ಮಾಡಲು ವಿಫಲವಾದಾಗ ಜಾರಿ ಮಾಡಬಹುದು)

ಪ್ರಾಥಮಿಕ ವಿಚಾರಣೆ ದಿನ (ಮೊದಲ ದಿನ)

೧. ವಿಚಾರಣಾಧಿಕಾರಿಯು "ನಾನೇ ವಿಚಾರಣಾಧಿಕಾರಿಯಾಗಿದ್ದು, ನನ್ನ ನೇಮಕಾತಿಯ ಈ ಆದೇಶವನ್ನು ನೋಡಿ" ಎಂದು ನೇಮಕಾತಿ ಆದೇಶವನ್ನು ಆರೋಪಿತ ನೌಕರನಿಗೆ ತೋರಿಸಬೇಕು.

೨. "ನಿಮಗೆ ಆರೋಪ ಪಟ್ಟಿ ತಲುಪಿದೆಯೆ?" ಎಂದು ಆರೋಪಿತನನ್ನು ಕೇಳಬೇಕು.

೩. ಆರೋಪ ಪಟ್ಟಿಯನ್ನು ಆರೋಪಿತನ ಮುಂದೆ ಓದಬೇಕು.

೪. "ಇದಕ್ಕೆ ನಿಮ್ಮ ಉತ್ತರವೇನು?" ಎಂದು ಆರೋಪಿತನನ್ನು ಪ್ರಶ್ನಿಸಬೇಕು.

ಮೇಲಿನ ಪ್ರಶ್ನೆಗೆ ಆರೋಪಿತನು ಬೇಷರತ್ತಾಗಿ ತಪ್ಪನ್ನು ಒಪ್ಪಿಕೊಂಡರೆ (ಅಂತಹ ಒಪ್ಪಿಗೆಯು ಸ್ವಯಂ ಪ್ರೇರಿತವಾಗಿರಬೇಕು) ಸದರಿ ಹೇಳಿಕೆಯನ್ನು ದಾಖಲಿಸುವುದು ಮತ್ತು ಆಪಾದಿತ ನೌಕರನ ಸಹಿ ಪಡೆಯುವುದು.

೫. ಕ್ರ.ಸಂ. (೪)ರಲ್ಲಿ ಹೇಳಿದ ಆರೋಪ ಒಪ್ಪಿಗೆ ಪತ್ರದ ಒಂದು ನಕಲಿನ ಪ್ರತಿಯನ್ನು ಮಂಡನಾಧಿಕಾರಿಗೆ ನೀಡಿ ವಿಚಾರಣೆಯನ್ನು ಖೈದು ಮಾಡುವುದು.

ಸದರಿ ಆರೋಪಗಳನ್ನು ಪೂರ್ತಿಯಾಗಿ ಅಥವಾ ಭಾಗಶಃ ಸದರಿ ಆರೋಪಿಯು ನಿರಾಕರಿಸಿದರೆ ("ಇಲ್ಲ ನಾನು ಅವುಗಳನ್ನು ಒಪ್ಪುವುದಿಲ್ಲ" ಎಂದು ಆರೋಪಿತನು ತನ್ನ ಹೇಳಿಕೆ ನೀಡಿದರೆ) ಎಲ್ಲ ಆರೋಪಗಳ ಬಗ್ಗೆ ಅಥವಾ ಅಗತ್ಯವಿರುವ ಉಳಿದ ಆರೋಪಗಳ ಬಗ್ಗೆ ಮುಂದಿನ ವಿಚಾರಣೆಯನ್ನು ನಡೆಸಬೇಕಾಗುತ್ತದೆ.

೬. ಆರೋಪಗಳನ್ನು ಕುರಿತು ವಿವರಗಳನ್ನು ಮಂಡಿಸುವಂತೆ ಮಂಡನಾಧಿಕಾರಿಗೆ ಸೂಚಿಸುವುದು.

ಅ) ಆರೋಪಿತನನ್ನು "ನಿಮ್ಮ ಪರವಾಗಿ ನೀವೇ ವಾದಿಸುತ್ತೀರಾ ಅಥವಾ ಯಾರನ್ನಾದರೂ ನೇಮಕ ಮಾಡುತ್ತೀರಾ?" ಎಂದು ಕೇಳುವುದು.

ಪ್ರತಿವಾದಿಯು ತನ್ನ ಪ್ರತಿನಿಧಿಯನ್ನು ತನ್ನ ಪರವಾಗಿ ವಾದಿಸಲು ನೇಮಿಸಿಕೊಳ್ಳಬಹುದಾಗಿದೆ. ಅಂತಹ ಪ್ರತಿನಿಧಿಯು ಈ ರೀತಿ ಆರೋಪಿತನು ಮಾಡಿರುವ ನೇಮಕಾತಿಯನ್ನು ಒಪ್ಪಬೇಕಾಗಿರುತ್ತದೆ.

೭. ಮಂಡನಾಧಿಕಾರಿಯು ಆರೋಪಗಳಿಗೆ ಸಂಬಂಧಿಸಿದ ಸಾಕ್ಷಿಗಳು, ದಾಖಲೆಗಳು, ಇತ್ಯಾದಿಗಳ ಪಟ್ಟಿಯನ್ನು (ಒಂದು) ಪ್ರತಿಯನ್ನು ಪ್ರತಿವಾದಿಯ ಪ್ರತಿನಿಧಿಗೆ ನೀಡುವುದು.

೮. ಪ್ರತಿವಾದಿಯ ಪ್ರತಿನಿಧಿಗೆ ಕ್ರ.ಸಂ. (೭)ರಲ್ಲಿ ಹೇಳಿದ ದಾಖಲೆಗಳನ್ನು ಪರಿಶೀಲಿಸುವ ಬಗ್ಗೆ ಸಾಕಷ್ಟು ಕಾಲಾವಕಾಶ (೫–೬ ದಿನಗಳಿಂದ ಒಂದು ವಾರದವರೆಗೆ) ನೀಡುವುದು.

ಈ ಹಂತದಲ್ಲಿ ಮಂಡನಾಧಿಕಾರಿಯು ವಿಚಾರಣೆಯ ಉದ್ದಕ್ಕೂ ಆರೋಪಿತ ನೌಕರನ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ, ಸಿಗಬಹುದಾದ ದಾಖಲೆಗಳನ್ನು, ಹಾಗೆ ಸಿಕ್ಕಾಗ ವಿಚಾರಣೆಗೆ ಮಂಡಿಸಲು, ವಿಚಾರಣಾಧಿಕಾರಿಯಿಂದ ಅನುಮತಿ ಪಡೆಯುವುದು ಸೂಕ್ತ.

೯. ಪ್ರತಿವಾದಿಯ ಪ್ರತಿನಿಧಿ ಮತ್ತು ಮಂಡನಾಧಿಕಾರಿಯ ಜೊತೆ ಚರ್ಚಿಸಿ, ಮುಂದಿನ ವಿಚಾರಣೆಯ ದಿನವನ್ನು ನಿರ್ಧರಿಸಿ, ದಾಖಲಿಸುವುದು.

೧೦. ಕ್ರ.ಮ. ಸಂ. (೯)ರಲ್ಲಿ ಹೇಳಿದಂತೆ, ಮುಂದಿನ ವಿಚಾರಣಾ ದಿನವನ್ನು ನಿರ್ಧರಿಸಿ, ಅಂದಿನ ನಡವಳಿಕೆಯನ್ನು ದಾಖಲಿಸಿ ಅದಕ್ಕೆ ಆರೋಪಿತನ ಹಾಗೂ ಮಂಡನಾಧಿಕಾರಿಯ ಸಹಿ ಪಡೆದು, ವಿಚಾರಣೆಯನ್ನು ಮುಂದೂಡುವುದು.

ಮುಂದಿನ ವಿಚಾರಣೆಗೆ ಪ್ರತ್ಯೇಕ ತಿಳುವಳಿಕೆ (ನೋಟೀಸ್)ಯ ಅಗತ್ಯವಿರುವುದಿಲ್ಲ.

ಮುಂದಿನ ವಿಚಾರಣೆ (ರೆಗ್ಯುಲರ್ ಎನ್‌ಕ್ವೈಯರಿ)

ಅಗತ್ಯವಾಗಿರುವ ಹೆಚ್ಚುವರಿ ದಾಖಲೆಗಳನ್ನು ವಿಚಾರಣಾಧಿಕಾರಿಗಳು ಮಂಡನಾಧಿಕಾರಿಯಿಂದ ಕೇಳಿ ಪಡೆಯಬಹುದಾಗಿದೆ (ಮೂಲ ದಾಖಲೆಗಳು)

ಮಂಡನಾಧಿಕಾರಿಯು ತನ್ನ ಸಂಸ್ಥೆಯ (ಬ್ಯಾಂಕಿನ) ಪರವಾಗಿ ಪ್ರಕರಣಗಳನ್ನು ಮಂಡಿಸುವುದು – (ಅಗತ್ಯವಾದ ಸಾಕ್ಷಿಗಳನ್ನು) ನೀಡುವ ಜವಾಬ್ದಾರಿಯು ಮಂಡನಾಧಿಕಾರಿಯದಾಗಿರುತ್ತದೆ).

ವಿಚಾರಣಾಧಿಕಾರಿಯು "ನೀವು ಈ ದಾಖಲೆಗಳನ್ನು ಒಪ್ಪುತ್ತೀರಾ?" ಎಂದು ಪ್ರತಿವಾದಿಯ ಪ್ರತಿನಿಧಿಯನ್ನು ಕೇಳುವುದು. ಒಪ್ಪಿದರೆ, ಈ ಕೆಳಗಿನಂತೆ 'ದಾಖಲೆ' ಎಂದು ಗುರುತಿಸುವುದು (ಎಗ್ಸಿಬಿಟ್ಸ್)

ಮ್ಯಾನೇಜ್‌ಮೆಂಟ್ ಎಗ್ಸಿಬಿಟ್ಸ್	–	ಎಂ.ಇ. ಅಥವಾ ಬಿ.ಇ.
ಬ್ಯಾಂಕ್ ಎಗ್ಸಿಬಿಟ್ಸ್	–	ಎಂ.ಇ. ಅಥವಾ ಬಿ.ಇ.
ಬ್ಯಾಂಕ್ ವಿಟ್‌ನೆಸ್	–	ಬಿ.ಡಬ್ಲ್ಯೂ
ಮ್ಯಾನೇಜ್‌ಮೆಂಟ್ ವಿಟ್ನೆಸ್	–	ಎಂ.ಡಬ್ಲ್ಯೂ

ಸಾಕ್ಷಿ ಮೂಲಕ ಆರೋಪಗಳನ್ನು ದೃಢೀಕರಿಸುವುದು

(ಮಂಡನಾಧಿಕಾರಿಯು ಆರೋಪಿತನ ವಿರುದ್ಧವಿರುವ ಆರೋಪಗಳನ್ನು ದೃಢೀಕರಿಸಲು ತಾನು ಕರೆದು ತಂದಿರುವ ಮುಖ್ಯ ಸಾಕ್ಷಿಯನ್ನು ವಿಚಾರಣೆ ಮಾಡುವುದಕ್ಕೆ "ಎಕ್ಸಾಮಿನೇಷನ್ ಇನ್ ಚೀಫ್" ಎನ್ನುವರು).

ಮಂಡನಾಧಿಕಾರಿಯು ಮುಖ್ಯ ಸಾಕ್ಷಿಯ ವಿಚಾರಣೆ (ಎಗ್ಸಾಮಿನೇಷನ್ ಇನ್ ಚೀಫ್) ಮಾಡುವುದು.

ಈಗ ಪ್ರತಿವಾದಿಯ ಪ್ರತಿನಿಧಿಯು ಮೇಲಿನ ಮುಖ್ಯ ಸಾಕ್ಷಿಗೆ ಪಾಟೀ ಸವಾಲು (ಕ್ರಾಸ್ ಎಗ್ಸಾಮಿನೇಷನ್) ಮಾಡಬಹುದು.

ಮಂಡನಾಧಿಕಾರಿಯು ಮೇಲೆ ಹೇಳಿದಂತಹ ಮುಖ್ಯ ಸಾಕ್ಷಿಗೆ ಮುನ್ನಡೆಸುವ ಪ್ರಶ್ನೆಗಳನ್ನು (ಲೀಡಿಂಗ್ ಕ್ವೆಶ್ಚನ್) ಕೇಳಕೂಡದು. ಆದರೆ ಪ್ರತಿವಾದಿಯ ಪ್ರತಿನಿಧಿಗೆ ಈ ನಿರ್ಬಂಧವಿಲ್ಲ.

(ವಿಚಾರಣಾಧಿಕಾರಿಯು ಆರೋಪಿತ ನೌಕರನ ಮನಸ್ಸಿಗೆ ನೋವಾಗುವ ಪ್ರಶ್ನೆಗಳನ್ನು ಮತ್ತು ಆರೋಪಕ್ಕೆ ಸಂಬಂಧಿಸಿರದ ಪ್ರಶ್ನೆಗಳನ್ನು ಕೇಳಕೂಡದು ಎಂದು ಮಂಡನಾಧಿಕಾರಿಗೆ ತಿಳಿಸುವುದು.

ಪ್ರತಿವಾದಿಯ ಪ್ರತಿನಿಧಿಯು ಪುನಃ ಪಾಟೀ ಸವಾಲು ಮಾಡಲು ಅಭ್ಯಂತರವಿಲ್ಲ.

(ವಿಚಾರಣಾಧಿಕಾರಿಯು ವಿಚಾರಣೆಗೆ ಸಂಬಂಧಿಸಿದ ಎಲ್ಲಾ ದಾಖಲೆಗಳ ಸುಪರ್ದಿದಾರನಾಗಿರುತ್ತಾನೆ – ಕಸ್ಟೋಡಿಯನ್)

ಮೇಲಿನ ಎಲ್ಲಾ ವಿವರಗಳಿರುವ ಪುಟದ ಕೊನೆಗೆ ಸಾಕ್ಷಿ ಸಹಿತ ಎಲ್ಲರ ಸಹಿ ಪಡೆಯುವುದು.

(ಹಲವಾರು ಸಾಕ್ಷಿಗಳಿದ್ದಾಗ ಪ್ರತಿ ಸಾಕ್ಷಿಯ ಹೇಳಿಕೆಯನ್ನು ಪ್ರತ್ಯೇಕ ಪುಟದಲ್ಲಿ ಪಡೆದು ಸಹಿ ಹಾಕಿಸಿಕೊಳ್ಳುವುದು)

ಒಮ್ಮೆಗೆ ಒಬ್ಬನೇ ಸಾಕ್ಷಿಯನ್ನು ಕರೆದು, ವಿಚಾರಣೆ ಮಾಡುವುದು.

ಎಲ್ಲಾ ಆರೋಪಗಳನ್ನು ಮಂಡಿಸಿದ ಮೇಲೆ ಪ್ರತಿವಾದಿಯ ಪ್ರತಿನಿಧಿಯನ್ನು "ನೀವೇನು ಹೇಳುತ್ತೀರಿ" ಎಂದು ಕೇಳಬೇಕು.

(ಅವರ ಸಾಕ್ಷಿ, ದಾಖಲೆಗಳನ್ನು ಅವರು ತಂದು ಮಂಡಿಸುವುದು)

ಪ್ರತಿವಾದಿಯ ಸಾಕ್ಷಿ, ದಾಖಲೆಗಳನ್ನು ಈ ಕೆಳಗಿನಂತೆ ಗುರುತಿಸುವುದು.

ಡಿಫೆನ್ಸ್ ಎಗ್ಸಿಬಿಟ್ – ಡಿ.ಇ.

ಅಥವಾ

ಡಿಫೆನ್ಸ್ ವಿಟ್ನೆಸ್ – ಡಿ.ಡಬ್ಲ್ಯೂ

(ದೂರು ಹೊತ್ತವನು ಮೊದಲನೇ ಸಾಕ್ಷಿ ಆಗಬಹುದು)

ಈ ಮಧ್ಯೆ ವಿಚಾರಣಾಧಿಕಾರಿಯು ಆರೋಪಗಳಿಗೆ ಸಂಬಂಧಿಸಿದ ಯಾವುದೇ ಸಾಕ್ಷಿಗೆ ಸ್ಪಷ್ಟೀಕರಣ ಕೇಳಬಹುದು. ಆದರೆ ಪಾಟೀಸವಾಲು ಮಾಡುವಂತಿಲ್ಲ. (ಪಾಟೀ ಸವಾಲು ಮಾಡಿದರೆ ವಿಚಾರಣಾ ಕ್ರಮವು ಕಾನೂನು ಬಾಹಿರವಾಗಿ ರದ್ದಾಗುತ್ತದೆ)

ಮಂಡನಾಧಿಕಾರಿಯು ಇಂತಹ ಸಾಕ್ಷಿಗಳ ಪಾಟೀಸವಾಲು ಮಾಡಲು ಅಥವಾ ಬಿಡಲು ಸ್ವತಂತ್ರನು.

ಮೇಲೆ ಹೇಳಿದಂತೆ, ವಿಚಾರಣೆಯನ್ನು ಸಾಧ್ಯವಿದ್ದಷ್ಟು ಮಧ್ಯೆ ಮಧ್ಯೆ ನಿಲ್ಲಿಸದೇ ಸತತವಾಗಿ ಮುಂದುವರೆಸುವುದು.

ಈಗ ವಿಚಾರಣಾಧಿಕಾರಿಯು ಆರೋಪಿತನಿಗೆ "ನಿಮಗೆ ಇದಲ್ಲದೇ ಇನ್ನೇನಾದರೂ ಹೇಳುವುದಿದ್ದರೆ ಹೇಳುವುದು" ಎಂದು ಕೇಳುವುದು. ಆರೋಪಿತನು ಆಗಲೇ ತನಗೆ ಹೇಳಬೇಕಾಗಿರುವುದನ್ನು ಹೇಳಬಹುದು, ಕಾಲಾವಕಾಶ ಸಹ ಕೋರಬಹುದು. ಹೀಗೆ ಕಾಲಾವಕಾಶ ಕೋರಿದರೆ, ಅಂತಹ ಆರೋಪಿತನಿಗೆ ಸೂಕ್ತ ಕಾಲಾವಕಾಶ ನೀಡಬಹದು. ತನ್ನ ಹೇಳಿಕೆಯಲ್ಲಿ ಆರೋಪಿತನು ಆರೋಪ ಘಟಿಸಲು ಕಾರಣವಾದ ಸಂದರ್ಭವನ್ನು ಹೇಳಬಹುದು.

ನಂತರ ವಿಚಾರಣಾಧಿಕಾರಿಯು "ಈ ವಿಚಾರಣೆಯನ್ನು ನಾನು ಇಲ್ಲಿಗೇ ಮುಗಿಸುತ್ತೇನೆ" ಎಂದು ಹೇಳುವುದು. ಮತ್ತು ಮಂಡನಾಧಿಕಾರಿಗೆ ತಿಳಿಸಿ, ಸದರಿ ವಿಚಾರಣೆಯ ಸಂಕ್ಷಿಪ್ತ ವರದಿಯನ್ನು (ವಾದ–ಆರ್‌ಗ್ಯೂಮೆಂಟ್) ಮಂಡನಾಧಿಕಾರಿಯಿಂದ ೧೦.(ಹತ್ತು) ದಿನಗಳಲ್ಲಿ ಪಡೆಯುವುದು. ಹೀಗೆ ಪಡೆದ ಸಂಕ್ಷಿಪ್ತ ವರದಿಯ ಒಂದು ಪ್ರತಿಯನ್ನು ಪ್ರತಿವಾದಿಯ ಪ್ರತಿನಿಧಿಗೆ ಒದಗಿಸುವುದು . ಪ್ರತಿವಾದಿಯ ಪ್ರತಿನಿಧಿಯು ಸಹ ತನಗೆ ಸಂಬಂಧಿಸಿದಂತೆ ಸಂಕ್ಷಿಪ್ತ ವರದಿಯನ್ನು ಮುಂದಿನ (ಹತ್ತು) ದಿನಗಳಲ್ಲಿ ನೀಡುವುದು. ನಿಗದಿತ ದಿನಗಳ ಒಳಗೆ ಸದರಿ ವರದಿಯನ್ನು ನೀಡದಿದ್ದರೆ ಅಂತಹ ಪ್ರತಿವಾದಿಯ ಪ್ರತಿನಿಧಿಗೆ ತಿಳಿವಳಿಕೆ (ನೋಟೀಸ್) ನೀಡಿ, ವಿಚಾರಣಾಧಿಕಾರಿಯು ಅಂತಹ ಸಂಕ್ಷಿಪ್ತ ವರದಿಯನ್ನು ಪಡೆಯಬಹುದು.

ಮೇಲೆ ಹೇಳಿದ ದಾಖಲೆಗಳು, ಸಾಕ್ಷಿಗಳು ವರದಿಗಳು ಹೇಳಿಕೆಗಳು ಇವುಗಳ ಆಧಾರದ ಮೇಲೆ ವಿಚಾರಣಾಧಿಕಾರಿಯು ತನ್ನ ಅಂತಿಮ ವಿಚಾರಣಾ ವರದಿಯನ್ನು ತನ್ನನ್ನು ನೇಮಿಸಿದ ಶಿಸ್ತು ಕ್ರಮ ಅಧಿಕಾರಿಗಳಿಗೆ ಸಲ್ಲಿಸುವುದು. (ಆರೋಪಗಳು ಸಾಬೀತು ಆಗಿರುವ – ಆಗದಿರುವ ಬಗ್ಗೆ ಮಾತ್ರ ಹೇಳುವುದು. ಶಿಕ್ಷೆಯನ್ನು ಅಲ್ಲ.) .

*

ಅಶಕ್ತರ, ದುರ್ಬಲರ ಬ್ಯಾಂಕು: ಸ್ವಸಹಾಯ ಗುಂಪು

ಭಾರತ ರೈತರ ರಾಷ್ಟ್ರ, ಅದರಂತೆ ಬಡವರ ರಾಷ್ಟ್ರವೂ ಹೌದು. ಬಡವರ ಬಡತನವನ್ನು ಹೋಗಲಾಡಿಸಲು ಗ್ರಾಮಾಂತರ ಪ್ರದೇಶಗಳಲ್ಲಿ ಬ್ಯಾಂಕುಗಳ ಶಾಖೆಗಳನ್ನು ತೆರೆದು ಬಡವರಿಗೆ ಸಾಲ ನೀಡಿ ಅವರ ಆರ್ಥಿಕ ಮಟ್ಟ ಸುಧಾರಿಸಲು ಇತ್ತೀಚಿನ ವರ್ಷಗಳಲ್ಲಿ ಪ್ರಯತ್ನಿಸಲಾಯಿತಾದರೂ ನಿರೀಕ್ಷಿತ ಮಟ್ಟದಲ್ಲಿ ಈ ಯೋಜನೆ ಯಶಸ್ವಿಯಾಗಲಿಲ್ಲ. ಬಡವರಲ್ಲೂ ಬಡವರಾದವರಿಗೆ ತೀರಾ ಸಣ್ಣ ಮೊತ್ತದ ಸಾಲ ಸಾಕಾಗುತ್ತದೆ. ಇಂತಹ ಸಣ್ಣ ಮೊತ್ತದ ಸಾಲಗಳನ್ನು ಬ್ಯಾಂಕುಗಳು ವಿವಿಧ ಕಾರಣಗಳಿಗಾಗಿ ನೀಡಲು ಹಿಂಜರಿಯುತ್ತವೆ. ಈ ರೀತಿ ಬಡವರಲ್ಲಿ ಬಡವರಿಗೆ (ಅಶಕ್ತರಿಗೆ) ಸಣ್ಣ ಸಣ್ಣ ಮೊತ್ತದ ಸಾಲಗಳನ್ನು ನೀಡಿ ಅವರ ಆರ್ಥಿಕ ಮಟ್ಟ ಸುಧಾರಿಸಲು ಸ್ವಸಹಾಯ ಗುಂಪುಗಳ ರಚನೆ ಆಗುತ್ತಿದೆ. ೧೯೯೨ರಿಂದ ಪ್ರಾರಂಭವಾದ ನಬಾರ್ಡಿನ ಯೋಜನೆಯಿಂದಾಗಿ ಇಂತಹ ಗುಂಪುಗಳಿಗೆ ಧನಸಹಾಯ ದೊರೆಯುತ್ತಿದ್ದು, ಹಾಲಿ ಇಂತಹ ಗುಂಪುಗಳು ಭರದಿಂದ ಬೆಳೆಯುತ್ತಿರುವುದು ಸಂತಸಕರ.

ಸ್ವಸಹಾಯ ಗುಂಪು (SHG) ಹಾಗಂದರೇನು?

ಸಮಾನ ಆಸಕ್ತಿಯ, ಸಮಾನ ಆದಾಯದ ಐದರಿಂದ ಇಪ್ಪತ್ತು ಜನರು ತಮ್ಮ ಅಭಿವೃದ್ಧಿ ಮತ್ತು ಸಮಸ್ಯೆಗಳ ಪರಿಹಾರಕ್ಕಾಗಿ ಪ್ರತಿವಾರ, ಪ್ರತಿ ಹದಿನೈದು ದಿನ, ಅಥವಾ ತಿಂಗಳಿಗೆ ಒಮ್ಮೆ ನಿರ್ದಿಷ್ಟ ದಿನ, ಒಂದು ನಿಗದಿತ ಜಾಗದಲ್ಲಿ, ನಿಗದಿತ ಸಮಯದಲ್ಲಿ ಸಭೆ ಸೇರಿ, ತಮ್ಮದೇ ಚಿಕ್ಕಪುಟ್ಟ ಉಳಿತಾಯವನ್ನು ಬಂಡವಾಳ ಮಾಡಿಕೊಂಡು, ತಾವೇ ತೀರ್ಮಾನ ಮಾಡಿಕೊಂಡು, ಪರಸ್ಪರ ಸಹಾಯ ಮಾಡಿಕೊಳ್ಳುವ ಗುಂಪನ್ನು 'ಸ್ವಸಹಾಯ ಗುಂಪು' ಎಂದು ಕರೆಯುತ್ತಾರೆ.

ಹೀಗೆ ಗುಂಪಿನ ಎಲ್ಲ ಸದಸ್ಯರೂ ತಮ್ಮ ಗಳಿಕೆಯಲ್ಲಿ ತಮಗೆ ಸಾಧ್ಯವಾದ ಮಟ್ಟಿಗೆ ನಿರಂತರ ಉಳಿತಾಯಮಾಡಿ 'ಸಾಮಾನ್ಯ ನಿಧಿ' ಒಂದನ್ನು ಸ್ಥಾಪಿಸುತ್ತಾರೆ. ಈ 'ನಿಧಿ'ಯಿಂದ ಗುಂಪು ಸದಸ್ಯರಿಗೆ ತನ್ನದೇ ಆದ ಬಡ್ಡಿದರದಲ್ಲಿ (ಗರಿಷ್ಠ ೨೪%) ದಿನ ನಿತ್ಯದ ಖರ್ಚು–ವೆಚ್ಚಗಳಿಗೆ (ಚಿಕ್ಕಪುಟ್ಟ ಅಂಗಡಿ ತೆರೆಯಲು, ಸೈಕಲ್, ಟಿವಿ ರಿಪೇರಿ, ನ್ಯಾಯಬೆಲೆ ಅಂಗಡಿ, ಹಸು, ಎಮ್ಮೆ ಕೊಳ್ಳಲು ಇತ್ಯಾದಿ) ಗೌರವಯುತವಾಗಿ ನ್ಯಾಯದಿಂದ ಜೀವನ ನಿರ್ವಹಣೆ ಮಾಡಲು ಸಾಧ್ಯವಾಗುವ ಎಲ್ಲವಕ್ಕೂ ಸಾಲ ನೀಡುತ್ತದೆ.

ಉದ್ದೇಶ

ಮೇಲೆ ಹೇಳಿದಂತೆ ಸ್ವಸಹಾಯ ಗುಂಪುಗಳು ಗ್ರಾಮೀಣ ಬಡವರಿಗೆ ಪರ್ಯಾಯ ಸಾಲದ ವ್ಯವಸ್ಥೆ ಮಾಡುವುದರ ಜತೆಗೆ, ಈ ಗುಂಪುಗಳು ಬ್ಯಾಂಕು ಮತ್ತು ಗ್ರಾಮೀಣ ಕಡುಬಡವರ ಮಧ್ಯೆ

ಬಾಂಧವ್ಯ ಏರ್ಪಡಿಸುತ್ತವೆ ಮತ್ತು ಬ್ಯಾಂಕಿಂಗ್ ಚಟುವಟಿಕೆಗಳಿಂದ ವ್ಯವಸ್ಥಿತ ಉಳಿತಾಯ ಮತ್ತು ಸಾಲ ನಿರ್ವಹಣೆಗೆ ಪ್ರೋತ್ಸಾಹ ನೀಡುತ್ತವೆ. ಈ ಉದ್ದೇಶಕ್ಕಾಗಿಯೇ ಮುಖ್ಯವಾಗಿ ಸ್ವಸಹಾಯ ಗುಂಪುಗಳ ರಚನೆ ಆಗುತ್ತಿದ್ದರೂ, ಸಾರ್ವಜನಿಕ ಅನಿಷ್ಟಗಳಾದ ಮದ್ಯಪಾನ, ಧೂಮಪಾನ ಇತ್ಯಾದಿಗಳ ನಿರ್ಮೂಲನೆಯಲ್ಲೂ ಈ ಗುಂಪುಗಳು ವಿಶೇಷ ಪಾತ್ರ ವಹಿಸುತ್ತಿರುವುದು ಈ ಗುಂಪುಗಳ ಭಾರೀ ಯಶಸ್ಸಿಗೆ ಕಾರಣವಾಗಿದೆ. ವಿಶೇಷವಾಗಿ ಮಹಿಳೆಯರು ಈ ಯೋಜನೆಯಲ್ಲಿ ಹೆಚ್ಚಾಗಿ ಭಾಗವಹಿಸುತ್ತಿರುವುದರಿಂದ ಇದು ಸಾಧ್ಯವಾಗಿದೆ ಎನ್ನಬಹುದು!

ವ್ಯಾಪಕ ವಿಸ್ತಾರ

ಮೇಲೆ ಹೇಳಿದ ಕಾರಣಗಳಿಂದಾಗಿ ಭಾರೀ ವಿಜಯದೊಂದಿಗೆ ಬಾಂಗ್ಲಾ, ಫಿಲಿಫೈನ್ಸ್, ಚೀನಾ ದೇಶಗಳಿಂದ ಈ 'ಗುಂಪು' ವ್ಯವಸ್ಥೆ ಭಾರತಕ್ಕೆ ಬಂತು! ಈ ಸರಳ ಹಾಗೂ ಅರ್ಥಗರ್ಭಿತ 'ಬಡವರೊಡನೆ ಬ್ಯಾಂಕಿಂಗ್' ಪದ್ಧತಿಯನ್ನು ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು (ನಬಾರ್ಡ್) ಫೆಬ್ರವರಿ ೧೯೯೨ರಲ್ಲಿ ಒಂದು ಪ್ರಾಯೋಗಿಕ ಯೋಜನೆಯಾಗಿ ಆರಂಭಿಸಿತು. ಭಾರತೀಯ ರಿಜರ್ವ್ ಬ್ಯಾಂಕು, ಎಲ್ಲ ಬ್ಯಾಂಕುಗಳಿಗೆ ಈ ಯೋಜನೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಆದೇಶಿಸಿತು. ನಂತರ ಈ ಯೋಜನೆಯನ್ನು ಗ್ರಾಮೀಣ ಬ್ಯಾಂಕುಗಳಿಗೆ ಮತ್ತು ಸಹಕಾರೀ ವಲಯದ ಬ್ಯಾಂಕುಗಳಿಗೂ ವಿಸ್ತರಿಸಲಾಗಿದೆ. ತಮಿಳುನಾಡು, ಆಂಧ್ರ, ಕೇರಳ ಮತ್ತು ಕರ್ನಾಟಕದಲ್ಲಿ ಈ 'ಗುಂಪುಗಳು' ಹೆಚ್ಚು ಹೆಚ್ಚು ಜನಪ್ರಿಯ ಆಗುತ್ತಿವೆ. ಹೆಚ್ಚಿನ ಎಲ್ಲ ವಾಣಿಜ್ಯ ಬ್ಯಾಂಕುಗಳಲ್ಲಿ ಮತ್ತು ಗ್ರಾಮೀಣ ಬ್ಯಾಂಕು ಹಾಗೂ ಸಹಕಾರೀ ಬ್ಯಾಂಕುಗಳಲ್ಲೂ ಕರ್ನಾಟಕದಲ್ಲಿಯೂ ತೀವ್ರಗತಿಯಲ್ಲೇ ಪಾದಾರ್ಪಣೆ ಮಾಡಿದೆ. ಡಿಸಿಸಿ ಬ್ಯಾಂಕುಗಳ ಪೈಕಿ ಬೀದರ್, ದ.ಕನ್ನಡ, ಹಾಸನ, ಮಂಡ್ಯ ಮತ್ತು ಕೊಡಗು ಬ್ಯಾಂಕುಗಳು ಉತ್ತಮ ಸೇವೆಗೈದು ೨೦೦೧–೦೨ನೇ ಸಾಲಿನಲ್ಲಿ ಕ್ರಮವಾಗಿ ೧, ೨, ೩ ಹಾಗೂ ಪ್ರೋತ್ಸಾಹಕ ಬಹುಮಾನಗಳನ್ನು ನಬಾರ್ಡಿನಿಂದ ಪಡೆದಿವೆ.

ಗುಂಪಿನ ಗುಣ ಲಕ್ಷಣಗಳು

ಪ್ರಬುದ್ಧವಾದ ಸ್ವಸಹಾಯ ಗುಂಪಿನ ಗುಣಲಕ್ಷಣಗಳನ್ನು ಈ ಕೆಳಗಿನಂತೆ ಹೇಳಬಹುದಾಗಿದೆ.

- ಗುಂಪಿನ ಸದಸ್ಯರೆಲ್ಲರೂ ಸಮಾನ ಮನಸ್ಕರು.
- ಗುಂಪು ಆರು ತಿಂಗಳಿಗಿಂತ ಜಾಸ್ತಿಕಾಲದಿಂದ ಕಾರ್ಯನಿರತವಾಗಿದೆ.
- ಗುಂಪು ಪ್ರತಿವಾರ ಸಭೆ ಸೇರುತ್ತಿದೆ.
- ಗುಂಪಿನ ಸದಸ್ಯರ ಪೈಕಿ ಕನಿಷ್ಠ ೯೦% ಸದಸ್ಯರೆ ಸಭೆಯಲ್ಲಿ ಹಾಜರ್ ಇರುತ್ತಾರೆ.
- ಗುಂಪಿನಲ್ಲಿ ಹಾಜರಾತಿ, ಮೀಟಿಂಗ್ ಪುಸ್ತಕಗಳನ್ನು ನಿಯಮಿತವಾಗಿ ಹಾಗೂ ವಿವರವಾಗಿ ಬರೆಯಲಾಗುತ್ತಿದೆ.

- ಗುಂಪಿನ ಸಭೆಯಲ್ಲಿ ಎಲ್ಲ ಸದಸ್ಯರೂ ಚರ್ಚೆಯಲ್ಲಿ ಭಾಗವಹಿಸುತ್ತಿದ್ದಾರೆ.
- ಗುಂಪಿನ ಸಭೆಗಳಲ್ಲಿಯೇ ಉಳಿತಾಯದ ಮೊತ್ತ ಮತ್ತು ಸಾಲಗಳ ಕಂತಿನ ವಸೂಲಿ ಮಾಡಲಾಗುತ್ತಿದೆ.
- ಗುಂಪು ಪ್ರಜಾತಂತ್ರ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಎಲ್ಲ ತೀರ್ಮಾನಗಳೂ ಪಾರದರ್ಶಕವಾಗಿವೆ.
- ಗುಂಪಿನ ಸಭೆಯಲ್ಲಿ ಕೂಲಂಕಷವಾದ ಚರ್ಚೆ ಮತ್ತು ತೀರ್ಮಾನವಾದ ನಂತರವೇ ಸಾಲದ ವಿತರಣೆ ನಡೆಯುತ್ತಿದೆ.
- ಗುಂಪು ತನ್ನ ಸ್ವಂತ ಬಂಡವಾಳದ ಕನಿಷ್ಠ ೮೦% ರಷ್ಟನ್ನು ಸಾಲದ ರೂಪದಲ್ಲಿ ವಿನಿಯೋಗಿಸಿದೆ.
- ಗುಂಪಿನಲ್ಲಿ ಒಟ್ಟು ಸಾಲಗಳ ಪೈಕಿ ೧೦% ಕ್ಕಿಂತ ಕಡಿಮೆ ಸುಸ್ತಿ ಸಾಲಗಳಿವೆ.
- ಗುಂಪಿನಲ್ಲಿ ಎಲ್ಲ ಲೆಕ್ಕ ಪುಸ್ತಕಗಳನ್ನು ನಿಯಮಿತವಾಗಿ, ವಿವರವಾಗಿ ಬರೆಯಲಾಗುತ್ತಿದೆ.
- ಗುಂಪು ತನ್ನದೇ ಆದ ಕಾನೂನು ರೂಪಿಸಿಕೊಂಡು ಅದನ್ನು ಎಲ್ಲ ಸದಸ್ಯರಿಗೂ ತಿಳಿಸಿ ಅನುಷ್ಠಾನಗೊಳಿಸಿದೆ.

ಬ್ಯಾಂಕುಗಳಿಂದ ಸಾಲ

ಸ್ವಸಹಾಯ ಗುಂಪು ರಚನೆಯಾದ ಸುಮಾರು ಒಂದು ವರ್ಷದ ನಂತರ ಮಾತ್ರವೇ ಬ್ಯಾಂಕುಗಳು ಸಾಲ ನೀಡುತ್ತವೆ. ಬ್ಯಾಂಕುಗಳು ಸಾಲವನ್ನು ಎರಡು ವಿಧಾನಗಳಲ್ಲಿ ನೀಡಬಹುದು – ಒಂದು, ನೇರವಾಗಿ ಗುಂಪಿಗೇ ನೀಡಬಹುದು, ಅಥವಾ ಎರಡನೆಯದು, ಗುಂಪುಗಳ ಸದಸ್ಯರಿಗೇ, ಸದರಿ ಗುಂಪಿನ ಶಿಫಾರಸ್ಸಿನ ಮೇಲೆ ನೇರವಾಗಿ ನೀಡಬಹುದು! ಎಲ್ಲಿ ಬ್ಯಾಂಕು ಗುಂಪಿಗೆ ಸಾಲ ನೀಡುತ್ತದೋ, ಆಗ ಗುಂಪು ಬ್ಯಾಂಕಿನಲ್ಲಿ ಠೇವಣಿಸಿದ ಹಣದ ೨, ೩ ಅಥವಾ ೩ರಷ್ಟು ಸಾಲದ ಮೊಬಲಗು ಇರುತ್ತದೆ. ಈ 'ಗುಂಪು'ಗಳು ಗ್ರಾಮಮಟ್ಟದಲ್ಲಿ ಇರುವ ಸಹಕಾರ ಸಂಘಗಳಲ್ಲಿಯೂ ಖಾತೆ ತೆರೆದು ಇಂತಹ ಆರ್ಥಿಕ ಸಹಾಯ ದೊರಕಿಸಿಕೊಳ್ಳುತ್ತಿವೆ. ಹಾಗಾಗಿ ಸಹಕಾರೀ ಸಂಸ್ಥೆಗಳು ಗ್ರಾಮಾಂತರ ಮಟ್ಟದಲ್ಲಿ ಗ್ರಾಮೀಣರ ಏಳ್ಗೆಗೆ ವಹಿಸುತ್ತಿರುವ ಪಾತ್ರ ಮುಖ್ಯವಾದುದು. ಹೀಗೆ ನೀಡುವ ಸಾಲಕ್ಕೆ ಗುಂಪುಗಳಿಗೆ ೯% ಬಡ್ಡಿದರ ವಿಧಿಸಲಾಗುತ್ತಿದೆ. ಆದರೆ, ಗುಂಪುಗಳು ತನ್ನ ಸದಸ್ಯರಿಗೆ ೨೪% ವರೆಗೆ ಎಷ್ಟಾದರೂ ಬಡ್ಡಿದರ ವಿಧಿಸಲು ಸ್ವತಂತ್ರವಾಗಿವೆ.

ಪುನರ್ಧನ ಸೌಲಭ್ಯ

ಸ್ವಸಹಾಯ ಗುಂಪುಗಳಿಗೆ ಸಹಕಾರ ಸಂಘಗಳು, ಬ್ಯಾಂಕುಗಳು ನೀಡುವ ಸಾಲಕ್ಕೆ 'ನಬಾರ್ಡ್' ಪೂರ್ತಿಯಾಗಿ ಪುನರ್ಧನ (Refinance) ಸೌಲಭ್ಯ ನೀಡುತ್ತಿದೆ – ಅದೂ ೬.೫% ರಷ್ಟು ಕಡಿಮೆ ಬಡ್ಡಿದರದಲ್ಲಿ!

ಕೆಲವು ಮುಖ್ಯ ಮಾಹಿತಿಗಳು

'ನಬಾರ್ಡ್' ಪ್ರಕಟಿಸಿದ ಮಾಹಿತಿ ಪುಸ್ತಿಕೆ (ಬ್ರೋಶರ್) ಒಂದರ ಪ್ರಕಾರ, ಹೀಗೆ ೧೯೯೨–೯೩ರಿಂದ ಪ್ರಾರಂಭವಾದ ಸ್ವಸಹಾಯ ಗುಂಪುಗಳು ಪ್ರಾರಂಭದಲ್ಲಿ ಅಖಿಲ ಭಾರತ ಮಟ್ಟದಲ್ಲಿ (೯೨–೯೩ರಲ್ಲಿ) ಕೇವಲ ೨೫೫ ಇದ್ದರೆ ೩೧–೦೩–೨೦೦೩ರಲ್ಲಿ ಒಟ್ಟೂ ೭,೧೭,೩೬೦ ಆಗಿವೆ! ಹಾಗೆಯೇ ೩೧–೩–೦೩ ರ ವರೆಗೆ ಈ ಗುಂಪುಗಳಿಗೆ ರೂ. ೨,೦೪,೮೭೦ ಲಕ್ಷ ಬ್ಯಾಂಕು ಸಾಲ ನೀಡಲಾಗಿದ್ದು, ೧೧,೬೦೦,೦೦೦ ಕುಟುಂಬಗಳು ಇದರಿಂದ ಆರ್ಥಿಕ ಸಹಾಯ ಪಡೆದಿವೆ.

ಕುಟುಂಬ ಒಂದು ಸುಮಾರು ರೂ. ೧೭೬೬ ಸಾಲ ಸೌಲಭ್ಯ ಪಡೆದಿದೆ.

ಕರ್ನಾಟಕದ ಮಟ್ಟಿಗೆ ಹೇಳುವುದಾದರೆ, ದಿ. ೩೧–೦೩–೦೩ಕ್ಕೆ ಒಟ್ಟು ೧,೫೦,೯೭ ಗುಂಪುಗಳು ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿದ್ದು, ೬೨,೧೭೮ ಗುಂಪುಗಳು ರೂ. ೧೪೫.೬೦ ಕೋಟಿ ಸಾಲ ಪಡೆದಿವೆ. ೯.೪ ಲಕ್ಷ ಕುಟುಂಬಗಳಿಗೆ ಇದರಿಂದ ಸಾಲ ಸೌಲಭ್ಯ ದೊರಕಿದ್ದು, ೨೨.೫೧ ಲಕ್ಷ ಕುಟುಂಬಗಳು ಈ ಯೋಜನೆಯಲ್ಲಿ ಸೇರಿವೆ. ಈ ಪೈಕಿ ೮೯% ಮಹಿಳೆಯರೇ ಸಾಲ ಸೌಲಭ್ಯ ಪಡೆದಿದ್ದಾರೆ! ಈ ಯೋಜನೆಯಲ್ಲಿ ೨೧ ವಾಣಿಜ್ಯ ಬ್ಯಾಂಕುಗಳು, ೧೩ ಗ್ರಾಮೀಣ ಬ್ಯಾಂಕುಗಳು, ೨೦ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳು, ೭ ಇತರರು ಸೇರಿದ್ದಾರೆ. ಈ ಯೋಜನೆಯಲ್ಲಿ ಕರ್ನಾಟಕದ ೩,೧೫೯ (ಬ್ಯಾಂಕಿನ) ಶಾಖೆಗಳು ಮತ್ತು ೬೫೯ ಪ್ರಾಥಮಿಕ ಕೃಷಿ ಸಹಕಾರ ಸಂಘಗಳು (ಪ್ಯಾಕ್ಸ್) ಸೇರಿವೆ. ೨೭ ಜಿಲ್ಲೆಗಳು ಸೇರಿದ್ದು ೪೬೮ ಸರ್ಕಾರೇತರ ಸಂಸ್ಥೆಗಳೂ ಭಾಗವಹಿಸಿವೆ.

ಹೀಗೆ, ದೇಶದ ಗ್ರಾಮೀಣ ಪ್ರದೇಶದ ಅಭಿವೃದ್ಧಿ ಹಾಗೂ ಬಡವರು ಮತ್ತು ಹಿಂದುಳಿದ ವರ್ಗದ ಜನ ಆರ್ಥಿಕವಾಗಿ ಬಲವಾಗುವಂತೆ ಮಾಡಲು ಸ್ವಸಹಾಯ ಗುಂಪುಗಳು ಪೂರಕ ಕೆಲಸಮಾಡುವುದರಿಂದ ಬಡತನ ಹೋಗಲಾಡಿಸಿ "(ಗರೀಬಿ ಹಟಾವೋ") ಕಾರ್ಯಕ್ರಮಕ್ಕೆ ಈ ಗುಂಪುಗಳು ಮುಂಬರುವ ದಿನಗಳಲ್ಲಿ ನಿಜವಾದ ಅರ್ಥದಲ್ಲಿ "ವಿಶೇಷ ಪಾತ್ರ" ವಹಿಸಬಲ್ಲವು!

*

'ಸಹಕಾರ'ದ ಕೆಲವು ನುಡಿಮುತ್ತುಗಳು

---

೧. ಆಡು ಮುಟ್ಟದ ಸೊಪ್ಪಿಲ್ಲ
ಸಹಕಾರ ಇಲ್ಲದ ಕ್ಷೇತ್ರವಿಲ್ಲ

೨. ಶ್ರಮದ ದುಡಿಮೆಯೇ
ಇಂದಿನ ಅತ್ಯಂತ ಅಗತ್ಯ

೩. ಎಲ್ಲಿದೆಯೋ ಸಹಕಾರ
ಅಲ್ಲಿದೆ ಪರಿಹಾರ

೪. ನಾಳೆ ಮಾಡಬೇಕಾದುದನ್ನು ಇಂದೇ ಮಾಡೋಣ
ಇಂದು ಮಾಡಬೇಕಾದುದನ್ನು ಈಗಲೇ ಮಾಡೋಣ

೫. ನೌಕರರ ನಿಯತ್ತು
ಸಹಕಾರ ಸಂಸ್ಥೆಗಳ ಸಂಪತ್ತು

೬. ಕನ್ನಡವೇ ಉಸಿರು
ಸಹಕಾರವೇ ಪ್ರಾಣ

೭. ಸಜ್ಜನರ ಸಂಗವದು
ಹೆಜ್ಜೇನು ಸವಿದಂತೆ

೮. ಮಾತು ಕಡಿಮೆ
ಹೆಚ್ಚು ದುಡಿಮೆ

೯. 'ನಾನು ಎಲ್ಲರಿಗಾಗಿ
ಎಲ್ಲರೂ ನನಗಾಗಿ
ಇದುವೇ ಸಹಕಾರದ [illegible]

೧೦. ಸಹಕಾರ[illegible] [illegible]
ಸೇವೆ[illegible] ಲಾಭಕ್ಕಲ್ಲ

೧೧. ಕಾಯಕವೇ ಕೈಲಾಸ

೧೨. ಸಾಮಾಜಿಕ ಕಳಕಳಿಯೇ ಸಹಕಾರದ ಬುನಾದಿ
ಶೋಷಿತರನ್ನು ಮೇಲೆತ್ತುವುದೇ ಸಹಕಾರದ ಗುರಿ

೧೩. ಮಾತು ಬಲ್ಲವನಿಗೆ ಜಗಳವಿಲ್ಲ
ಊಟ ಬಲ್ಲವನಿಗೆ ರೋಗವಿಲ್ಲ
ಸಹಕಾರ ಬಲ್ಲವನಿಗೆ ಸಮಸ್ಯೆಗಳಿಲ್ಲ

೧೪. ಮಗು ಒಂದೇ ಸಾಕು
ಉಳಿತಾಯ ಬೇಕೇ ಬೇಕು

೧೫. ಸಹಕಾರ ಸಂಘ ಸಂಸ್ಥೆಗಳು ಹೆಚ್ಚಲಿ
ಬಹು ಜನರ ಬಾಳಿನಲಿ ದೀಪ ಹಚ್ಚಲಿ

೧೬. ಆರ್ಥಿಕ ಸ್ವಾತಂತ್ರ್ಯಕ್ಕೆ ಸಹಕಾರವೇ ಹೆಬ್ಬಾಗಿಲು

೧೭. ಸರ್ವರಿಗೆ ಸಮ ಬಾಳು
ಸರ್ವರಿಗೆ ಸಮಪಾಲು

೧೮. ರಾಜಕೀಯದಲ್ಲಿ ಸಹಕಾರ ಬೇಕು
ಸಹಕಾರದಲ್ಲಿ ರಾಜಕೀಯ ಬೇಡ

೧೯. ಮನಸ್ಸಿದ್ದಲ್ಲಿ ಮಾರ್ಗವಿದೆ
ಸಹಕಾರವಿದ್ದಲ್ಲಿ ನೆಮ್ಮದಿ ಇದೆ

೨೦. ಮಾತು ಬೆಳ್ಳಿ
ಮೌನ ಬಂಗಾರ
ಸಹಕಾರವೇ ವಜ್ರ

೨೧. ಕತ್ತಲೆಯಿಂದ ಬಿಡುಗಡೆಗೆ ಬೆಳಕು ಬೇಕು
ಶೋಷಣೆಯಿಂದ ಬಿಡುಗಡೆಗೆ ಸಹಕಾರ ಬೇಕು

೨೨. ವಿದ್ಯೆಯಿಂದ ವಿನಯ
ಸಹಕಾರದಿಂದ ವಿಜಯ

೨೩. ಕನ್ನಡದಲ್ಲಿ ಮಾತನಾಡೋಣ
ಸಹಕಾರದಿಂದ ಬಾಳೋಣ

೨೪. ಸಾಲ ಪಡೆಯುವುದು ಹಕ್ಕು
ಮರುಪಾವತಿ ಮಾಡುವುದು ಕರ್ತವ್ಯ

೨೫. ಬಂದ ಗ್ರಾಹಕರಿಗೆ ನಾವು ಸಹಕರಿಸಿ, ಉಪಕರಿಸುತ್ತಿಲ್ಲ
ಗ್ರಾಹಕರು ನಮ್ಮಲ್ಲಿಗೆ ಬಂದು ಅವರ ಸೇವೆ ಮಾಡಲು
ಅವಕಾಶ ಕಲ್ಪಿಸಿ, ಉಪಕರಿಸುತ್ತಿದ್ದಾರೆ

–ಮಹಾತ್ಮಾ ಗಾಂಧಿ

೨೬. ಮರ ಬೆಳೆಸಿ
ಹಣ ಉಳಿಸಿ

೨೭. ಸಹಕಾರತತ್ವ ಎನ್ನುವುದು
ದುರ್ಬಲರ ರಕ್ಷಾ ಕವಚವೇ ಹೊರತು
ಸಬಲರ ಆಯುಧವಲ್ಲ

೨೮. ಸಹಕಾರಿಗಳಲ್ಲಿ ಸಹಕಾರ
ಆಗುವುದು ಸಂಘದ ಉದ್ಧಾರ

೨೯. "ಸಹಕಾರಂ ಗೆಲ್ಗೆ"

*****

ಶುಭವಾಗಲಿ

ಜಗತ್ತು **ಒಂದನ್ನೊಂದು ತಾ ನಂಬಿ ಬದುಕಿದೆ,** ಒಬ್ಬ ಮತ್ತೊಬ್ಬನಿಗೆ ಸಹಕಾರಿ, ಜೀವನದ ಎಲ್ಲ ಕ್ಷೇತ್ರಗಳಲ್ಲೂ ಸಹಕಾರದ ಅಗತ್ಯವಿದೆ ; ವ್ಯಕ್ತಿಯ ಅಭಿವೃದ್ಧಿಯಲ್ಲಿ ಸಹಕಾರ ಮಹತ್ವದ ಪಾತ್ರ ವಹಿಸುತ್ತದೆ ; ಆರ್ಥಿಕ ಉನ್ನತಿಗಂತೂ ಸಹಕಾರಿಕ್ಷೇತ್ರದ ಬೆಂಬಲ ತೀರ ಅಗತ್ಯ **ಸಹಕಾರ** ಅದರ ಅರ್ಥವ್ಯಾಪ್ತಿ ಎಲ್ಲ ಕಡೆ ಹರಡಿರುವ ಬಗೆಗೆ ಈ ಕಿರು ಹೊತ್ತಗೆ ಉಪಯುಕ್ತ ಮಾಹಿತಿ ನೀಡುತ್ತದೆ. ಸಹಕಾರ ಚಳವಳಿಯ ಭವ್ಯ ಕಟ್ಟಡದ ಹಿತ್ತಿಲು, ಮುಂಜಗಲಿಯ ಎಲ್ಲ ಚಿತ್ರ ಸಂಕ್ಷಿಪ್ತವಾಗಿ ಈ ಕೃತಿಯಲ್ಲಿ ಅಡಕಗೊಂಡಿದೆ. ಸಹಕಾರ ಚಳವಳಿಯ ಭವಿಷ್ಯದ ರೂಪುರೇಷೆಗಳು, ಮಾರ್ಗಸೂಚಿಗಳು ಸೇರಿಕೊಂಡು ಕೃತಿ ಒಂದರ್ಥದಲ್ಲಿ ಪೂರ್ಣಚಿತ್ರ ನೀಡಲು ಪ್ರಯತ್ನಿಸಿರುವುದು ಸ್ತುತ್ಯರ್ಹ ಕಾರ್ಯ.

ಧರ್ಮದರ್ಶಿ ಹರಿಕೃಷ್ಣ ಪುನರೂರು
ಅಧ್ಯಕ್ಷರು